# ಅಧ್ಯಾಯ–III

## ಯೋಜನೆಗಳ ಅಡಿಯಲ್ಲಿ ಯೋಜಿತ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿದ್ದುದು

***ಸ್ಥಿತಿಗತಿಗಳು***

**3.1.** ಯೋಜನೆಗಳ (ಡಿಡಿಯುಜಿಜೆವೈ/ಸೌಭಾಗ್ಯ, ಆರ್‌ಜಿಜಿವಿವೈ ಹಾಗೂ ಡಿಡಿಜಿ) ಅಡಿಯಲ್ಲಿ ಅವುಗಳಿಗೆ ಇದ್ದಂತಹ ಮಂಜೂರಾತಿಗೆ ಪ್ರತಿಯಾಗಿ ಪರಿಮಾಣಗಳಿಗೆ ಸಂಬಂಧಿಸಿದಂತೆ ಅವುಗಳ ಸಾಧನೆಯು ಎಷ್ಟರ ಮಟ್ಟಿಗೆ ಆಗಿರುವುದು ಎಂಬುದನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ಸಂಖ್ಯೆ 3.1: ಫೆಬ್ರವರಿ 2022ರಲ್ಲಿದ್ದಂತೆ ಯೋಜನೆಗಳ ಅಡಿಯಲ್ಲಿನ ಸ್ಥಿತಿಗಳು**

| ಕ್ರಮ ಸಂಖ್ಯೆ | ಘಟಕಗಳು | ಮಂಜೂರಾಗಿದ್ದುದು | ಕಾರ್ಯಗತ ಗೊಳಿಸಿದ್ದುದು | ಅಧಿಕ/ ಕೊರತೆ (–) | ಸಾಧನೆ (ಶೇಕಡಾವಾರು) |
|---|---|---|---|---|---|
| **ದೀನದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುತ್ ಯೋಜನೆ** | | | | | |
| 1 | ಫೀಡರುಗಳನ್ನು ಪ್ರತ್ಯೇಕಗೊಳಿಸುವಿಕೆ (ಕೃಷಿ ಮತ್ತು ಕೃಷಿಯೇತರ) (ಸಿಕೆಎಂಗಳು) | 12,501.64 | 11,724.76 | (–) 772.38 | 93.79 |
| 2 | ಉಪ–ಪ್ರಸರಣ ಮತ್ತು ವಿತರಣಾ ಮೂಲಸೌಕರ್ಯಗಳನ್ನು ಬಲಪಡಿಸುವಿಕೆ ಮತ್ತು ಬಲವರ್ಧನೆ | | | | |
| i | ಬಳಕೆದಾರರ ವಿದ್ಯುತ್ ಸಂಪರ್ಕಕ್ಕೆ ಮೀಟರುಗಳ ಅಳವಡಿಕೆ (ಸಂಖ್ಯೆ) | 1,750,404 | 1,466,594 | (–) 2,83,810 | 83.79 |
| ii | ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳಿಗೆ (ಡಿಟಿಸಿಗಳು) ಮೀಟರುಗಳ ಅಳವಡಿಕೆ (ಸಂಖ್ಯೆ) | 24,400 | 23,790 | (–) 610 | 97.50 |
| iii | 11 ಕಿವ್ಯಾ ಫೀಡರುಗಳಿಗೆ ಮೀಟರುಗಳ ಅಳವಡಿಕೆ (ಸಂಖ್ಯೆ) | 5,582 | 0.00 | (–) 5,582 | 0.00 |
| iv | ವಿತರಣಾ ಟ್ರಾನ್ಸ್‌ಫಾರ್ಮರುಗಳು (ಸಂಖ್ಯೆ) | 12,360 | 12,301 | (–) 59 | 99.52 |
| v | 11 ಕಿವ್ಯಾ ವಿದ್ಯುತ್ ಮಾರ್ಗ (ಸಿಕೆಎಂಗಳು) | 4,394.40 | 10,432.98 | 6,039.00 | 237.42 |
| vi | ಎಲ್‌ಟಿ ವಿದ್ಯುತ್ ಮಾರ್ಗ (ಸಿಕೆಎಂಗಳು) | 5,075.56 | 6,278.41 | 1,203.00 | 123.70 |
| vii | ತೀವ್ರತರವಾದ ರೀತಿಯಲ್ಲಿ ಗ್ರಾಮಗಳ ವಿದ್ಯುತೀಕರಣ (ಸಂಖ್ಯೆ) | 21,172 | 13,949 | (–) 7,223 | 65.88 |
| 3 | ವಿದ್ಯುತೀಕರಣವಾಗಿರದ ಗ್ರಾಮಗಳ ವಿದ್ಯುತೀಕರಣ | 39 | 39 | 0.00 | 100.00 |
| 4 | ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ (ಸಂಖ್ಯೆ) | | | | |
| i | ಡಿಡಿಯುಜಿಜೆವೈ | 2,97,788 | 2,68,340 | (–) 29,448 | 90.11 |
| ii | ಸೌಭಾಗ್ಯ | 1,78,669 | 1,71,884 | (–) 6,785 | 96.20 |
| iii | ಆರ್‌ಜಿಜಿವಿವೈ XIIನೇ ಯೋಜನೆ (ವಿಕೇಂದ್ರೀಕೃತ ವಿತರಿಸಲ್ಪಟ್ಟಿರುವ ವಿದ್ಯುತ್ ಉತ್ಪಾದನೆ (ಡಿಡಿಜಿ) ಒಳಗೊಂಡಂತೆ) | 1,33,576 | 1,30,698 | (–) 2,878 | 97.85 |

**(ಮೂಲ: ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತಕ್ಕೆ (ಆರ್‌ಇಸಿ) ಸಲ್ಲಿಸಿದ್ದಂತಹ ಕರ್ನಾಟಕ ಸರ್ಕಾರದ ಫೆಬ್ರವರಿ 2022 ತಿಂಗಳಿನ ಪ್ರಗತಿಯ ವರದಿ ಹಾಗೂ ಯೋಜನೆಯನ್ನು ಪರಿಪೂರ್ಣಗೊಳಿಸಿರುವುದಕ್ಕೆ ಸಂಬಂಧಿತ ವರದಿಗಳು)**

11 ಕಿವ್ಯಾ ಮಾರ್ಗಗಳಲ್ಲಿ (ಶೇಕಡಾ 237.42), ಎಲ್‌ಟಿ ಮಾರ್ಗಗಳಲ್ಲಿ (ಶೇಕಡಾ 123.70), ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತ್ ಸಂಪರ್ಕದಲ್ಲಿ (ಶೇಕಡಾ 90.11 ರಿಂದ ಶೇಕಡಾ 97.85), ಫೀಡರುಗಳನ್ನು ಪ್ರತ್ಯೇಕಗೊಳಿಸುವಿಕೆಯಲ್ಲಿ (ಶೇಕಡಾ 93.79), ಹಾಗೂ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳಿಗೆ (ಡಿಟಿಸಿಗಳು) ಮೀಟರುಗಳನ್ನು ಅಳವಡಿಸುವುದರಲ್ಲಿ (ಶೇಕಡಾ 97.50) ಮೆಚ್ಚತಕ್ಕಂತಹ ರೀತಿಯಲ್ಲಿ ಸಾಧನೆಗಳು ಆಗಿದ್ದವಾದರೂ 11 ಕಿವ್ಯಾ ಫೀಡರುಗಳಿಗೆ ಮೀಟರುಗಳನ್ನು ಅಳವಡಿಸುವಲ್ಲಿ (ಯಾವುದೇ ಪ್ರಗತಿಯಾಗಿರಲಿಲ್ಲ), ತೀವ್ರತರವಾದ ರೀತಿಯಲ್ಲಿ ಗ್ರಾಮಗಳ ವಿದ್ಯುತೀಕರಣದಲ್ಲಿ (ಶೇಕಡಾ 34.12) ಹಾಗೂ ಬಳಕೆದಾರರುಗಳ ವಿದ್ಯುತ್ ಸಂಪರ್ಕಕ್ಕೆ ಮೀಟರುಗಳ ಅಳವಡಿಕೆಯಲ್ಲಿ (ಶೇಕಡಾ 16.21) ಕೊರತೆಗಳನ್ನು ಗಮನಿಸಲಾಯಿತು. ವಿಸಕಂಗಳು ತಮ್ಮ ಯೋಜನೆಗಳು ಪರಿಪೂರ್ಣಗೊಂಡಿದ್ದರ ಬಗ್ಗೆ ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತಕ್ಕೆ (ಆರ್‌ಇಸಿ) ಸಲ್ಲಿಸಿದ್ದಂತಹ ಪ್ರಸ್ತಾವನೆಗಳಲ್ಲಿ ಕಾರ್ಯಗತಗೊಳಿಸುವ ವೇಳೆಯಲ್ಲಿ ವಿದ್ಯುತೀಕರಣವನ್ನು ವಾಸ್ತವಿಕಗಳ ಅನುಸಾರ ನಡೆಸಲಾಗಿರುವುದು ಎಂಬುದಾಗಿ ಪ್ರಮಾಣೀಕರಿಸಿದ್ದವು. ಅಧಿಕ ಪ್ರಮಾಣದಲ್ಲಿ ಆಗಿದ್ದಂತಹ ಸಾಧನೆಯು ಅನುಮೋದಿತ ಸವಿವರ ಯೋಜನಾ ವರದಿಗಳ ಭಾಗವಾಗಿರದ ಹೆಚ್ಚುವರಿ

ಪರಿಮಾಣಗಳನ್ನು ಕಾರ್ಯಗತಗೊಳಿಸಿದ್ದರ ಕಾರಣ ಆಗಿದ್ದಿತು (***ಕಂಡಿಕೆ 2.1ರಲ್ಲಿ*** ದೃಷ್ಟಾಂತಗಳನ್ನು ತಿಳಿಸಲಾಗಿರುವುದು).

ಮುಂದುವರೆದು, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸಂಬಂಧಿಸಿದಂತೆ ಒಟ್ಟಾರೆ ಸಾಧನೆಯು ಶೇಕಡಾ 90.11 ಹಾಗೂ ಶೇಕಡಾ 97.85ರ ನಡುವೆ ಆಗಿದ್ದಿತಾದರೂ, ಚಾವಿಸನಿಕ್ಕೆ ಸಂಬಂಧಿಸಿದಂತೆ ಡಿಡಿಯುಜಿಜೆವೈ ಹಾಗೂ ಆರ್‌ಜಿಜಿವಿವೈ XIIನೇ ಯೋಜನೆ ಅಡಿಯಲ್ಲಿ ಗಮನಾರ್ಹವಾದಂತಹ ಕೊರತೆಗಳಿದ್ದವು (ಶೇಕಡಾ 22.72 ಹಾಗೂ ಶೇಕಡಾ 55.12) ಹಾಗೂ ಗುವಿಸಕಂಗೆ ಸಂಬಂಧಿಸಿದಂತೆ ಕೊರತೆಯು (ಶೇಕಡಾ 23.07 ಮತ್ತು ಶೇಕಡಾ 94.92) ಆಗಿದ್ದಿತು (***ಅನುಬಂಧ–3***). ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 11 ಕಿವ್ಯಾ ಫೀಡರುಗಳಿಗೆ ಮೀಟರು ಅಳವಡಿಕೆಯಲ್ಲಿನ ಶೂನ್ಯ ಪ್ರಗತಿಗೆ ಕಾರಣವೆಂದರೆ ಟೆಂಡರು ಪ್ರಕ್ರಿಯೆಯಲ್ಲಿನ ವಿಳಂಬಗಳ ಕಾರಣದಿಂದ ವಿಸಕಂಗಳು ಯೋಜನೆಯಿಂದ ಹಿಂದೆ ಸರಿದದ್ದು (***ಕಂಡಿಕೆ 3.6.1***).

ಯೋಜನೆಗಳ ಕಾರ್ಯಗತಗೊಳಿಸುವಿಕೆಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿರುವುದು.

## ದೀನದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುತ್ ಯೋಜನೆ ಅಡಿಯಲ್ಲಿ ಯೋಜನೆಗಳ ಕಾರ್ಯಗತಗೊಳಿಸುವಿಕೆ

### *ಕರ್ನಾಟಕ ಸಾರ್ವಜನಿಕ ಖರೀದಿಗಳು ಹಾಗೂ ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮದ ಅನುವುಗಳಿಂದ ಮಾರ್ಗಾಂತರಣ ಮಾಡಿ ಗುತ್ತಿಗೆಗಳನ್ನು ನೀಡಿದ್ದುದು*

**3.2**. ಸವಾಲು ಸ್ಪರ್ಧೆಯಲ್ಲಿನ ಕೊರತೆ (ಮೂರಕ್ಕಿಂತ ಕಡಿಮೆ), ಏಕೈಕ ಸವಾಲು, ಅನುಮಾನಾಸ್ಪದ ರೀತಿಯಲ್ಲಿ ಒಳಸಂಚು/ವಂಚನೆ, ಅಥವಾ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಮೌಲ್ಯಮಾಪನ ಮಾಡಲ್ಪಟ್ಟಂತಹ ಪ್ರತಿಕ್ರಿಯಾತ್ಮಕ ಸವಾಲು ಗಮನಾರ್ಹವಾದಂತಹ ರೀತಿಯಲ್ಲಿ ಅಂದಾಜು ವೆಚ್ಚಕ್ಕಿಂತ ಅಧಿಕವಾಗಿರುವುದು (ಇಂದಿನದಿನದನ್ನಾಗಿ ಮಾಡಲಾದ ಅಂದಾಜಿಗಿಂತ ಶೇಕಡ 10ಕ್ಕಿಂತ ಅಧಿಕವಾಗಿರುವುದು), ಇವೇ ಮುಂತಾದ ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಕಡಿಮೆ ದರಗಳಲ್ಲಿ ಪಡೆದುಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ದರಸಂಧಾನಗಳು ಸೂಕ್ತವಾಗಿರುತ್ತವೆ ಎಂಬುದಾಗಿ ಕರ್ನಾಟಕ ಸಾರ್ವಜನಿಕ ಖರೀದಿಗಳು ಹಾಗೂ ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮ, 1999 (ಸುತ್ತೋಲೆ ದಿನಾಂಕ 3 ಡಿಸೆಂಬರ್ 2002) ನಿರ್ದಿಷ್ಟಪಡಿಸಿರುತ್ತದೆ. ಅಂತಹ ಸಂದರ್ಭಗಳಲ್ಲಿಯೂ ಕೂಡ, ಪ್ರಥಮ ಆಯ್ಕೆಯು ಎಲ್ಲಾ ಟೆಂಡರುಗಳನ್ನು ತಿರಸ್ಕರಿಸುವುದು ಹಾಗೂ ಟೆಂಡರುಗಳನ್ನು ಹೊಸದಾಗಿ ಆಹ್ವಾನಿಸುವುದು.

ಲೆಕ್ಕಪರಿಶೋಧನೆಯು ಮಾದರಿ ಆಯ್ಕೆ ಮಾಡಿಕೊಂಡಿದ್ದಂತಹ 10 ಜಿಲ್ಲೆಗಳಲ್ಲಿ ಡಿಡಿಯುಜಿಜೆವೈ/ ಆರ್‌ಜಿಜಿವಿವೈ ಅಡಿಯಲ್ಲಿ ವಿಸಕಂಗಳು ಟೆಂಡರಿಗೆ ಇಡಲಾಗಿದ್ದಂತಹ ಅಂದಾಜುಗಳಿಗಿಂತ ಗಮನಾರ್ಹವಾದಂತಹ ಅಧಿಕ ದರಗಳಲ್ಲಿ ಅಂದರೆ ಶೇಕಡಾ 12.57ರಿಂದ ಶೇಕಡಾ 30.68ರವರೆಗಿನ ಅಧಿಕ ದರಗಳಲ್ಲಿ ಗುತ್ತಿಗೆಗಳನ್ನು ನೀಡಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮುಂದುವರೆದು, ಮಂಡ್ಯ ಜಿಲ್ಲೆಗಾಗಿ ಗುತ್ತಿಗೆಯನ್ನು ಸ್ವೀಕರಿಸಲಾಗಿದ್ದಂತಹ ಏಕೈಕ ಸವಾಲಿಗೆ (ಮೆ. ಸ್ಕಿಲ್ ಟೆಕ್ ಇಂಜಿನಿಯರ್ಸ್ ಅಂಡ್ ಕಂಟ್ರಾಕ್ಟರ್ಸ್) ನೀಡಲಾಗಿದ್ದಿತು. ವಿಕೇಂದ್ರೀಕೃತ ವಿತರಿಸಲ್ಪಟ್ಟಿರುವ ವಿದ್ಯುತ್ ಉತ್ಪಾದನೆ (ಡಿಡಿಜಿ) ಅಡಿಯಲ್ಲಿನ ಯೋಜನೆಗಳಿಗೆ ಸಂಬಂಧಿಸಿದಂತೆ, ನೀಡಲಾಗಿದ್ದಂತಹ ದರಗಳು ಶೇಕಡಾ 70.57ರಿಂದ ಶೇಕಡಾ 160.58ರವರೆಗೆ ಆಗಿದ್ದು ಗಮನಾರ್ಹವಾದಂತಹ ರೀತಿಯಲ್ಲಿ ಅಧಿಕವಾಗಿದ್ದವು. ಪರೀಕ್ಷಾ–ಪರಿಶೀಲನೆ ಮಾಡಲಾದಂತಹ 10 ಜಿಲ್ಲೆಗಳಲ್ಲಿ ಗುತ್ತಿಗೆಗಳನ್ನು ಎಷ್ಟು ಪ್ರೀಮಿಯಂನಲ್ಲಿ ನೀಡಲಾಗಿದ್ದವು ಎಂಬುದರ ಬಗ್ಗೆ ವಿವರಗಳನ್ನು ***ಅನುಬಂಧ–4*** ನೀಡುತ್ತದೆ.

ಡಿಡಿಯುಜಿಜೆವೈ/ಆರ್‌ಜಿಜಿವಿವೈ ಅಡಿಯಲ್ಲಿ ಎಲ್ಲಾ ಗುತ್ತಿಗೆಗಳನ್ನು ತಾಂತ್ರಿಕವಾಗಿ ಅರ್ಹತೆಯನ್ನು ಹೊಂದಿದ್ದಂತಹ ಸಂಸ್ಥೆಗಳಿಗೆ ನಿರ್ದೇಶಕರುಗಳ ಮಂಡಳಿಯ ಶಿಫಾರಸುಗಳ ಅನುಸಾರ ನೀಡಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವಂಬರ್ 2021). ಮಂಡ್ಯದಲ್ಲಿ ಸ್ವೀಕರಿಸಲಾಗಿದ್ದಂತಹ ಏಕೈಕ ಸವಾಲಿಗೆ ಗುತ್ತಿಗೆಯನ್ನು ನೀಡಿದ್ದಕ್ಕೆ ಸಂಬಂಧಿಸಿದಂತೆ, ಯೋಜನೆಯನ್ನು ಸಮಯೋಚಿತವಾಗಿ ಪೂರ್ಣಗೊಳಿಸುವ ಉದ್ದೇಶದಿಂದ ಆ ರೀತಿ ಗುತ್ತಿಗೆಯನ್ನು ನೀಡಲಾಯಿತು ಎಂಬುದಾಗಿ ತಿಳಿಸಿತು.

ಆದಾಗ್ಯೂ, ಗುತ್ತಿಗೆಗಳನ್ನು ಗಮನಾರ್ಹವಾದಂತಹ ಅಧಿಕ ಪ್ರೀಮಿಯಂಗೆ ನೀಡಲಾಗಿದ್ದಿತು, ಅದು ಕರ್ನಾಟಕ ಸಾರ್ವಜನಿಕ ಖರೀದಿಗಳು ಹಾಗೂ ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮ ಅನುವುಗಳ ಅನುಸಾರ ಆಗಿರಲಿಲ್ಲ ಎಂಬ ವಾಸ್ತವಾಂಶವು ಉಳಿದುಕೊಂಡಿದ್ದಿತು. ಉತ್ತರವು ಡಿಡಿಜಿಯಡಿಯಲ್ಲಿನ ಕಾಮಗಾರಿಗಳ ಬಗ್ಗೆ ಮೌನವಾಗಿತ್ತು.

**ಕಾಮಗಾರಿಗಳ ಗುತ್ತಿಗೆಗಳ ನೀಡಿಕೆ ಹಾಗೂ ಯೋಜನೆಗಳನ್ನು ಪೂರ್ಣಗೊಳಿಸಿದ್ದುದು**

**3.3.** ಡಿಡಿಯುಜಿಜೆವೈ ಅಡಿಯಲ್ಲಿನ ಮಾರ್ಗಸೂಚಿಗಳು (***ಕಂಡಿಕೆ 9 ಅಧ್ಯಾಯ II***) ಟರ್ನ್‌ಕೀ ಆಧಾರದ ಮೇರೆಗೆ ಕಾರ್ಯಗತಗೊಳಿಸುವಿಕೆಗೆ ಸಂಬಂಧಿಸಿದಂತೆ, ವಿದ್ಯುತ್ ಸರಬರಾಜು ಕಂಪನಿಗಳು ಗುತ್ತಿಗೆದಾರರುಗಳಿಗೆ ಕಾಮಗಾರಿಗಳ ನೀಡಿಕೆ ಪತ್ರವನ್ನು ನೀಡಿದ ದಿನಾಂಕದಿಂದ 24 ತಿಂಗಳುಗಳ ಒಳಗೆ ಯೋಜನೆಗಳನ್ನು ಪೂರ್ಣಗೊಳಿಸತಕ್ಕದ್ದು ಎಂಬುದಾಗಿ ನಿರ್ದಿಷ್ಟಪಡಿಸಿರುತ್ತವೆ. ಐದು ವಿಸಕಂಗಳ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿ ಲೆಕ್ಕಪರಿಶೋಧನೆಗೆ ಮಾದರಿ ಆಯ್ಕೆ ಮಾಡಿಕೊಳ್ಳಲಾದ ಜಿಲ್ಲೆಗಳ ಒಟ್ಟಾರೆ ಸ್ಥಿತಿಗತಿಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ:

**ಕೋಷ್ಟಕ ಸಂಖ್ಯೆ 3.2: ಕಾಮಗಾರಿಗಳ ನೀಡಿಕೆ ಹಾಗೂ ಯೋಜನೆಗಳನ್ನು ಪೂರ್ಣಗೊಳಿಸಿದ್ದರ ವಿವರಗಳು**

| ಕ್ರಮ ಸಂಖ್ಯೆ | ಯೋಜನೆ | ಗುತ್ತಿಗೆಗಳನ್ನು ನೀಡಿದ್ದು | ಪೂರ್ಣಗೊಳಿಸಲು ಗುರಿಯಾಗಿಸಿ ಕೊಳ್ಳಲಾಗಿದ್ದ ದಿನಾಂಕ | ವಾಸ್ತವಿಕವಾಗಿ ಪೂರ್ಣಗೊಳಿಸಲಾದ ದಿನಾಂಕ | ಪೂರ್ಣಗೊಳಿಸುವಲ್ಲಿನ ವಿಳಂಬ (ತಿಂಗಳುಗಳವರೆಗೆ) |
|---|---|---|---|---|---|
| 1 | ಡಿಡಿಯುಜಿಜೆವೈ | ಜನವರಿ 2017ರಿಂದ ಫೆಬ್ರವರಿ 2019 | ಜನವರಿ 2018ರಿಂದ ಸೆಪ್ಟಂಬರ್ 2019 | ಡಿಸೆಂಬರ್ 2018ರಿಂದ ಡಿಸೆಂಬರ್ 2020 | 37 |
| 2 | ಸೌಭಾಗ್ಯ | ನವಂಬರ್ 2018ರಿಂದ ಜನವರಿ 2019 | ಫೆಬ್ರವರಿ/ ಮಾರ್ಚ್ 2019 | ಮಾರ್ಚ್ 2019ರಿಂದ ಮಾರ್ಚ್ 2020 | 12 |
| 3 | ಆರ್‌ಜಿಜಿವಿವೈ | ನವಂಬರ್ 2014/ ಜನವರಿ 2015 | ನವಂಬರ್/ ಡಿಸೆಂಬರ್ 2016 | ಅವಧಿಗೆ ಮುಂಚಿತವಾಗಿ/ ಅಲ್ಪಾವಧಿಯಲ್ಲಿ ಮುಕ್ತಾಯಗೊಳಿಸಲಾಯಿತು/ ಡಿಸೆಂಬರ್ 2017 | 12 |
| 4 | ಡಿಡಿಜಿ | ಆಗಸ್ಟ್ 2015/ ಸೆಪ್ಟಂಬರ್ 2016 | ಮೇ/ ಅಕ್ಟೋಬರ್ 2016 | ಜುಲೈ 2016/ ಮಾರ್ಚ್ 2017 | 13 |

**(ಮೂಲ: ಆಸಕ್ತಿ ಪತ್ರಗಳು, ಸವಿವರ ಕಾಮಗಾರಿ ನೀಡಿಕೆಗಳು ಹಾಗೂ ಯೋಜನೆಗಳನ್ನು ಪೂರ್ಣಗೊಳಿಸಿದ್ದರ ಬಗ್ಗೆ ವರದಿಗಳು)**

ನಿರ್ದಿಷ್ಟ ದಿನಾಂಕಗಳನ್ನು ಮೀರಿದಂತೆ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ಸಂಭವಿಸಿದ್ದಂತಹ 12ರಿಂದ 37 ತಿಂಗಳುಗಳ ವಿಳಂಬಗಳು ಕ್ಷೇತ್ರ ಸಮೀಕ್ಷೆಯಲ್ಲಿನ ವಿವಿಧ ಲೋಪದೋಷಗಳು ಹಾಗೂ ತತ್ಪರಿಣಾಮವಾಗಿ ಕಾರ್ಯಗತಗೊಳಿಸುವ ವೇಳೆಯಲ್ಲಿ ವಾಸ್ತವಿಕ ಪರಿಮಾಣಗಳಲ್ಲಿ ಆದಂತಹ ಹೆಚ್ಚಳಗಳು/ಇಳಿಕೆಗಳು (***ಕಂಡಿಕೆ 2.1***) ಕಾಮಗಾರಿ ಆದೇಶಗಳನ್ನು ನೀಡುವಲ್ಲಿ ವಿಸಕಂಗಳಿಂದ ವಿಳಂಬಗಳು ಹಾಗೂ ಕಾರ್ಯಕ್ರಮಗಳ ಮೌಲ್ಯಮಾಪನ ಮತ್ತು ಸಮೀಕ್ಷಾ ವಿಧಾನಗಳ ನಕಾಶೆಯ (ಪಿಇಆರ್‌ಟಿ ಚಾರ್ಟ್) ಅನುಸಾರ ಕಾಲಮಿತಿಗಳಿಗೆ ಬದ್ಧತೆಯಿಂದ ಕೂಡಿರದಿದ್ದುದು (***ಕಂಡಿಕೆ 3.4***), ಸಂಬಂಧಿತ ಶಾಸನಬದ್ಧ ಪ್ರಾಧಿಕಾರಗಳಿಂದ ಪೂರ್ವಾನುಮತಿಗಳ ಕೊರತೆ (***ಕಂಡಿಕೆಗಳು 3.5, 3.7.1***) ಹಾಗೂ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ತಪ್ಪಿತಸ್ಥ ಗುತ್ತಿಗೆದಾರರುಗಳ ವಿರುದ್ಧ ಕ್ರಮಗಳ ಕೊರತೆ (***ಕಂಡಿಕೆ 3.8***), ಇತ್ಯಾದಿ ಪ್ರಮುಖ ಕಾರಣಗಳಿಂದ ಆಗಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

***ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ್ದು***

**3.4.** ಡಿಡಿಯುಜಿಜೆವೈ ಅಡಿಯಲ್ಲಿ ತುಮಕೂರು ಜಿಲ್ಲೆಯಲ್ಲಿ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಗಾಗಿ ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶವನ್ನು ಮೆ. ಟ್ರಾನ್ಸ್‌ಗ್ಲೋಬಲ್ ಪವರ್ ಲಿಮಿಟೆಡ್, ಇವರಿಗೆ ಒಟ್ಟಾರೆ ₹ 84.17 ಕೋಟಿ ಮೊತ್ತದಷ್ಟು ಗುತ್ತಿಗೆ ದರ/ಮೌಲ್ಯಕ್ಕೆ ಜನವರಿ 2019ರ ವೇಳೆಗೆ ಪೂರ್ಣಗೊಳಿಸತಕ್ಕದ್ದು ಎಂಬ ಷರತ್ತಿನೊಂದಿಗೆ ನೀಡಲಾಗಿದ್ದಿತು (ಜನವರಿ 2017). ಗುತ್ತಿಗೆಯ ಷರತ್ತುಗಳ ಅನುಸಾರ, ನಿರ್ದಿಷ್ಟ ಅವಧಿಯ ನಂತರದ ವಿಳಂಬಕ್ಕಾಗಿ ಗುತ್ತಿಗೆದಾರರು ಅಪೂರ್ಣಗೊಂಡಿರುವಂತಹ ಕಾಮಗಾರಿಗಳ ಭಾಗದ ಗುತ್ತಿಗೆ ದರ/ಮೌಲ್ಯದ ಶೇಕಡಾ ಅರ್ಧದಷ್ಟಕ್ಕೆ ಸಮನಾದ ಮೊತ್ತವನ್ನು ಒಟ್ಟಾರೆ ಗುತ್ತಿಗೆ ದರ/ಮೌಲ್ಯದ ಶೇಕಡಾ ಐದರ ಷರತ್ತಿಗೆ ಒಳಪಟ್ಟಂತೆ

ಪಾವತಿಸಲು ಬಾಧ್ಯರಾಗಿದ್ದರು.

ಕಾಮಗಾರಿಗಳನ್ನು ಡಿಸೆಂಬರ್ 2019ರಲ್ಲಿ 11 ತಿಂಗಳುಗಳ ವಿಳಂಬದೊಂದಿಗೆ ಪೂರ್ಣಗೊಳಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿಳಂಬಕ್ಕೆ ಈ ಕೆಳಗಿನ ಅಂಶಗಳು ಕಾರಣಗಳಾಗಿದ್ದವು:

- ಸವಿವರ ಯೋಜನಾ ವರದಿಯನ್ನು ತಯಾರಿಸುವ ವೇಳೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವಂತಹ ಕುಟುಂಬಗಳನ್ನು ಗುರುತಿಸಿರದಿದ್ದುದು (ಈ ಪಟ್ಟಿಯನ್ನು ಗುತ್ತಿಗೆದಾರರು ಕೇವಲ ಜುಲೈ/ಆಗಸ್ಟ್ 2017ರಲ್ಲಿ ಸ್ವೀಕರಿಸಿದ್ದರು);

- ಗುತ್ತಿಗೆದಾರರು ಸಾಮಗ್ರಿಗಳನ್ನು ಖರೀದಿಸುವಲ್ಲಿನ ವಿಳಂಬ (ಮೀಟರು ಪೆಟ್ಟಿಗೆ, ಇನ್ಸುಲೇಟರ್, ಕಂಡಕ್ಟರ್ ಮುಂತಾದ ಸಾಮಗ್ರಿಗಳನ್ನು ಕಾರ್ಯಕ್ರಮಗಳ ಮೌಲ್ಯಮಾಪನ ಮತ್ತು ಸಮೀಕ್ಷಾ ವಿಧಾನಗಳ ನಕಾಶೆಯ (ಪಿಇಆರ್‌ಟಿ ಚಾರ್ಟ್) ಅನುಸಾರ ನಿರ್ದಿಷ್ಟ ದಿನಾಂಕ ಜುಲೈ 2018ಕ್ಕೆ ಪ್ರತಿಯಾಗಿ ಆಗಸ್ಟ್ 2018ರಿಂದ ಮಾರ್ಚ್ 2019ರ ನಡುವೆ ಖರೀದಿಸಲಾಗಿದ್ದಿತು);

- ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಸಂಬಂಧಿತ ವಿಭಾಗೀಯ ಕಚೇರಿಗಳು ಕಾಮಗಾರಿ ಆದೇಶಗಳನ್ನು ನೀಡುವಲ್ಲಿನ ವಿಳಂಬ (ಕಾಮಗಾರಿಗಳ ಶೇಕಡಾ 6ರಿಂದ 27ರಷ್ಟಕ್ಕೆ ಕಾಮಗಾರಿಗಳ ಆದೇಶಗಳನ್ನು ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿತವಾಗಿದ್ದಂತಹ ದಿನಗಳ ನಂತರ ನೀಡಲಾಗಿದ್ದಿತು).

**ಕೋಷ್ಟಕ ಸಂಖ್ಯೆ 3.3: ಕಾಮಗಾರಿ ಆದೇಶಗಳನ್ನು ನೀಡುವಲ್ಲಿನ ವಿಳಂಬ ಹಾಗೂ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬ**

| ಕ್ರಮ ಸಂಖ್ಯೆ | ತಾಲ್ಲೂಕು | ಕಾಮಗಾರಿ ಆದೇಶಗಳ ಒಟ್ಟು ಸಂಖ್ಯೆ | | ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿತವಾಗಿದ್ದಂತಹ ದಿನಾಂಕದ ನಂತರ ಕಾಮಗಾರಿ ಆದೇಶಗಳನ್ನು ನೀಡಿದ್ದುದು | | | ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿತವಾಗಿದ್ದಂತಹ ದಿನಗಳ ನಂತರ ಪೂರ್ಣಗೊಂಡ ಕಾಮಗಾರಿ ಆದೇಶಗಳು | | |
|---|---|---|---|---|---|---|---|---|---|
| | | ಸಂಖ್ಯೆ | ಮೌಲ್ಯ | ಸಂಖ್ಯೆ | ಮೌಲ್ಯ | ಶೇಕಡಾವಾರು | ಸಂಖ್ಯೆ | ಮೌಲ್ಯ | ಶೇಕಡಾವಾರು |
| 1 | ತುಮಕೂರು | 411 | 23.65 | 111 | 8.04 | 27 | 250 | 15.54 | 61 |
| 2 | ಕೊರಟಗೆರೆ | 98 | 3.43 | 6 | 0.24 | 6 | 41 | 1.87 | 42 |
| 3 | ಸಿರಾ | 58 | 4.66 | 8 | 0.65 | 14 | 48 | 3.96 | 83 |

(ಮೂಲ: ಕಾಮಗಾರಿ ಆದೇಶಗಳು ಹಾಗೂ ವಿಭಾಗೀಯ ಕಚೇರಿಗಳಿಂದ ಮಾಹಿತಿ)

ಶೇಕಡಾ 42ರಿಂದ ಶೇಕಡಾ 83ರಷ್ಟು ಕಾಮಗಾರಿ ಆದೇಶಗಳನ್ನು ಕಾಮಗಾರಿಗಳು ಪೂರ್ಣಗೊಳ್ಳಲು ನಿಗದಿತವಾಗಿದ್ದ ದಿನಾಂಕದ ನಂತರ ಪೂರ್ಣಗೊಳಿಸಲಾಗಿದ್ದಿತು ಎಂಬುದನ್ನು ಗಮನಿಸಬಹುದು. ತಪ್ಪಿಸಬಹುದಾಗಿದ್ದಂತಹ ಈ ವಿಳಂಬಗಳು ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ಅನಗತ್ಯ ವಿಳಂಬಗಳಿಗೆ ಕಾರಣವಾದವು. ವಿಳಂಬಗಳಿಗಾಗಿ ಗುತ್ತಿಗೆದಾರರಿಗೆ ನೋಟೀಸುಗಳನ್ನು ನೀಡಲಾಯಿತಾದರೂ (ಆಗಸ್ಟ್ 2017 ಮತ್ತು ಸೆಪ್ಟೆಂಬರ್ 2019ರ ನಡುವೆ) ಗುತ್ತಿಗೆ ಷರತ್ತುಗಳ ಅನುಸಾರ ಸಮಾಪನ ನಷ್ಟಗಳನ್ನು ಗುತ್ತಿಗೆದಾರರಿಗೆ ವಿಧಿಸಿರಲಿಲ್ಲ.

ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತವು (ಆರ್‌ಇಸಿ) ಡಿಸೆಂಬರ್ 2020ರವರೆಗೂ ಕಾಲಾವಧಿಯನ್ನು ವಿಸ್ತರಿಸಿತಾದ್ದರಿಂದ, ಅದರಂತೆಯೇ ಟರ್ನ್‌ಕೀ ಗುತ್ತಿಗೆದಾರ ಸಂಸ್ಥೆಗಳಿಗೆ ನಿರ್ದೇಶನಗಳನ್ನು ನೀಡಲಾಗಿದ್ದಿತು ಹಾಗೂ ಕಾಮಗಾರಿಗಳನ್ನು ಮಾರ್ಚ್ 2020ಕ್ಕೆ ಮುಂಚಿತವಾಗಿ ಪೂರ್ಣಗೊಳಿಸಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವಂಬರ್ 2021)

ಉತ್ತರವು ಗುತ್ತಿಗೆದಾರರು ಮತ್ತು ಬೆಂವಿಸಕಂಯ ಕಡೆಯಿಂದ ವಿಳಂಬಕ್ಕೆ ನಿರ್ದಿಷ್ಟ ಕಾರಣಗಳಿಗೆ ಸಂಬಂಧಿಸಿದಂತೆ ಹಾಗೂ ಗುತ್ತಿಗೆದಾರರು ತಪ್ಪಿತಸ್ಥಗೊಂಡುದಕ್ಕಾಗಿ ತೆಗೆದುಕೊಳ್ಳಲಾದ ಕ್ರಮಗಳ ಬಗ್ಗೆ ಮೌನವಾಗಿದ್ದಿತು. ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತವು (ಆರ್‌ಇಸಿ) ಕಾಲಾವಧಿಯನ್ನು ವಿಸ್ತರಿಸಿದ್ದು ಗುತ್ತಿಗೆ ಷರತ್ತುಗಳ ಅನುಸಾರ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿರ್ದಿಷ್ಟಪಡಿಸಲಾಗಿದ್ದ ಕಾಲಾವಧಿಯ ಮೇಲೆ ಯಾವುದೇ ಸಂಬಂಧವಿರಲಿಲ್ಲ.

***ಫೀಡರು ಪ್ರತ್ಯೇಕಗೊಳಿಸುವಿಕೆ ಕಾಮಗಾರಿಗಳು***

**3.5**. ಫೀಡರು ಪ್ರತ್ಯೇಕಗೊಳಿಸುವಿಕೆಯು ಕೃಷಿ ಉದ್ದೇಶಕ್ಕಾಗಿ ವಿದ್ಯುತ್ ಬಳಕೆದಾರರುಗಳಿಗೆ ಮತ್ತು ಕೃಷಿಯೇತರ ಉದ್ದೇಶಕ್ಕಾಗಿನ (ಗೃಹ ಹಾಗೂ ಗೃಹೇತರ) ವಿದ್ಯುತ್ ಬಳಕೆದಾರರುಗಳಿಗೆ ಪ್ರತ್ಯೇಕವಾದಂತಹ ಸಮರ್ಪಿತ ಫೀಡರುಗಳ[21] ಮೂಲಕ ವಿದ್ಯುತ್ ಸರಬರಾಜು ಮಾಡುವುದಾಗಿರುತ್ತದೆ. ಪ್ರತ್ಯೇಕಗೊಳಿಸುವಿಕೆಯ ಪ್ರಮುಖ ಉದ್ದೇಶವು ಕೃಷಿ ಉದ್ದೇಶಕ್ಕಾಗಿ ವಿದ್ಯುತ್ ಬಳಸುವ ಬಳಕೆದಾರರುಗಳಿಗೆ ವಿದ್ಯುತ್ತಿನ ನಿಯಂತ್ರಿತ ಸರಬರಾಜು ಮಾಡುವುದಾಗಿರುತ್ತದೆ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಯೇತರ ಉದೇಶಕ್ಕಾಗಿ ವಿದ್ಯುತ್ ಉಪಯೋಗಿಸುವವರಿಗೆ ಅವಿರತ ವಿದ್ಯುತ್ ಸರಬರಾಜು ಮಾಡುವುದಾಗಿರುತ್ತದೆ.

ಮಂವಿಸಕಂಯು ಶಿವಮೊಗ್ಗದಲ್ಲಿ (624 ಹಳ್ಳಿಗಳನ್ನು ವ್ಯಾಪಿಸಿದಂತೆ 68 ಫೀಡರುಗಳು) ಹಾಗೂ ಚಿಕ್ಕಮಗಳೂರಿನಲ್ಲಿ (674 ಗ್ರಾಮಗಳನ್ನು ವ್ಯಾಪಿಸಿದಂತೆ 56 ಫೀಡರುಗಳು) ಫೀಡರು ಪ್ರತ್ಯೇಕಗೊಳಿಸುವಿಕೆ ಕಾಮಗಾರಿಯನ್ನು ಕಾರ್ಯಗತಗೊಳಿಸುವ ಸಲುವಾಗಿ ಟರ್ನ್‌ಕೀ ಆಧಾರದ ಮೇರೆಗೆ ಅನುಕ್ರಮವಾಗಿ ₹ 181.29 ಕೋಟಿ ಮತ್ತು ₹ 144.34 ಕೋಟಿ ಒಟ್ಟಾರೆ ಗುತ್ತಿಗೆ ದರಗಳಲ್ಲಿ ಮೆ. ಬಾಲಾಜಿ ಇಲೆಕ್ಟ್ರಿಕಲ್ಸ್ ಲಿಮಿಟೆಡ್, ಮುಂಬಯಿ ಮತ್ತು ಮೆ. ಏಷಿಯನ್ ಫ್ಯಾಬ್ ಟೆಕ್ ಲಿಮಿಟೆಡ್, ಬೆಂಗಳೂರು, ಇವರುಗಳಿಗೆ ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶವನ್ನು ನೀಡಿತು (ಮಾರ್ಚ್ 2017). ಗುತ್ತಿಗೆ ಅವಧಿಯು ಕಾಮಗಾರಿ ಆದೇಶವನ್ನು ನೀಡಿದ ದಿನಾಂಕದಿಂದ 15 ತಿಂಗಳುಗಳು ಆಗಿದ್ದಿತು, ಅಂದರೆ ಕಾಮಗಾರಿಗಳನ್ನು ಜುಲೈ 2018ರ ವೇಳೆಗೆ ಪೂರ್ಣಗೊಳಿಸತಕ್ಕದ್ದು ಎಂಬುದಾಗಿ ನಿರ್ದಿಷ್ಟಪಡಿಸಲಾಗಿದ್ದಿತು.

ಫೀಡರು ಪ್ರತ್ಯೇಕಗೊಳಿಸುವಿಕೆ ಕಾಮಗಾರಿಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ರೈಲ್ವೇ ಪ್ರಾಧಿಕಾರದಿಂದ ಸಮಯೋಚಿತವಾಗಿ ಅನುಮತಿಗಳನ್ನು ಪಡೆದುಕೊಳ್ಳದಿದ್ದ ಕಾರಣ ಕಾಮಗಾರಿಗಳನ್ನು ನಿಗದಿತ ದಿನಾಂಕದ ಒಳಗೆ ಪೂರ್ಣಗೊಳಿಸಲಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿದ್ಯುತ್ ಮಾರ್ಗ ಕಾರಿಡಾರಿನಲ್ಲಿ ರೈಲ್ವೇ ಮಾರ್ಗವು ಅಡ್ಡ ಹಾಯ್ದು ಹೋಗಿರುವ ವಾಸ್ತವಾಂಶವನ್ನು ಸವಿವರ ಯೋಜನಾ ವರದಿಯಲ್ಲಿ ತಿಳಿಸಲಾಗಿದ್ದಿತಾದರೂ, ಮಂವಿಸಕಂಯು ರೈಲ್ವೇ ಪ್ರಾಧಿಕಾರದಿಂದ ಅನುಮತಿಗಾಗಿ ಕೋರಿಕೆಯನ್ನು ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶವನ್ನು ನೀಡಿದ ದಿನಾಂಕದಿಂದ (ಮಾರ್ಚ್ 2017) ಹತ್ತು ತಿಂಗಳುಗಳು ಕಳೆದನಂತರ ಕೇವಲ ಫೆಬ್ರವರಿ 2018ರಲ್ಲಿಯಷ್ಟೇ ಸಲ್ಲಿಸಿದ್ದಿತು ಹಾಗೂ ರೈಲ್ವೇ ಮಾರ್ಗವನ್ನು ಪ್ರವೇಶಿಸುವ ಸಲುವಾಗಿ ಪಾವತಿಸಲು ಅಗತ್ಯವಿದ್ದಂತಹ ಶುಲ್ಕಗಳನ್ನು ಫೆಬ್ರವರಿ 2019ರಲ್ಲಿಯಷ್ಟೇ ಪಾವತಿಸಿದ್ದಿತು. ತತ್ಪರಿಣಾಮವಾಗಿ, ಶಿವಮೊಗ್ಗದಲ್ಲಿನ 68 ಫೀಡರುಗಳ ಪೈಕಿ 9 ಹಾಗೂ ಚಿಕ್ಕಮಗಳೂರಿನಲ್ಲಿನ 56 ಫೀಡರುಗಳ ಪೈಕಿ 7 ನಿರ್ದಿಷ್ಟಪಡಿಸಲಾಗಿದ್ದ ದಿನಾಂಕ ಜುಲೈ 2018ಕ್ಕೆ ಪ್ರತಿಯಾಗಿ ಮಾರ್ಚ್ 2022ರಲ್ಲಿ ಪೂರ್ಣಗೊಂಡಿದ್ದವು. ಈ ಫೀಡರುಗಳು ಎರಡೂ ಜಿಲ್ಲೆಗಳಲ್ಲಿ 204[22] ಗ್ರಾಮಗಳಿಗೆ ವಿದ್ಯುತ್ ಸರಬರಾಜನ್ನು ಪೂರೈಸುತ್ತವೆ. ಫೀಡರು ಪ್ರತ್ಯೇಕಗೊಳಿಸುವಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬವು 204 ಗ್ರಾಮಗಳಿಗೆ ಮೂರು ವರ್ಷಗಳಿಗೂ ಮೀರಿದ ಅವಧಿಗೆ 24 × 7 ವಿದ್ಯುತ್ ಸರಬರಾಜಿನಿಂದ ವಂಚಿಸಿದ್ದಿತು.

ಸವಿವರ ಯೋಜನಾ ವರದಿಯಲ್ಲಿ ಕಾಮಗಾರಿಗಾಗಿ ಅಗತ್ಯವಿದ್ದಂತಹ ರೈಲು ಮಾರ್ಗಗಳ ಅಡ್ಡಹಾಯ್ದುಹೋಗಿರುವಿಕೆಗಳನ್ನು ಅಂದಾಜಿನಂತೆ ಪ್ರಸ್ತಾಪಿಸಲಾಗಿದ್ದಿತು ಎಂಬುದಾಗಿ ಸರ್ಕಾರವು ತಿಳಿಸಿತು (ನವಂಬರ್ 2021). ರೈಲ್ವೇ ಪ್ರಾಧಿಕಾರದಿಂದ ಅನುಮತಿಗಳನ್ನು ಪಡೆದುಕೊಳ್ಳುವಲ್ಲಿನ ವಿಳಂಬದ ಕಾರಣ ಕಾಮಗಾರಿಗಳು ಪೂರ್ಣಗೊಳ್ಳುವಲ್ಲಿ ವಿಳಂಬವಾಯಿತು.

ಕಾಮಗಾರಿ ಆದೇಶಗಳನ್ನು ಗುತ್ತಿಗೆದಾರರಿಗೆ ನೀಡುವ ಮೊದಲು ಅಗತ್ಯವಿದ್ದಂತಹ ಅನುಮತಿಗಳನ್ನು ಪಡೆದುಕೊಳ್ಳುವಲ್ಲಿ ಕಾರ್ಯವಿಧಾನಗಳು ಒಳಗೊಂಡಿರುತ್ತವೆ ಎಂಬ ವಾಸ್ತವಾಂಶದ ಕಾರಣ ಸರ್ಕಾರವು ಸಮಯೋಚಿತವಾಗಿ ಅರ್ಜಿ ಸಲ್ಲಿಸುವುದನ್ನು ಖಚಿತಪಡಿಸಿಕೊಳ್ಳಬೇಕಿದ್ದಿತು ಹಾಗೂ ಅಗತ್ಯ

[21] ಫೀಡರುಗಳು ಎಂದರೆ ವಿದ್ಯುತ್ ಸರಬರಾಜು ವ್ಯವಸ್ಥೆಗಳಲ್ಲಿ ವಿದ್ಯುತ್ ಪ್ರಸರಣಗೊಳ್ಳುವ ವಿದ್ಯುತ್ ಪ್ರಸರಣಾ ಮಾರ್ಗಗಳು.

[22] ಶಿವಮೊಗ್ಗದಲ್ಲಿ 111 ಗ್ರಾಮಗಳನ್ನು ವ್ಯಾಪಿಸುವ 9 ಫೀಡರುಗಳು ಹಾಗೂ ಚಿಕ್ಕಮಗಳೂರಿನಲ್ಲಿ 93 ಗ್ರಾಮಗಳನ್ನು ವ್ಯಾಪಿಸುವ 7 ಫೀಡರುಗಳು.

ಅನುಮತಿಗಳನ್ನು ಪಡೆದುಕೊಳ್ಳಬೇಕಿದ್ದಿತು.

***ಮೀಟರುಗಳನ್ನು ಅಳವಡಿಸುವಿಕೆ***

**3.6**. ವಿದ್ಯುತ್ ಸರಬರಾಜಿನ ಊರ್ಜಿತಗೊಳ್ಳಬಲ್ಲಂತಹ ವಾಣಿಜ್ಯ ಕಾರ್ಯಾಚರಣೆಗೆ ಅನುಕೂಲ ಕಲ್ಪಿಸುವ ಸಲುವಾಗಿ, ಎಲ್ಲಾ ಪ್ರವರ್ಗಗಳ ವಿದ್ಯುತ್ ಬಳಕೆದಾರರ ಸ್ಥಳಗಳಲ್ಲಿ ಮೀಟರುಗಳನ್ನು ಅಳವಡಿಸುವುದು ಅತ್ಯಗತ್ಯವಾಗಿರುತ್ತದೆ. ವಿತರಣಾ ಟ್ರಾನ್ಸ್‌ಫಾರ್ಮರುಗಳು ಹಾಗೂ ಫೀಡರುಗಳಲ್ಲಿ ಮೀಟರುಗಳನ್ನು ಅಳವಡಿಸುವಿಕೆ ವ್ಯವಸ್ಥೆಯು ಸಮರ್ಪಕ ವಿದ್ಯುತ್ ಲೆಕ್ಕವನ್ನಿಡುವಿಕೆ ವ್ಯವಸ್ಥೆಯನ್ನು ನಿರ್ಮಿಸುವ ಸಲುವಾಗಿ ಅನುಕೂಲ ಕಲ್ಪಿಸುತ್ತದೆ ಹಾಗೂ ಅಧಿಕ ಪ್ರಮಾಣದಲ್ಲಿ ವಿದ್ಯುತ್ ನಷ್ಟ ಸಂಭವಿಸುತ್ತಿರುವ ಸ್ಥಳಗಳನ್ನು ಗುರುತಿಸಲು ಹಾಗೂ ವಿದ್ಯುತ್ ನಷ್ಟಗಳನ್ನು ತಗ್ಗಿಸುವ ಕಡೆಗೆ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಸಹಾಯಕವಾಗುತ್ತದೆ.

ವಿಸಕಂಗಳು ದೀನದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ ಅಡಿಯಲ್ಲಿ ಫೀಡರುಗಳಲ್ಲಿ ಹಾಗೂ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳಲ್ಲಿ (ಡಿಟಿಸಿ) ಹಾಗೂ ವಿದ್ಯುತ್ ಬಳಕೆದಾರರ ಸ್ಥಳಗಳಲ್ಲಿ ಮೀಟರು ಅಳವಡಿಸುವಿಕೆಯನ್ನು ಕೈಗೆತ್ತಿಕೊಂಡವು. ದೀನ್‌ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ ಅಡಿಯಲ್ಲಿ ಮಾಂಜೂರಾಗಿದ್ದಂತಹ ಒಟ್ಟಾರೆ ವೆಚ್ಚವು ಎಲ್ಲಾ ಐದು ವಿಸಕಂಗಳಿಗೂ ವ್ಯಾಪಿಸಿದಂತೆ ವಿದ್ಯುತ್ ಬಳಕೆದಾರರ ಸ್ಥಳಗಳಲ್ಲಿ, ಫೀಡರ್‌ಗಳಿಗಾಗಿ (5,582 ಫೀಡರುಗಳು[23]) ಹಾಗೂ ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳಿಗೆ (ಡಿಟಿಸಿ) ಮೀಟರು ಅಳವಡಿಸುವಿಕೆಗಾಗಿ ₹ 444.96 ಕೋಟಿ ಆಗಿದ್ದಿತು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲದ ಅಂಶಗಳನ್ನು ***ಕಂಡಿಕೆಗಳು 3.6.1 ರಿಂದ 3.6.2ರಲ್ಲಿ*** ಚರ್ಚಿಸಲಾಗಿದೆ.

***ಫೀಡರುಗಳಿಗೆ ಮೀಟರುಗಳನ್ನು ಅಳವಡಿಸುವುದನ್ನು ಪೂರ್ಣಗೊಳಿಸದಿದ್ದರಿಂದ ಯೋಜನೆಯಿಂದ ಹೊರಬರುವ ಆಯ್ಕೆ ಮಾಡಿಕೊಳ್ಳುವಲ್ಲಿಗೆ ದಾರಿ ಮಾಡಿಕೊಟ್ಟಿದ್ದುದು***

**3.6.1**. ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ನಿರ್ದೇಶನದ (ಮೇ 2016) ಅನುಸಾರ, ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತವು (ಕವಿಪ್ರನಿನಿ) ವಿಸಕಂಗಳ ಪರವಾಗಿ ಫೀಡರುಗಳಿಗೆ ಮೀಟರುಗಳನ್ನು ಅಳವಡಿಸುವ ಕಾಮಗಾರಿಯನ್ನು ಕಾರ್ಯಗತಗೊಳಿಸಿತು. 15,000 ಫೀಡರುಗಳಿಗೆ (ಡಿಡಿಯುಜಿಜೆವೈ ಅಡಿಯಲ್ಲಿ ಮಂಜೂರಾಗಿದ್ದ 5,582 ಫೀಡರುಗಳನ್ನು ಒಳಗೊಂಡಂತೆ) ಮೀಟರುಗಳನ್ನು ಅಳವಡಿಸುವ ಸಲುವಾಗಿ ಗುತ್ತಿಗೆಯನ್ನು ₹ 38.92 ಕೋಟಿ ಮೊತ್ತಕ್ಕೆ 18 ತಿಂಗಳುಗಳ ಒಳಗೆ (ಅಂದರೆ ಸೆಪ್ಟಂಬರ್ 2020ರ ಒಳಗೆ) ಪೂರ್ಣಗೊಳಿಸತಕ್ಕದ್ದು ಎಂಬು ಷರತ್ತಿನೊಂದಿಗೆ ನೀಡಲಾಯಿತು. ವಿಸಕಂಗಳು ಈ ಉದ್ದೇಶಕ್ಕಾಗಿ ₹ 30.79 ಕೋಟಿ ಮೊತ್ತವನ್ನು ಕವಿಪ್ರನಿನಿದೊಂದಿಗೆ ಠೇವಣಿ ಇಟ್ಟಿದ್ದವು (ನವಂಬರ್ 2019 ಮತ್ತು ಜನವರಿ 2021ರ ನಡುವೆ). ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು;

- ಪ್ರಪ್ರಥಮವಾಗಿ ಸವಾಲುದಾರರುಗಳ ಪೂರ್ವಾರ್ಹತೆ ಅಗತ್ಯತೆಗಳನ್ನು (ಮೀಟರುಗಳನ್ನು ತಯಾರಿಸುವಲ್ಲಿ ಸವಾಲುದಾರರ ಅನುಭವ, ಈ ಹಿಂದೆ ಸರಬರಾಜು ಮಾಡಿದ್ದ ಮೀಟರುಗಳ ಪರಿಮಾಣ/ಸಂಖ್ಯೆ, ಇತ್ಯಾದಿ) ಹಾಗೂ ಮೀಟರುಗಳ ತಾಂತ್ರಿಕವಾಗಿ ನಿರ್ದಿಷ್ಟನಿರೂಪಣೆಗಳನ್ನು (ಪರೀಕ್ಷಣಾ ಪ್ರಮಾಣಪತ್ರಗಳು, ತಿರುಚುವುದು ಹಾಗೂ ವಂಚಿಸುವುದರಿಂದ ಸಂರಕ್ಷಣೆ, ಕಾರ್ಯನಿರ್ವಹಣಾ ಪ್ರಮಾಣಪತ್ರಗಳು, ಇತ್ಯಾದಿ) ಖಚಿತಪಡಿಸಿಕೊಳ್ಳದೆಯೇ ಎರಡು ಟೆಂಡರುಗಳನ್ನು ಆಹ್ವಾನಿಸಲಾಯಿತು (ಮೊದಲ ಟೆಂಡರು: ನವಂಬರ್ 2016, ಎರಡನೆಯ ಟೆಂಡರು: ಏಪ್ರಿಲ್ 2017). ಈ ಷರತ್ತುಗಳನ್ನು ಡಿಸೆಂಬರ್ 2016, ಜುಲೈ 2017 ಮತ್ತು ಡಿಸೆಂಬರ್ 2017ರಲ್ಲಿ, ಹೀಗೆ ಮೂರು ಸಲ ಮಾರ್ಪಾಡು ಮಾಡಲಾಗಿದ್ದಿತು.

- ಮೊದಲ ಮತ್ತು ಎರಡನೆಯ ಟೆಂಡರುಗಳನ್ನು ಪ್ರತಿಕ್ರಿಯೆ ಇಲ್ಲದ ಸವಾಲುಗಳ ಕಾರಣ ರದ್ದುಗೊಳಿಸಲಾಯಿತು. ಕವಿಪ್ರನಿನಿವು ಜುಲೈ 2017ರಲ್ಲಿ ತೆರೆಯಲಾದಂತಹ ಎರಡನೆಯ ಸವಾಲು ತಾಂತ್ರಿಕ–ವಾಣಿಜ್ಯ ಸವಾಲಿನಲ್ಲಿ ಪ್ರತಿಕ್ರಿಯೆಯಿರದ ಎಂಬುದಾಗಿ ಕಂಡು ಬಂದ ನಂತರ

[23] ಬೆಂವಿಸಕಂ: 2,182; ಹುವಿಸಕಂ: 2,654; ಮಂವಿಸಕಂ: 591 ಹಾಗೂ ಗುವಿಸಕಂ: 155.

ಅದನ್ನು ರದ್ದುಗೊಳಿಸುವ ಸಲುವಾಗಿ ಆರು ತಿಂಗಳುಗಳನ್ನು (ಜುಲೈ 2017ರಿಂದ ಜನವರಿ 2018) ತೆಗೆದುಕೊಂಡಿತು. ಅದರಿಂದಾಗಿ, ಮೂರನೆಯ ಆಹ್ವಾನವು ವಿಳಂಬಗೊಂಡು ಜನವರಿ 2018ರಲ್ಲಿಯಷ್ಟೇ ಆಹ್ವಾನಿಸಲಾಯಿತು.

- ಗುತ್ತಿಗೆಯನ್ನು ಮಾರ್ಚ್ 2019 ರಲ್ಲಿ ಟೆಂಡರ್ ಆಹ್ವಾನದ ದಿನಾಂಕದಿಂದ (ಜನವರಿ 2018) 13 ತಿಂಗಳ ಅವಧಿಯ ನಂತರ ದಾಖಲೆಯಲ್ಲಿ ಸಮರ್ಥನೀಯ ಕಾರಣಗಳಿಲ್ಲದೆ ನೀಡಲಾಯಿತು.

- ಮೀಟರುಗಳನ್ನು ಅಳವಡಿಸುವ ಕಾಮಗಾರಿಗಳು 15,000 ಫೀಡರುಗಳ ಪೈಕಿ ಕೇವಲ 14,232 ಫೀಡರುಗಳಲ್ಲಿ ಪೂರ್ಣಗೊಳಿಸಲು ನಿಗದಿತವಾಗಿದ್ದ ದಿನಾಂಕದ (ಸೆಪ್ಟಂಬರ್ 2020) ನಂತರ 13 ತಿಂಗಳುಗಳು ಕಳೆದ ನಂತರ ಅಂದರೆ ಅಕ್ಟೋಬರ್ 2021ರಂತೆ ಪೂರ್ಣಗೊಂಡಿದ್ದವು ಮತ್ತು 738 ಮೀಟರ್‌ಗಳು ಬಾಕಿಯಿದ್ದವು. ಅಲ್ಲದೆಯೇ, ಮೀಟರುಗಳನ್ನು ಸಿಮ್ ಮತ್ತು ಮೋಡೆಮ್‌ನ ಅಳವಡಿಕೆಯ ಮೂಲಕ ಅಂತರ್ಕತಗೊಳಿಸಲಾಗಿರಲಿಲ್ಲ, ಅದರ ಹೊರತಾಗಿ ವಿದ್ಯುತ್ತಿನ ಪ್ರತಿಯೊಂದು ವಾಸ್ತವಿಕ ಸಮಯದ ಸರಬರಾಜನ್ನು ಸೆರೆ ಹಿಡಿಯುವುದು ಸಾಧ್ಯವಿರುವುದಿಲ್ಲ. ಇದು ಮೀಟರನ್ನು ಅಳವಡಿಸುವ ಉದ್ದೇಶವನ್ನೇ ವಿಫಲಗೊಳಿಸಿದ್ದಿತು.

ಈ ರೀತಿಯಾಗಿ ಗುತ್ತಿಗೆಯನ್ನು ನೀಡುವ ಸಂಪೂರ್ಣ ಪ್ರಕ್ರಿಯೆಯು ಮೂರು ವರ್ಷಗಳನ್ನು ತೆಗೆದುಕೊಂಡಿತು (ಮೇ 2016ರಿಂದ ಮಾರ್ಚ್ 2019). ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬವನ್ನು ಪರಿಗಣಿಸಿ ಹಾಗೂ ಸೆಪ್ಟಂಬರ್ 2019ರ ವೇಳೆಗೆ ಮೀಟರುಗಳನ್ನು ಅಳವಡಿಸುವ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು ಎಂಬುದಾಗಿ ಇಂಧನ ಮಂತ್ರಾಲಯ/ ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತದಿಂದ (ಆರ್‌ಇಸಿ) ಸ್ವೀಕರಿಸಲಾಗಿದ್ದಂತಹ ನಿರ್ದೇಶನಗಳನ್ನು (ಏಪ್ರಿಲ್ 2018/ಜುಲೈ 2019/ಆಗಸ್ಟ್ 2019) ದೃಷ್ಟಿಯಲ್ಲಿಟ್ಟುಕೊಂಡು ಹಾಗೂ ಕವಿಪ್ರನಿನಿದಿಂದ ಟೆಂಡರುಗಳನ್ನು ಆಹ್ವಾನಿಸುವಲ್ಲಿನ ಟೆಂಡರು ಪ್ರಕ್ರಿಯೆಅಲ್ಲಿನ ವಿಳಂಬವನ್ನು ಪರಿಗಣಿಸಿ,ಇಂಧನ ಇಲಾಖೆಯು ಫೀಡರುಗಳಿಗೆ ಮೀಟರುಗಳನ್ನು ಅಳವಡಿಸುವ ಕಾಮಗಾರಿಯನ್ನು ಡಿಡಿಯುಜಿಜೆವೈ ಅಡಿಯಲ್ಲಿ ಹಣಕಾಸನ್ನು ಕೋರುವ ಬದಲು ವಿಸಕಂಗಳು ಸ್ವಂತ ಹಣಕಾಸಿನಿಂದ ಫೀಡರುಗಳಿಗೆ ಮೀಟರುಗಳನ್ನು ಅಳವಡಿಸುವ ನಿರ್ಣಯಕ್ಕೆ ಬಂದಿತು (ನವೆಂಬರ್ 2019). ಅದರಂತೆಯೇ, ವಿಸಕಂಗಳು ಸಹಾಯಧನದ ಪಾವತಿಯನ್ನು ಕೋರದಿರಲು ತೀರ್ಮಾನಿಸಿದವು ಹಾಗೂ ಯೋಜನೆಯಿಂದ ಹೊರಬರುವ ಆಯ್ಕೆ ಮಾಡಿಕೊಂಡವು. ಅದರಿಂದಾಗಿ ವಿಸಕಂಗಳು ಡಿಡಿಯುಜಿಜೆವೈ ಅಡಿಯಲ್ಲಿ 5,582 ಫೀಡರುಗಳಿಗೆ ಮೀಟರುಗಳನ್ನು ಅಳವಡಿಸುವ ಕಾಮಾಗಾರಿಯ ಮೇಲೆ ಭರಿಸಲಾಗಿದ್ದಂತಹ ₹ 14.48 ಕೋಟಿ[24] ಮೊತ್ತದಷ್ಟು ಹಣಕಾಸನ್ನು ಯೋಜನೆಯಿಂದ ಪಡೆದುಕೊಳ್ಳುವ/ಉಪಯೋಗಿಸಿಕೊಳ್ಳುವ ಅವಕಾಶವನ್ನು ಕಳೆದುಕೊಂಡವು.

ಸರ್ಕಾರವು ತನ್ನ ಉತ್ತರದಲ್ಲಿ ಕವಿಪ್ರನಿನಿದಿಂದ ಟೆಂಡರು ಪ್ರಕ್ರಿಯೆಯಲ್ಲಿ ವಿಳಂಬಗೊಂಡಿದ್ದರಿಂದ ವಿಸಕಂಗಳು ಇಂಧನ ಮಂತ್ರಾಲಯದಿಂದ ಶೇಕಡಾ 15ರಷ್ಟು ಹೆಚ್ಚುವರಿ ಅನುದಾನವನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ಡಿಡಿಯುಜಿಜೆವೈಯಿಂದ ಹೊರಬಂದವು ಹಾಗೂ ಫೀಡರುಗಳಿಗೆ ಮೀಟರುಗಳನ್ನು ಅಳವಡಿಸುವ ಕಾಮಗಾರಿಯನ್ನು ನಡೆಸಿಕೊಂಡು ಹೋಗುವ ಸಲುವಾಗಿ ತಮ್ಮದೇ ಆದಂತಹ ಸ್ವಂತ ಹಣಕಾಸನ್ನು ಉಪಯೋಗಿಸಿಕೊಳ್ಳುವ ಆಯ್ಕೆಯನ್ನು ಮಾಡಿಕೊಂಡವು ಎಂಬುದಾಗಿ ತಿಳಿಸುತ್ತಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದ ಅಂಶವನ್ನು ಖಚಿತಪಡಿಸಿತು (ನವೆಂಬರ್ 2021/ಏಪ್ರಿಲ್ 2022). ರಾಷ್ಟ್ರೀಯ ಮಟ್ಟದಲ್ಲಿ ಎಲ್ಲಾ ನಗರ ಮತ್ತು ಗ್ರಾಮೀಣ 11 ಕಿವ್ಯಾ ಫೀಡರುಗಳನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ಆರ್‌ಇಸಿಪಿಡಿಸಿಎಲ್ ರಾಷ್ಟ್ರೀಯ ಫೀಡರು ಮೇಲ್ವಿಚಾರಣಾ ವ್ಯವಸ್ಥೆಯನ್ನು ಕಾರ್ಯಗತಗೊಳಿಸುವ ಪ್ರಕ್ರಿಯೆಯಲ್ಲಿದ್ದಿತು ಎಂಬುದಾಗಿಯೂ ತಿಳಿಸಲಾಗಿದ್ದಿತು.

***ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರುಗಳಿಗೆ ಮೀಟರುಗಳನ್ನು ಅಳವಡಿಸುವಿಕೆ***

**3.6.2.** ಕರ್ನಾಟಕ ವಿದ್ಯುತ್ ವಿತರಣಾ ಸಂಹಿತೆ 2015ರ ಅನುಸಾರ, ವಿದ್ಯುತ್ ವಿತರಣಾ

---

[24] ₹ 38.92 ಕೋಟಿ / 15,000 × 5,582.

ಟ್ರಾನ್ಸ್‌ಫಾರ್ಮರು ಕೇಂದ್ರಗಳ (ಡಿಟಿಸಿ) ಮಟ್ಟದಲ್ಲಿ ಮೀಟರುಗಳನ್ನು ಅಳವಡಿಸಬೇಕಿದ್ದಿತು ಹಾಗೂ ಅಧಿಕ ವಿದ್ಯುತ್ ನಷ್ಟದ ಸ್ಥಳಗಳನ್ನು/ಕ್ಷೇತ್ರಗಳನ್ನು ಗುರುತಿಸುವ ಸಲುವಾಗಿ ಹಾಗೂ ವಾಣಿಜ್ಯ ಮತ್ತು ತಾಂತ್ರಿಕ ನಷ್ಟಗಳನ್ನು ತಗ್ಗಿಸಲು ಅನುಕೂಲ ಕಲ್ಪಿಸುವ ಸಲುವಾಗಿ ತಿಂಗಳುವಾರು ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರವಾರು (ಡಿಟಿಸಿ) ವಿದ್ಯುತ್ ಲೆಕ್ಕಪರಿಶೋಧನೆಯನ್ನು ನಡೆಸಬೇಕಿದ್ದಿತು. ಮುಂದುವರೆದು, ಪ್ರಮಾಣಕ ಸವಾಲು ದಾಖಲೆಯ (ಸ್ಟಾಂಡರ್ಡ್ ಬಿಡ್ ಡಾಕ್ಯುಮೆಂಟ್) (ಸಂಪುಟ I, ವಿಭಾಗ VII ಕಾಮಗಾರಿಯ ವ್ಯಾಪ್ತಿ) ಅನುಸಾರ, ಮೀಟರು ಮಾಹಿತಿ ವಿನಿಮಯ ಮತ್ತು ರಿಮೋಟ್ ಮೀಟರು ಓದುವಿಕೆಗೆ ಅನುಕೂಲ ಕಲ್ಪಿಸುವ ಸಲುವಾಗಿ ಜಿಪಿಆರ್‌ಎಸ್[25] ಕಂಪಾಟಿಬಲ್ ಮೋಡೆಮ್‌ನೊಂದಿಗೆ ಮೀಟರುಗಳು ಡಿಎಲ್‌ಎಂಎಸ್[26] (ಸಾಧನ ಭಾಷೆ ಸಂದೇಶ ನಿರ್ದಿಷ್ಟನಿರೂಪಣೆ) ಅನುಸಾರ ಆಗಿರಬೇಕಿದ್ದಿತು.

ವಿಸಕಂಗಳು ಡಿಡಿಯುಜಿಜೆವೈ ಅಡಿಯಲ್ಲಿ ಒಟ್ಟಾರೆ ₹ 62.87 [27] ಕೋಟಿ ಮೊತ್ತದಷ್ಟು ವೆಚ್ಚವನ್ನು ಭರಿಸಿ 30,069 ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳಿಗೆ (ಡಿಟಿಸಿಗಳು) ಮೀಟರು ಅಳವಡಿಕೆಯನ್ನು ಮಾಡಿದ್ದವು. ಕಾಮಗಾರಿಗಳು ಮಾರ್ಚ್ 2020/ಮಾರ್ಚ್ 2021ರಲ್ಲಿ ಪೂರ್ಣಗೊಂಡಿದ್ದವು. ಡಿಡಿಯುಜಿಜೆವೈ ಅಡಿಯಲ್ಲಿ ಪರೀಕ್ಷಾ–ಪರಿಶೀಲನೆ ಮಾಡಲಾದ ಎಂಟು ಜಿಲ್ಲೆಗಳಲ್ಲಿ 28 ಮೀಟರುಗಳನ್ನು ಅಳವಡಿಸಲಾದ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳ (ಡಿಟಿಸಿಗಳು) ಸಂಖ್ಯೆ ಹಾಗೂ ಭರಿಸಲಾದ ವೆಚ್ಚಗಳ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 3.4: ಡಿಡಿಯುಜಿಜೆವೈ ಅಡಿಯಲ್ಲಿ ಪರೀಕ್ಷಾ–ಪರಿಶೀಲನೆ ಮಾಡಲಾದ ಜಿಲ್ಲೆಗಳಲ್ಲಿ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳಿಗೆ (ಡಿಟಿಸಿಗಳು) ಮೀಟರುಗಳನ್ನು ಅಳವಡಿಸಿದ್ದರ ವಿವರಗಳು**

| ಕ್ರಮ ಸಂಖ್ಯೆ | ವಿಸಕಂ | ಯೋಜನೆಗಳು | ಡಿಟಿಸಿಗಳ ಸಂಖ್ಯೆ | ಭರಿಸಲಾದ ಒಟ್ಟು ವೆಚ್ಚ (₹ ಕೋಟಿಯಲ್ಲಿ) |
|---|---|---|---|---|
| 1 | ಬೆಂವಿಸಕಂ | ತುಮಕೂರು | 1,211 | 1.56 |
| 2 | ಚಾವಿಸನಿ | ಮಂಡ್ಯ | 5,074 | 11.34 |
| 3 | ಗುವಿಸಕಂ | ರಾಯಚೂರು | 1,503 | 3.68 |
| 4 | ಹುವಿಸಕಂ | ಹಾವೇರಿ | 66 | 0.16 |
| 5 | ಮಂವಿಸಕಂ | ಶಿವಮೊಗ್ಗ, ಚಿಕ್ಕಮಗಳೂರು | 2,969 | 4.16 |
| **ಒಟ್ಟು** | | | **10,823** | **20.90** |

**(ಮೂಲ: ಯೋಜನೆ ಪರಿಪೂರ್ಣಗೊಂಡಿರುವುದಕ್ಕೆ ಸಂಬಂಧಿತ ವರದಿಗಳು ಹಾಗೂ ಸವಿವರ ಕಾಮಗಾರಿ ನೀಡಿಕೆಗಳು)**

ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಬೆಂವಿಸಕಂ, ಹುವಿಸಕಂ ಮತ್ತು ಮಂವಿಸಕಂಯಲ್ಲಿ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳನ್ನು (ಡಿಟಿಸಿಗಳು) ವಿದ್ಯುತ್ ಬಳಕೆಯನ್ನು ಸ್ವಯಂಚಾಲಿತವಾಗಿ ಓದುವ ಅನುಕೂಲತೆಗಾಗಿ ಡಿಎಲ್‌ಎಂಎಸ್ ವ್ಯವಸ್ಥೆಯೊಂದಿಗೆ ಸ್ಥಾಪಿಸಲಾಗಿರುವುದಾದರೂ, ಈ ಮೀಟರುಗಳಿಗೆ ಸಂದೇಶ ನೀಡಬಹುದಾದ ಸಾಧನಗಳನ್ನು (ಸಿಮ್ ಮತ್ತು ಮೋಡೆಮ್) ಒದಗಿಸಿರುವುದಿಲ್ಲ. ಅದರಿಂದಾಗಿ, ಡಿಎಲ್‌ಎಂಎಸ್ ಮೀಟರುಗಳ ಅಳವಡಿಕೆಯು ಉದ್ದೇಶವನ್ನು ಈಡೇರಿಸುವುದಿಲ್ಲ ಹಾಗೂ ಈ ನಿಟ್ಟಿನಲ್ಲಿ ಮಾಡಲಾದ ಹೂಡಿಕೆಯನ್ನು ಕಡಿಮೆ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಲ್ಪಟ್ಟುತ್ತಾ ಉಳಿದಿರುವುದು.

- ಚಾವಿಸನಿವು ಮಾರ್ಚ್ 2021ರಲ್ಲಿದ್ದಂತೆ 18,831 ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು

[25] ಒಂದು ಜಿಪಿಆರ್‌ಎಸ್ (ಸಾಮಾನ್ಯ ಪಾಕೇಟು ರೇಡಿಯೋ ಸೇವೆ) ಮೋಡೆಮ್ ಜಿಎಸ್‌ಎಂ ಮೋಡೆಮ್ ಆಗಿದ್ದು ಮಾಹಿತಿ ಪ್ರಸರಣಕ್ಕಾಗಿ ಜಿಪಿಆರ್‌ಎಸ್ ತಂತ್ರಜ್ಞಾನಕ್ಕೆ ಬೆಂಬಲವನ್ನು ನೀಡುತ್ತದೆ.

[26] ಸಾಧನ ಭಾಷೆ ಸಂದೇಶ ನಿರ್ದಿಷ್ಟನಿರೂಪಣೆ (ಡಿಎಲ್‌ಎಂಎಸ್) ಮೀಟರು ಮಾಹಿತಿ ವಿನಿಮಯಕ್ಕೆ ಅನುಕೂಲ ಕಲ್ಪಿಸುತ್ತದೆ ಹಾಗೂ ರಿಮೋಟ್ ಮೀಟರು ರೀಡಿಂಗ್ ಮುಂತಾದ ಸಾಧನಗಳಿಗೆ ಬೆಂಬಲವನ್ನು ನೀಡುತ್ತದೆ.

[27] ಬೆಂವಿಸಕಂ (8 ಜಿಲ್ಲೆಗಳು – 2,709 ಡಿಟಿಸಿಗಳು): ₹ 3.52 ಕೋಟಿ; ಚಾವಿಸನಿ (5 ಜಿಲ್ಲೆಗಳು – 18,831 ಡಿಟಿಸಿಗಳು): ₹ 41.60 ಕೋಟಿ; ಗುವಿಸಕಂ (3 ಜಿಲ್ಲೆಗಳು, – 4,841 ಡಿಟಿಸಿಗಳು): ₹ 11.86 ಕೋಟಿ; ಹುವಿಸಕಂ (7 ಜಿಲ್ಲೆಗಳು – 601 ಡಿಟಿಸಿಗಳು): ₹ 1.42 ಕೋಟಿ; ಮಂವಿಸಕಂ (4 ಜಿಲ್ಲೆಗಳು – 3,087 ಡಿಟಿಸಿಗಳು): ₹ 4.47 ಕೋಟಿ;

[28] ಆರ್‌ಜಿಜಿವಿವೈ ಅಡಿಯಲ್ಲಿ ಇತರೆ ಎರಡು ಜಿಲ್ಲೆಗಳಲ್ಲಿ ಈ ಅಂಶವನ್ನು ಗಮನಿಸಲಿಲ್ಲ.

ಕೇಂದ್ರಗಳ (ಶೇಕಡಾ 11.14) (ಡಿಟಿಸಿಗಳು) ಪೈಕಿ ಕೇವಲ 2,098ರಲ್ಲಿ ಮಾತ್ರ ವಿದ್ಯುತ್ ಲೆಕ್ಕಪರಿಶೋಧನೆ ನಡೆಸಿದ್ದಿತಾದಲ್ಲಿ, ಗುವಿಸಕಂಯು ಯಾವುದೇ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳಲ್ಲಿ (ಡಿಟಿಸಿಗಳು) ವಿದ್ಯುತ್ ಲೆಕ್ಕಪರಿಶೋಧನೆಯನ್ನು ನಡೆಸಿರಲಿಲ್ಲ. ವಿದ್ಯುತ್ ಲೆಕ್ಕಪರಿಶೋಧನೆಯನ್ನು ನಡೆಸದಿರುವುದು ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳಿಗೆ (ಡಿಟಿಸಿಗಳು) ಮೀಟರುಗಳನ್ನು ಅಳವಡಿಸುವ ಉದ್ದೇಶವನ್ನೇ ವಿಫಲಗೊಳಿಸಿದ್ದಲ್ಲದೆಯೇ ಕರ್ನಾಟಕ ವಿದ್ಯುತ್ ವಿತರಣಾ ಸಂಹಿತೆಯ ಅನುವುಗಳನ್ನು ಉಲ್ಲಂಘಿಸುವಲ್ಲಿಯೂ ಪರಿಣಮಿಸಿದ್ದಿತು.

ಈ ರೀತಿಯಾಗಿ, ವಿದ್ಯುತ್ತನ್ನು ಲೆಕ್ಕವನ್ನಿಡುವ ಸಲುವಾಗಿ ಹಾಗೂ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳ (ಡಿಟಿಸಿಗಳು) ಮಟ್ಟದಲ್ಲಿ ಲೆಕ್ಕಪರಿಶೋಧನೆ ಮಾಡುವ ಸಲುವಾಗಿ ₹ 62.87 ಕೋಟಿ ಮೊತ್ತದಷ್ಟು ಗಮನಾರ್ಹವಾದಂತಹ ವೆಚ್ಚವನ್ನು ಭರಿಸಲಾಗಿದ್ದಿತಾದರೂ, ವಿಸಕಂಗಳು ಸಮರ್ಪಕವಾದಂತಹ ರೀತಿಯಲ್ಲಿ ವಿದ್ಯುತ್ತಿನ ಲೆಕ್ಕವನ್ನಿಡುವಿಕೆಗಾಗಿ ಹಾಗೂ ಅಧಿಕ ಪ್ರಮಾಣದಲ್ಲಿ ವಿದ್ಯುತ್ತಿನ ನಷ್ಟ ಸಂಭವಿಸುತ್ತಿರುವ ಸ್ಥಳಗಳನ್ನು ಗುರುತಿಸುವ ಮತ್ತು ನಷ್ಟಗಳನ್ನು ತಗ್ಗಿಸುವಲ್ಲಿ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ವ್ಯವಸ್ಥೆಯನ್ನು ಸ್ಥಾಪಿಸುವಲ್ಲಿ ವಿಫಲಗೊಂಡಿದ್ದವು.

ಕಾಮಗಾರಿಗಳನ್ನು ಸಂಪರ್ಕ-ಸಂದೇಶ ರವಾನೆ ವ್ಯವಸ್ಥೆಯು ಇಲ್ಲದಿರಬಹುದಾದಂತಹ ಗ್ರಾಮೀಣ ಪ್ರದೇಶಗಳಲ್ಲಿ/ಅಭುಕ್ತ ಮೂಲೆಗಳಲ್ಲಿರುವಂತಹ ದೂರದ ಪ್ರದೇಶಗಳಲ್ಲಿ ಕಾರ್ಯಗತಗೊಳಿಸಲಾಗಿದ್ದಿತಾದ್ದರಿಂದ ಸವಿವರ ಯೋಜನಾ ವರದಿಗಳನ್ನು ತಯಾರಿಸುವ ವೇಳೆಯಲ್ಲಿ ಸಂದೇಶ ರವಾನೆ ಐಟಂಗಳನ್ನು (ಸಿಮ್ ಮತ್ತು ಮೋಡೆಮ್) ಕೈಬಿಡಲಾಗಿದ್ದಿತು ಹಾಗೂ ಕೇವಲ ಡಿಎಲ್‌ಎಂಎಸ್ ಮೀಟರುಗಳ ಅಳವಡಿಕೆಯನ್ನು ಪರಿಗಣಿಸಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವಂಬರ್ 2021). ಬೆಂವಿಸಕಂಯಲ್ಲಿ, ವಿದ್ಯುತ್ ಲೆಕ್ಕಪರಿಶೋಧನೆಗಾಗಿ ಮೀಟರುಗಳಿಂದ ಕೈಯಿಂದ ವಿದ್ಯುತ್ ಬಳಕೆಯನ್ನು ತೆಗೆದುಕೊಳ್ಳಲಾಗುತ್ತಿದ್ದಿತು, ಆದರೆ ಮೀಟರುಗಳನ್ನು ಅಳವಡಿಸಲಾಗಿರುವ ಎಲ್ಲಾ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳ (ಡಿಟಿಸಿಗಳು) ವಿದ್ಯುತ್ ಲೆಕ್ಕಪರಿಶೋಧನೆ ನಡೆಸುವ ಸಲುವಾಗಿ ಕ್ರಮಗಳನ್ನು ಕೈಗೊಳ್ಳಲಾಗುವುದು (ಚಾವಿಸನಿ) ಹಾಗೂ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳ (ಡಿಟಿಸಿಗಳು) ಕೈಯಿಂದ ಮೀಟರು ಓದುವಿಕೆಯ ಮೂಲಕ ವಿದ್ಯುತ್ ಲೆಕ್ಕಪರಿಶೋಧನೆಯನ್ನು ನಡೆಸುವಂತೆ ಎಲ್ಲಾ ಕ್ಷೇತ್ರ ಕಚೇರಿಗಳಿಗೂ ನಿರ್ದೇಶನಗಳನ್ನು ನೀಡಲಾಗಿದ್ದಿತು (ಹುವಿಸಕಂ/ಮವಿಸಕಂ) ಎಂಬುದಾಗಿಯೂ ತಿಳಿಸಿತು. ಗುವಿಸಕಂಯಲ್ಲಿ, ವಿದ್ಯುತ್ ಲೆಕ್ಕಪರಿಶೋಧನೆಯನ್ನು ಇದೀಗ ನಡೆಸಲಾಗುತ್ತಿರುವುದು.

ಉತ್ತರವು ಒಪ್ಪುವಂತಿಲ್ಲ. ಸಂಪರ್ಕ-ಸಂದೇಶ ರವಾನೆ ವ್ಯವಸ್ಥೆಯು ಇಲ್ಲದಿರಬಹುದಾದಂತಹ ಸ್ಥಳಗಳಲ್ಲಿಯೂ ಡಿಎಲ್‌ಎಂಎಸ್ ಅನುಸಾರ ಮೀಟರುಗಳ ಅಳವಡಿಕೆಯು ಸಮರ್ಥನೀಯವಾಗಿರುವುದಿಲ್ಲ, ಏಕೆಂದರೆ ಅದು ಅಧಿಕ ಪ್ರಮಾಣದ ವೆಚ್ಚವನ್ನು ಒಳಗೊಂಡಿರುತ್ತದೆ. ಸಿಮ್ ಮತ್ತು ಮೋಡೆಮ್‌ಗಳನ್ನು ಅನುವು ಮಾಡದಿದ್ದುದು ಪ್ರಮಾಣಕ ಸವಾಲು ದಾಖಲೆಯ (ಎಸ್‌ಬಿಡಿ) ಉಲ್ಲಂಘನೆಯಾಗಿದ್ದಿತಲ್ಲದೆಯೇ ಗುರಿಯಾಗಿಸಿಕೊಳ್ಳಲಾಗಿದ್ದ ಉದ್ದೇಶವನ್ನು ಈಡೇರಿಸಿಕೊಳ್ಳುವಲ್ಲಿ ವಿಫಲಗೊಂಡಿದ್ದಿತು. ಅಲ್ಲದೆಯೇ, ಗುವಿಸಕಂಯಲ್ಲಿ ಮೀಟರುಗಳನ್ನು ಅಳವಡಿಸಲಾಗಿರುವ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳ (ಡಿಟಿಸಿಗಳು) ಪೈಕಿ ಕೇವಲ ಶೇಕಡಾ 43ರಲ್ಲಿ ವಿದ್ಯುತ್ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಕರ್ನಾಟಕ ವಿದ್ಯುತ್ ಸರಬರಾಜು ಸಂಹಿತೆಯ ಉಲ್ಲಂಘನೆಯಾಗಿದೆ.

***ವಿದ್ಯುತ್ ಉಳಿತಾಯಗಳನ್ನು ಬಿಟ್ಟುಕೊಟ್ಟಿದ್ದುದು***

**3.7**. ಓಲ್ಟೇಜು ನಿಯಂತ್ರಣವನ್ನು ಉತ್ತಮಪಡಿಸುವ, ವಿಶ್ವನೀಯ ವಿದ್ಯುತ್ತನ್ನು ಸರಬರಾಜು ಮಾಡುವ, ಮಿತಿಮೀರಿದ ವಿದ್ಯುತ್ ಹೊರೆ ಇರುವಂತಹ ಉಪ-ಸ್ಟೇಷನ್ನುಗಳಿಂದ ವಿದ್ಯುತ್ ಹೊರೆಯನ್ನು ಸ್ಥಳಾಂತರಿಸುವುದು, ಇತ್ಯಾದಿ ಉದ್ದೇಶಗಳೊಂದಿಗೆ, ಹುವಿಸಕಂಯು ದೀನದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುತ್ ಯೋಜನೆ ಅಡಿಯಲ್ಲಿ ₹ 17.13 ಕೋಟಿ ವೆಚ್ಚವನ್ನು ಭರಿಸುವ ಮೂಲಕ ಮೂರು ಹೊಸ ಉಪ-ಸ್ಟೇಷನ್ನುಗಳನ್ನು ಸ್ಥಾಪಿಸಿತು (2018-19/2019-20). ಅದೇ ರೀತಿಯಲ್ಲಿ, ಬೆಂವಿಸಕಂಯು ಫೀಡರುಗಳ ವಿಭಜನೆ ಹಾಗೂ ಓಲ್ಟೇಜು ಪಾರ್ಶ್ವಚಿತ್ರಣವನ್ನು ಉತ್ತಮಗೊಳಿಸುವ ಸಲುವಾಗಿ ಎರಡು

ಸಂಪರ್ಕ ಮಾರ್ಗಗಳನ್ನು ₹ 1.13 ಕೋಟಿ ವೆಚ್ಚದಲ್ಲಿ ಸ್ಥಾಪಿಸಿತು (2019–20). ಈ ಕಾಮಗಾರಿಗಳು 87.66 ದಶಲಕ್ಷ ಯೂನಿಟ್ಟುಗಳಷ್ಟು (ಎಂಯುಗಳು) ವಾರ್ಷಿಕ ವಿದ್ಯುತ್ ಉಳಿತಾಯಗಳನ್ನು ಚಿಂತಿಸಿದ್ದವು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ***ಕಂಡಿಕೆ 3.7.1 ಮತ್ತು 3.7.2ರಲ್ಲಿ*** ಚರ್ಚಿಸಲಾಗಿದೆ.

**ಕೊರತೆಯಿಂದ ಕೂಡಿದ ಪೂರ್ವಭಾವಿ ಯೋಜನೆಯ ಕಾರಣ**

**3.7.1.** ಹುವಿಸಕಂಯು ಹಾವೇರಿ ಜಿಲ್ಲೆಯಲ್ಲಿ[29] ಮೂರು ವಿವಿಧ ಸ್ಥಳಗಳಲ್ಲಿ ₹ 17.13 ಕೋಟಿ ಮೊತ್ತದಷ್ಟು ಒಟ್ಟಾರೆ ವೆಚ್ಚದಲ್ಲಿ ಮೂರು ಹೊಸ 33/11ಕಿವ್ಯಾ ಉಪ–ಸ್ಟೇಷನ್ನುಗಳ ಸ್ಥಾಪನೆಗಾಗಿ ಜನವರಿ 2018ರ ವೇಳೆಗೆ ಕಾಮಗಾರಿಗಳು ಪೂರ್ಣಗೊಳ್ಳಬೇಕೆಂಬ ಷರತ್ತಿನೊಂದಿಗೆ ಗುತ್ತಿಗೆಗಳನ್ನು ನೀಡಿತು (ಫೆಬ್ರವರಿ 2017). ಈ ಕಾಮಗಾರಿಗಳು 26.51 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ ಉಳಿತಾಯಗಳನ್ನು ಚಿಂತಿಸಿದ್ದವು. ಕಾಮಗಾರಿಗಳ ವಿವರ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು ಹಾಗೂ ಅವುಗಳ ಪ್ರಭಾವವನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ:

**ಕೋಷ್ಟಕ ಸಂಖ್ಯೆ 3.5: ಕೊರತೆಯಿಂದ ಕೂಡಿದ ಪೂರ್ವಭಾವಿ ಯೋಜನೆಯ ಕಾರಣ ವಿದ್ಯುತ್ ಉಳಿತಾಯದ ನಷ್ಟ ಸಂಭವಿಸಿದ್ದುದು**

| ಕ್ರಮ ಸಂಖ್ಯೆ | ಕಾಮಗಾರಿ ವಿವರಗಳು | ಪೂರ್ವಭಾವಿ ಯೋಜನೆಯಲ್ಲಿನ ಕೊರತೆ | ಪ್ರಭಾವ |
|---|---|---|---|
| 1 | • **ಕಾಮಗಾರಿ:** ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಅರಬ್‌ಗೊಂಡದಲ್ಲಿ ಒಂದು ಹೊಸ 33/11ಕಿವ್ಯಾ ಉಪ–ಸ್ಟೇಷನ್ನು ಹಾಗೂ 33 ಕಿವ್ಯಾ ಮಾರ್ಗಗಳ ಸ್ಥಾಪನೆ<br>• **ಚಿಂತಿಸಲಾಗಿದ್ದ ವಾರ್ಷಿಕ ವಿದ್ಯುತ್ ಉಳಿತಾಯಗಳು:** 12.21 ದಶಲಕ್ಷ ಯೂನಿಟ್ಟುಗಳು<br>• **ಗುತ್ತಿಗೆ ಮೌಲ್ಯ/ದರ:** ₹ 5.73 ಕೋಟಿ<br>• **ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶದ ದಿನಾಂಕ:** ಫೆಬ್ರವರಿ 2017<br>• **ಪೂರ್ಣಗೊಳಿಸಲು ನಿಗದಿತ ದಿನಾಂಕ:** ಜನವರಿ 2018.<br>• **ಪೂರ್ಣಗೊಳಿಸಲಾದ ವಾಸ್ತವಿಕ ದಿನಾಂಕ:** ಜನವರಿ 2020 | • ಭೂಮಿಗಾಗಿ ಕೋರಿಕೆಯನ್ನು ಸರ್ಕಾರಕ್ಕೆ ಕೋರಲಾಯಿತು ಜೂನ್ 2017/ಆಗಸ್ಟ್ 2017ರಲ್ಲಿ ಅನುಮೋದನೆ ಪಡೆಯಲಾಯಿತು;<br>• ಭೂಮಿಯನ್ನು ಗುತ್ತಿಗೆದಾರರಿಗೆ ವಹಿಸಿಕೊಡಲಾಯಿತು (ಡಿಸೆಂಬರ್ 2017) ಅಂದರೆ ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶದ ದಿನಾಂಕದಿಂದ 10 ತಿಂಗಳುಗಳ ನಂತರ;<br>• ರೈಲ್ವೆ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಗಳಿಂದ ಅನುಮತಿಗಳನ್ನು ಜುಲೈ/ಸೆಪ್ಟಂಬರ್ 2019ರಲ್ಲಿ ಅಂದರೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿತ ದಿನಾಂಕದ ಒಂದುವರೆ ವರ್ಷಗಳ ನಂತರ ಪಡೆದುಕೊಳ್ಳಲಾಗಿದ್ದಿತು. ಈ ಅಡಚಣೆಯನ್ನು ಸವಿವರ ಯೋಜನಾ ವರದಿಯಲ್ಲಿ ಗುರುತಿಸಲಾಗಿದ್ದಿತಾದರೂ, ಸಮಯೋಚಿತ ಕ್ರಮವನ್ನು ತೆಗೆದುಕೊಂಡಿರಲಿಲ್ಲ;<br>• ಸಾಮಗ್ರಿಗಳ ಪರೀಕ್ಷಣೆಯಲ್ಲಿ ವಿಳಂಬ (ಜನವರಿ/ಫೆಬ್ರವರಿ 2018) ಹಾಗೂ ರವಾನೆ ನಿರ್ದೇಶನಗಳನ್ನು ನೀಡುವಲ್ಲಿ ವಿಳಂಬ | • 24 ತಿಂಗಳುಗಳ ವಿಳಂಬ;<br>• ₹ 9.21 ಕೋಟಿ[30] ಮೌಲ್ಯದ 24.42 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ ಉಳಿತಾಯದ ನಷ್ಟ. |
| 2 | • **ಕಾಮಗಾರಿ:** ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ನಯಿಕೆರೂರಿನಲ್ಲಿ ಹೊಸ 33/11ಕಿವ್ಯಾ ಉಪ–ಸ್ಟೇಷನ್ನು ಹಾಗೂ 33 ಕಿವ್ಯಾ ಮಾರ್ಗಗಳ ಸ್ಥಾಪನೆ<br>• **ಚಿಂತಿಸಲಾಗಿದ್ದ ವಾರ್ಷಿಕ ವಿದ್ಯುತ್ ಉಳಿತಾಯಗಳು:** 5.22 ದಶಲಕ್ಷ ಯೂನಿಟ್ಟುಗಳು<br>• **ಗುತ್ತಿಗೆ ಮೌಲ್ಯ:** ₹ 5.82 ಕೋಟಿ<br>• **ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶದ ದಿನಾಂಕ:** ಫೆಬ್ರವರಿ 2017 | • ಉಪ–ಸ್ಟೇಷನ್ನಿಗಾಗಿ ಗುರುತಿಸಲಾಗಿದ್ದ ಭೂಮಿಯು ಅರಣ್ಯ ಭೂಮಿಯಾಗಿದ್ದಿತು;<br>• ಬದಲಿ ಭೂಮಿಯನ್ನು ಹೆಸರೂರಿನಲ್ಲಿ ಜೂನ್ 2017ರಲ್ಲಿ ಅಂದರೆ ಆಶಯ ಪತ್ರ /ಕಾಮಗಾರಿ ನೀಡಿಕೆ ಆದೇಶದ ದಿನಾಂಕದ ನಾಲ್ಕು ತಿಂಗಳುಗಳ ನಂತರ ಗುರುತಿಸಲಾಗಿದ್ದಿತು. | • 12 ತಿಂಗಳುಗಳ ವಿಳಂಬ;<br>• ₹ 1.97 ಕೋಟಿ ಮೌಲ್ಯದ 5.22 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ ಉಳಿತಾಯಗಳು ನಷ್ಟವಾಗಿದ್ದವು. (12 ತಿಂಗಳುಗಳಿಗೆ |

[29] ಈ ಅಂಶವನ್ನು ಉಳಿದ ಒಂಬತ್ತು ಪರೀಕ್ಷಾ–ಪರಿಶೀಲನೆ ಮಾಡಲಾದ ಜಿಲ್ಲೆಗಳಲ್ಲಿ ಗಮನಿಸಲಿಲ್ಲ.

[30] ಸವಿವರ ಯೋಜನಾ ವರದಿಯಲ್ಲಿ ಪ್ರಕ್ಷೇಪಿಸಿದ್ದಂತೆ 24 ತಿಂಗಳುಗಳಿಗೆ 24.42 ದಶಲಕ್ಷ ಯೂನಿಟ್ಟುಗಳಿಗೆ ಯೂನಿಟ್ಟು ಒಂದಕ್ಕೆ ₹ 3.77.

| ಕ್ರಮ ಸಂಖ್ಯೆ | ಕಾಮಗಾರಿ ವಿವರಗಳು | ಪೂರ್ವಭಾವಿ ಯೋಜನೆಯಲ್ಲಿನ ಕೊರತೆ | ಪ್ರಭಾವ |
|---|---|---|---|
| | • **ಪೂರ್ಣಗೊಳಿಸಲು ನಿಗದಿತ ದಿನಾಂಕ:** ಜನವರಿ 2018.<br>• **ಪೂರ್ಣಗೊಳಿಸಲಾದ ವಾಸ್ತವಿಕ ದಿನಾಂಕ:** ಜನವರಿ 2019 | | ಯೂನಿಟ್ಟು ಒಂದಕ್ಕೆ ₹ 3.77 ದರದಲ್ಲಿ). |
| 3 | • **ಕಾಮಗಾರಿ:** ಗಾಂಧೀಪುರದಲ್ಲಿ ಒಂದು ಹೊಸ 33/11ಕಿವ್ಯಾ ಉಪ–ಸ್ಟೇಷನ್ನು ಹಾಗೂ 110/11 ಕಿವ್ಯಾ ಹಾನಗಲ್ ಉಪ–ಸ್ಟೇಷನ್ನಿನಿಂದ ಅಕ್ಕಿಆಲೂರು 33/11 ಕಿವ್ಯಾ ಉಪ–ಸ್ಟೇಷನ್ನಿಗೆ 33 ಕಿವ್ಯಾ ಮಾರ್ಗಗಳ ಸ್ಥಾಪನೆ.<br>• **ಚಿಂತಿಸಲಾಗಿದ್ದ ವಾರ್ಷಿಕ ವಿದ್ಯುತ್ ಉಳಿತಾಯಗಳು:** 9.08 ದಶಲಕ್ಷ ಯೂನಿಟ್‌ಗಳು<br>• **ಗುತ್ತಿಗೆ ಮೌಲ್ಯ:** ₹ 5.58 ಕೋಟಿ.<br>• **ಆಶಯ ಪತ್ರ /ಕಾಮಗಾರಿ ನೀಡಿಕೆ ಆದೇಶದ ದಿನಾಂಕ:** ಫೆಬ್ರವರಿ 2017.<br>• **ಪೂರ್ಣಗೊಳಿಸಲು ನಿಗದಿತ ದಿನಾಂಕ:** ಜನವರಿ 2018.<br>• **ಪೂರ್ಣಗೊಳಿಸಲಾದ ವಾಸ್ತವಿಕ ದಿನಾಂಕ:** ಅಕ್ಟೋಬರ್ 2018 | • ಗುತ್ತಿಗೆದಾರರಿಗೆ ಭೂಮಿಯನ್ನು ಸೆಪ್ಟಂಬರ್ 2017ರಲ್ಲಿ ಅಂದರೆ ಆಶಯ ಪತ್ರವನ್ನು /ಕಾಮಗಾರಿ ನೀಡಿಕೆ ಆದೇಶದ ದಿನಾಂಕದ ನಂತರ ಏಳು ತಿಂಗಳುಗಳ ನಂತರ ಹಸ್ತಾಂತರಗೊಳಿಸಲಾಗಿದ್ದಿತು. | • ಹತ್ತು ತಿಂಗಳುಗಳ ವಿಳಂಬ;<br>• ₹ 2.85 ಕೋಟಿ ಮೌಲ್ಯದ 7.57 ದಶ ಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಉಳಿತಾಯಗಳು ನಷ್ಟವಾಗಿದ್ದವು. (10 ತಿಂಗಳುಗಳಿಗೆ ಯೂನಿಟ್ ಒಂದಕ್ಕೆ ₹ 3.77 ದರದಲ್ಲಿ). |

**(ಮೂಲ: ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶ/ವಿವರವಾದ ಕಾಮಗಾರಿ ನೀಡಿಕೆ ಆದೇಶಗಳು, ಹುವಿಸಕಂಯಿಂದ ಪತ್ರವ್ಯವಹಾರಗಳು)**

ಕಾಮಗಾರಿಗಳನ್ನು ನೀಡುವುದಕ್ಕೆ ಮುಂಚಿತವಾಗಿ ಉಪ–ಸ್ಟೇಷನ್ನುಗಳ ಕಾರ್ಯಗತಗೊಳಿಸುವ ಸಲುವಾಗಿ ಅಗತ್ಯ ಭೂಮಿಯನ್ನು ಹಾಗೂ ಶಾಸನಬದ್ಧ ಅನುಮತಿಗಳನ್ನು ಖಚಿತಪಡಿಸಿಕೊಳ್ಳದಿದ್ದ ಕಾರಣ ಕಾಮಗಾರಿಗಳನ್ನು ನಿರ್ದಿಷ್ಟ ದಿನಾಂಕಗಳನ್ನು ಮೀರಿದಂತೆ 10ರಿಂದ 24 ತಿಂಗಳುಗಳ ವಿಳಂಬದೊಂದಿಗೆ ಪೂರ್ಣಗೊಳಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಚಿಂತಿಸಲಾಗಿದ್ದಂತಹ ಪ್ರಯೋಜನಗಳು ಅಂದರೆ ಓಲ್ಟೇಜು ಪಾರ್ಶ್ವಚಿತ್ರಣವನ್ನು ಉತ್ತಮಗೊಳಿಸುವುದು, ವಿಶ್ವಸನೀಯ ವಿದ್ಯುತ್ ಸರಬರಾಜು, ಮಿತಿಮೀರಿದ ವಿದ್ಯುತ್ ಹೊರೆಯನ್ನು ಹೊಂದಿದ್ದಂತಹ ಉಪ–ಸ್ಟೇಷನ್ನುಗಳಿಂದ ವಿದ್ಯುತ್ ಹೊರೆಯನ್ನು ಸ್ಥಳಾಂತರಿಸುವುದು, ಇತ್ಯಾದಿ ಚಿಂತಿಸಲಾಗಿದ್ದಂತಹ ಪ್ರಯೋಜನಗಳನ್ನು ಮುಂದೂಡಲ್ಪಟ್ಟಿತು, ಅಷ್ಟೇ ಅಲ್ಲದೆಯೇ ₹ 14.03 ಕೋಟಿ[31] ಮೌಲ್ಯದ ವಿದ್ಯುತ್ ಉಳಿತಾಯಗಳು (37.21 ದಶಲಕ್ಷ ಯೂನಿಟ್ಟುಗಳು) ನಷ್ಟವಾಗುವಲ್ಲಿ ಪರಿಣಮಿಸಿದ್ದಿತು.

ಭೂಮಿಯ ಖರೀದಿಗಾಗಿ ಪ್ರಯತ್ನಗಳನ್ನು ಅತ್ಯುತ್ತಮವಾಗಿ ಮಾಡಲಾಯಿತು ಹಾಗೂ ಕಾಮಗಾರಿಗಳನ್ನು ಇಂಧನ ಮಂತ್ರಾಲಯವು ನೀಡಿದ್ದ ವಿಸ್ತರಿಸಲ್ಪಟ್ಟಿದ್ದಂತಹ ಕಾಲಾವಧಿ ಅಂದರೆ 31 ಡಿಸೆಂಬರ್ 2020ರ ಒಳಗೆ ಪೂರ್ಣಗೊಳಿಸಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವಂಬರ್ 2021).

ಹುವಿಸಕಂಯು ಭೂ ಸ್ವಾಧೀನ ಪ್ರಕ್ರಿಯೆಯನ್ನು ಕಾಮಗಾರಿ ಆದೇಶಗಳನ್ನು ನೀಡಿದ ನಂತರ ಪ್ರಾರಂಭಿಸಿದ್ದರಿಂದ ಹಾಗೂ ಶಾಸನಬದ್ಧ ಅನುಮತಿಗಳನ್ನು ಕಾಮಗಾರಿಗಳು ಪೂರ್ಣಗೊಳ್ಳಲು ನಿಗದಿತವಾಗಿದ್ದ ದಿನಾಂಕದ ನಂತರ ಪಡೆದುಕೊಂಡಿದ್ದರಿಂದ ಉತ್ತರವು ಒಪ್ಪುವಂತಿಲ್ಲ. ಇದು ಕಾಮಗಾರಿಗಳು ಪ್ರಾರಂಭಗೊಳ್ಳುವಲ್ಲಿ ವಿಳಂಬಕ್ಕೆ ಕಾರಣವಾಯಿತು ಹಾಗೂ ಚಿಂತಿಸಲಾಗಿದ್ದಂತಹ ವಿದ್ಯುತ್ ಉಳಿತಾಯಗಳು ನಷ್ಟವಾಗಲು ಕಾರಣವಾಗಿದ್ದಿತು. ಅಲ್ಲದೆಯೇ, ಇದು ಚಿಂತಿಸಲಾಗಿದ್ದಂತಹ ಪ್ರಯೋಜನಗಳು ಅಂದರೆ ಓಲ್ಟೇಜು ಪಾರ್ಶ್ವಚಿತ್ರಣವನ್ನು ಉತ್ತಮಗೊಳಿಸುವುದು, ವಿಶ್ವಸನೀಯ ವಿದ್ಯುತ್ ಸರಬರಾಜು, ಮಿತಿಮೀರಿದ ವಿದ್ಯುತ್ ಹೊರೆಯನ್ನು ಹೊಂದಿದ್ದಂತಹ ಉಪ–ಸ್ಟೇಷನ್ನುಗಳಿಂದ ವಿದ್ಯುತ್ ಹೊರೆಯನ್ನು ಸ್ಥಳಾಂತರಿಸುವುದು, ಪಡೆದುಕೊಳ್ಳುವುದನ್ನು 10ರಿಂದ 24 ತಿಂಗಳುಗಳವರೆಗೆ

[31] ಸವಿವರ ಯೋಜನಾ ವರದಿಯಲ್ಲಿ ನೀಡಿರುವಂತೆ, ಬಿಟ್ಟುಕೊಡಲಾದ ಒಟ್ಟಾರೆ ವಿದ್ಯುತ್ ಉಳಿತಾಯಗಳು 37.21 ದಶಲಕ್ಷ ಯೂನಿಟ್ಟುಗಳು (ಕೋಷ್ಟಕವನ್ನು ಉಲ್ಲೇಖಿಸುವುದು) ಇದನ್ನು ವಿದ್ಯುತ್ತಿನ ದರದಿಂದ (ಯೂನಿಟ್ಟು ಒಂದಕ್ಕೆ ₹ 3.77) ಗುಣಿಸಿರುವುದು.

ಮುಂದೂಡಲ್ಪಟ್ಟಿದ್ದಿತು.

***ಬ್ರೇಕರ್‌ಗಳ ಲಭ್ಯತೆ ಇರದಿದ್ದ ಕಾರಣದಿಂದ***

**3.7.2.** ಬೆಂವಿಸಕಂಯು ಡಿಡಿಯುಜಿಜೆವೈ ಅಡಿಯಲ್ಲಿ ಪ್ರಸಕ್ತ ಇದ್ದಂತಹ ಮೂರು ಫೀಡರುಗಳನ್ನು ವಿಭಜಿಸುವ ಹಾಗೂ ಎರಡು ಸಂಪರ್ಕ ಮಾರ್ಗಗಳನ್ನು ಸ್ಥಾಪಿಸುವ ಕಾಮಗಾರಿಗಳನ್ನು ಹೊಸಕೋಟೆ ವಿಭಾಗದಲ್ಲಿ ₹ 1.13 ಕೋಟಿ ಒಟ್ಟಾರೆ ವೆಚ್ಚದಲ್ಲಿ ಕಾರ್ಯಗತಗೊಳಿಸಿತು (ಮೇ 2019ರಿಂದ ಜುಲೈ 2019). ಕಾಮಗಾರಿಗಳ ಉದ್ದೇಶವನ್ನು ತುತ್ತತುದಿಯ ವಿದ್ಯುತ್ ಹೊರೆಗಳನ್ನು ಸ್ಥಳಾಂತರಿಸುವ ಮೂಲಕ ಓಲ್ಟೇಜಿನ ಪಾರ್ಶ್ವಚಿತ್ರಣವನ್ನು ಉತ್ತಮಗೊಳಿಸುವುದು ಹಾಗೂ ಅದರಿಂದಾಗಿ ವಾರ್ಷಿಕ 61.15 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ ಉಳಿತಾಯ ಮಾಡುವುದು ಎಂಬುದಾಗಿ ಚಿಂತಿಸಲಾಗಿದ್ದಿತು.

ಪ್ರಸಕ್ತ ಇದ್ದಂತಹ ಫೀಡರುಗಳಿಂದ ವಿದ್ಯುತ್ ಹೊರೆಯನ್ನು ಹೊಸದಾಗಿ ವಿಭಜಿಸಲ್ಪಟ್ಟ ಫೀಡರುಗಳಿಗೆ ಸ್ಥಳಾಂತರಿಸುವುದಕ್ಕಾಗಿ 11 ಕಿವ್ಯಾ ಬ್ರೇಕರುಗಳನ್ನು[32] ಸ್ಥಾಪಿಸುವ ಅಗತ್ಯತೆಯಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಗುತ್ತಿಗೆಯ ವ್ಯಾಪ್ತಿಯು ಬ್ರೇಕರುಗಳ ಖರೀದಿಯನ್ನು ಒಳಗೊಂಡಿರಲಿಲ್ಲ ಅಥವಾ ಗುತ್ತಿಗೆಯನ್ನು ನೀಡುವ ವೇಳೆಯಲ್ಲಿ ಸಂಬಂಧಿತ ವಿಭಾಗೀಯ ಕಚೇರಿಯು ಈ ಸಾಮಗ್ರಿಯ ಅಗತ್ಯತೆಯನ್ನು ಸೂಚಿಸಿರಲಿಲ್ಲ.

11 ಕಿವ್ಯಾ ಬ್ರೇಕರುಗಳ ಲಭ್ಯವಿಲ್ಲದ ಕಾರಣ, ವಿದ್ಯುತ್ ಹೊರೆಯನ್ನು ಹೊಸ ಫೀಡರುಗಳಿಗೆ ವರ್ಗಾಯಿಸಲಾಗಿರಲಿಲ್ಲ, ಇದು ₹ 1.13 ಕೋಟಿ ಮೊತ್ತವನ್ನು ನಿಷ್ಫಲ ಹೂಡಿಕೆಯನ್ನಾಗಿ ಹಾಗೂ 91.81 ದಶಲಕ್ಷ ಯೂನಿಟ್ಟುಗಳಷ್ಟು ಇಂಧನ ಉಳಿತಾಯ ನಷ್ಟವಾಗುವಂತೆ ಮಾಡಿತು (ಡಿಸೆಂಬರ್ 2020).

11 ಕಿವ್ಯಾ ಬ್ರೇಕರುಗಳ ಸ್ಥಾಪನೆಯು ಕವಿಪ್ರನಿನಿದ ವ್ಯಾಪ್ತಿಯ ಅಡಿಯಲ್ಲಿ ಬರುತ್ತದೆ ಹಾಗೂ ಈ ನಿಟ್ಟಿನಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿದ್ದವು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವಂಬರ್ 2021). ಉತ್ತರವು ಗುತ್ತಿಗೆಯನ್ನು ನೀಡುವ ವೇಳೆಯಲ್ಲಿ ಬ್ರೇಕರುಗಳಿಗೆ ಅನುವು ಮಾಡದಿರುವ ಬಗ್ಗೆ ಮೌನವಾಗಿದ್ದಿತು. ಅಲ್ಲದೆಯೇ, ಬ್ರೇಕರುಗಳ ಅಗತ್ಯತೆಯ ಬಗ್ಗೆ ಬೆಂವಿಸಕಂಯಿಂದ ಕವಿಪ್ರನಿನಿಕ್ಕೆ ಯಾವುದೇ ಪತ್ರವ್ಯವಹಾರಗಳು ದಾಖಲೆಗಳಲ್ಲಿ ಲಭ್ಯವಿರಲಿಲ್ಲ.

***ಗುತ್ತಿಗೆಯ ವಿಸ್ತರಣೆ***

**3.8.** ಗುವಿಸಕಂಯು ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳಿಗೆ (ಡಿಟಿಸಿಗಳು) ಮೀಟರುಗಳನ್ನು ಅಳವಡಿಸುವುದು, ಹಾಗೂ ಗೃಹ ಬಳಕೆದಾರರುಗಳ ಮನೆಗಳ ಒಳಗಿನಿಂದ ಮೀಟರುಗಳನ್ನು ಹೊರಗಡೆಗೆ ಬದಲಾಯಿಸುವ ಹಾಗೂ ಪ್ರಸಕ್ತ ಇದ್ದ ಇಲೆಕ್ಟ್ರೋಮೆಕ್ಯಾನಿಕಲ್ ಮೀಟರ್‌ಗಳನ್ನು ಬದಲಿಸಿ ಸ್ಟ್ಯಾಟಿಕ್ ಮೀಟರ್‌ಗಳನ್ನು ಅಳವಡಿಸುವ ಕಾಮಗಾರಿಗಳನ್ನು ಡಿಡಿಯುಜಿಜೆವೈಯಡಿಯಲ್ಲಿ ಕೈಗೆತ್ತಿಕೊಂಡಿದ್ದಿತು. ಗುತ್ತಿಗೆಯ ಸಾಮಾನ್ಯ ಷರತ್ತುಗಳ ಅನುಸಾರ (*ಷರತ್ತು 34*), ಗುತ್ತಿಗೆ ಅವಧಿಯ ವಿಸ್ತರಣೆಯನ್ನು ಅನಿರೀಕ್ಷಿತ ಘಟನೆಗಳ ಸಂದರ್ಭದಲ್ಲಿ ಅಥವಾ ನಿಯಮ ನಿಬಂಧನೆಗಳು ಅಥವಾ ನಿಯಂತ್ರಣಗಳು ಅಥವಾ ವ್ಯಾಪ್ತಿ ಅಥವಾ ಕಾಮಗಾರಿಯ ಸ್ವರೂಪದಲ್ಲಿ ಬದಲಾವಣೆಗಳಾಗಿದ್ದಲ್ಲಿ ನೀಡಬಹುದಾಗಿದ್ದಿತು. ಮುಂದುವರೆದು, ಗುತ್ತಿಗೆ ಷರತ್ತುಗಳ (4 ಜೂನ್ 2019ರ ಸವಿವರ ಕಾಮಗಾರಿ ನೀಡಿಕೆ ಆದೇಶದ (ಡಿಡಬ್ಲ್ಯುಎ) *ಷರತ್ತು 17*) ಅನುಸಾರ, ಕಾಮಗಾರಿಗಳನ್ನು ಪೂರ್ಣಗೊಳಿಸುವಿಕೆಯಲ್ಲಿನ ವಿಳಂಬಕ್ಕೆ ವಿಳಂಬದ ಪ್ರತೀ ಒಂದು ವಾರಕ್ಕೂ ಬಾಕಿ ಉಳಿದಿರುವ ಕಾಮಗಾರಿಗಳ ಮೌಲ್ಯದ ಶೇಕಡಾ 0.5ರಷ್ಟನ್ನು ಗರಿಷ್ಠ ಗುತ್ತಿಗೆ ಮೌಲ್ಯದ ಶೇಕಡಾ 5ರ ಷರತ್ತಿಗೆ ಒಳಪಟ್ಟಂತೆ ವಿಧಿಸಬೇಕಿದ್ದಿತು.

ಗುವಿಸಕಂ ಈ ಕೆಳಗಿನ ಗುತ್ತಿಗೆಗಳಲ್ಲಿ ಗುತ್ತಿಗೆ ಅವಧಿಯನ್ನು ನಿಗದಿತ ದಿನಾಂಕವನ್ನು ಮೀರಿದಂತೆ ಯಾವುದೇ ಕಾರಣಗಳಿಲ್ಲದೆಯೇ ವಿಸ್ತರಿಸಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

[32] ಒಂದು ಸರ್ಕ್ಯೂಟ್ ಬ್ರೇಕರ್ ಮಿತಿಮೀರಿದ ವಿದ್ಯುತ್ ಅಥವಾ ಕಡಿಮೆ ಪ್ರಮಾಣದ ವಿದ್ಯುತ್ತಿನಿಂದ ಸಂಭವಿಸಬಹುದಾದ ಹಾನಿಯಿಂದ ವಿದ್ಯುತ್ ಸರ್ಕ್ಯೂಟ್ ಅನ್ನು ಸಂರಕ್ಷಿಸುವ ಸಲುವಾಗಿನ ಒಂದು ವಿದ್ಯುತ್ ಸಾಧನ.

**ಕೋಷ್ಟಕ ಸಂಖ್ಯೆ 3.6: ಸಮಾಪನ ನಷ್ಟವನ್ನು ವಿಧಿಸದೆಯೇ ಗುತ್ತಿಗೆ ಅವಧಿಯನ್ನು ವಿಸ್ತರಿಸಿದ್ದುದು**

| ಕ್ರಮ ಸಂಖ್ಯೆ | ಕಾಮಗಾರಿಗಳ ವಿವರ | ಗುತ್ತಿಗೆದಾರರ ಹೆಸರು | ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶ |
|---|---|---|---|
| 1 | **ಕಾಮಗಾರಿಯ ಹೆಸರು:** ಮೂರು ಜಿಲ್ಲೆಗಳಲ್ಲಿ (ಬಳ್ಳಾರಿ, ಕಲಬುರಗಿ ಮತ್ತು ರಾಯಚೂರು) 3,871 ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳಲ್ಲಿ (ಡಿಟಿಸಿಗಳು) ಮೀಟರುಗಳನ್ನು ಅಳವಡಿಸುವುದು;<br>• **ಗುತ್ತಿಗೆ ಮೌಲ್ಯ:** ₹ 11.93 ಕೋಟಿ<br>• **ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶದ ದಿನಾಂಕ:** ಫೆಬ್ರವರಿ 2019<br>• **ಪೂರ್ಣಗೊಳಿಸಲು ನಿಗದಿತ ದಿನಾಂಕ:** ಆಗಸ್ಟ್ 2019<br>• **ಪೂರ್ಣಗೊಳಿಸಲಾದ ವಾಸ್ತವಿಕ ದಿನಾಂಕ:** ಮಾರ್ಚ್ 2020 | ಮೆ. ಇಎಸ್‌ಪಿಆರ್‌ಒ ಸಲ್ಯೂಷನ್ಸ್ ಪ್ರೈ ಲಿಮಿಟೆಡ್ | • ಟೆಂಡರು ಪ್ರಕ್ರಿಯೆಯನ್ನು ವಿಳಂಬವಾಗಿ ಅಂದರೆ ಸವಿವರ ಯೋಜನಾ ವರದಿಗಳು ಜುಲೈ 2017ರಲ್ಲಿ ಅನುಮೋದನೆಗೊಂಡ 18 ತಿಂಗಳ ನಂತರ ಡಿಸೆಂಬರ್ 2018ರಲ್ಲಿ ಪ್ರಾರಂಭಿಸಲಾಗಿದ್ದಿತು;<br>• ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಖರೀದಿಗಳು/ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮದ ಅನುಸಾರ 60 ದಿನಗಳಿಗೆ ಪ್ರತಿಯಾಗಿ ಸವಾಲುಗಳನ್ನು ಸಲ್ಲಿಸಲು 10 ದಿನಗಳ ಕಾಲಾವಕಾಶ ನೀಡಿ ಅಲ್ಪಾವಧಿ ಟೆಂಡರುಗಳನ್ನು ಆಹ್ವಾನಿಸಲಾಗಿದ್ದಿತು (ಡಿಸೆಂಬರ್ 2018);<br>• ಕಾರ್ಯಕ್ರಮಗಳ ಮೌಲ್ಯಮಾಪನ ಸಮೀಕ್ಷಾ ತಂತ್ರ ನಕಾಶೆಯ (ಪಿಇಆರ್‌ಟಿ ಚಾರ್ಟ್) ಅನುಸಾರ, ಕಾಮಗಾರಿಗಳ ಶೇಕಡಾ 30ರಷ್ಟನ್ನು ಎರಡು ತಿಂಗಳುಗಳ ಒಳಗೆ ಪೂರ್ಣಗೊಳಿಸಬೇಕಿದ್ದಿತು, ಶೇಕಡಾ 35ರಷ್ಟನ್ನು ನಂತರದ ಎರಡು ತಿಂಗಳುಗಳಲ್ಲಿ ಹಾಗೂ ಉಳಿದ ಶೇಕಡಾ 35ರಷ್ಟನ್ನು ಮುಂದಿನ ಆರು ತಿಂಗಳಲ್ಲಿ ಪೂರ್ಣಗೊಳಿಸಬಕಿದ್ದಿತು. ಆದಾಗ್ಯೂ, ಆಗಸ್ಟ್ 2019ರಲ್ಲಿದ್ದಂತೆ (ನಿಗದಿತ ದಿನಾಂಕ) ಎರಡು ತಾಲ್ಲೂಕುಗಳಲ್ಲಿನ (ಜೇವರ್ಗಿ ಮತ್ತು ಚಿತ್ತಾಪುರ) ಪ್ರಗತಿಯು ಕೇವಲ ಶೇಕಡಾ 10 ಆಗಿದ್ದಿತು;<br>• ಗುತ್ತಿಗೆದಾರರ ಕೋರಿಕೆಯ ಮೇರೆಗೆ ಗುತ್ತಿಗೆಯನ್ನು 31 ಮಾರ್ಚ್ 2020ರವರೆಗೂ ವಿಸ್ತರಿಸಲಾಗಿದ್ದಿತು.<br>• ಸಮಾಪನ ನಷ್ಟಗಳನ್ನು ಒಟ್ಟಾರೆ ಗುತ್ತಿಗೆ ಮೌಲ್ಯದ ಗರಿಷ್ಠ ಶೇಕಡಾ 5ರ ದರದಲ್ಲಿ ವಿಧಿಸಬೇಕಾಗಿದ್ದಿತು, ಅದು ₹ 59.65 ಲಕ್ಷ ಆಗುತ್ತದೆ. |
| 2 | • **ಕಾಮಗಾರಿಯ ಹೆಸರು:** ಆರು ಜಿಲ್ಲೆಗಳಲ್ಲಿ (ಬಳ್ಳಾರಿ, ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು ಮತ್ತು ಯಾದಗಿರಿ) ಗೃಹ ವಿದ್ಯುತ್ ಬಳಕೆದಾರರ ಮನೆಗಳ ಒಳಗಿನಿಂದ ಮೀಟರುಗಳನ್ನು ಮನೆಯ ಹೊರಕ್ಕೆ ಸ್ಥಳಾಂತರಿಸುವುದು ಹಾಗೂ ಪ್ರಸಕ್ತ ಇರುವಂತಹ ಇಲೆಕ್ಟ್ರೋಮೆಕಾನಿಕಲ್ ಮೀಟರನ್ನು ಸ್ಟಾಟಿಕ್ ಮೀಟರುಗಳಿಂದ ಬದಲಾಯಿಸುವುದು;<br>• **ಗುತ್ತಿಗೆ ಮೌಲ್ಯ:** ₹ 76.30 ಕೋಟಿ<br>• **ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶದ ದಿನಾಂಕ:** ಫೆಬ್ರವರಿ 2019<br>• **ಪೂರ್ಣಗೊಳಿಸಲು ನಿಗದಿತ ದಿನಾಂಕ:** ಆಗಸ್ಟ್ 2019<br>• **ಪೂರ್ಣಗೊಳಿಸಲಾದ ವಾಸ್ತವಿಕ ದಿನಾಂಕ:** ಮಾರ್ಚ್/ನವಂಬರ್ 2020 | ಐದು ಸಂಸ್ಥೆಗಳು[33] | • ಗುತ್ತಿಗೆಗೆ ನೀಡಲಾಗಿದ್ದ ಒಟ್ಟಾರೆ ಪರಿಮಾಣಗಳ ಪೈಕಿ ಕೇವಲ ಶೇಕಡಾ 46ರಷ್ಟನ್ನು ನಿಗದಿತ ದಿನಾಂಕದಂದು ಪೂರ್ಣಗೊಳಿಸಲಾಗಿದ್ದಿತು (4,34,851 ಮೀಟರುಗಳ (3,95,928ಗೆ ಪರಿಷ್ಕರಿಸಲಾಗಿರುವುದು) ಪೈಕಿ 2,01,665 ಮೀಟರುಗಳು);<br>• ಕಾಮಗಾರಿಗಳನ್ನು ಏಳರಿಂದ 15 ತಿಂಗಳುಗಳ ವಿಳಂಬದೊಂದಿಗೆ ಮಾರ್ಚ್/ನವಂಬರ್ 2020ರಲ್ಲಿ ಪೂರ್ಣಗೊಳಿಸಲಾಗಿದ್ದಿತು.<br>• ಗುತ್ತಿಗೆಯ ನಿಗದಿತ ಅವಧಿಯನ್ನು ಗುತ್ತಿಗೆದಾರರುಗಳ ಕೋರಿಕೆಯ ಮೇರೆಗೆ ಯಾವುದೇ ಸಮಾಪನ ನಷ್ಟಗಳನ್ನು ವಿಧಿಸದೆಯೇ ನವಂಬರ್ 2020ರವರೆಗೆ ವಿಸ್ತರಿಸಲಾಗಿದ್ದಿತು.<br>• ನಿಗದಿತ ಕಾಲಾವದಿಯ ಒಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದುದಕ್ಕಾಗಿ ವಿಧಿಸಬೇಕಿದ್ದ ಸಮಾಪನ ನಷ್ಟಗಳು ₹ 1.70 ಕೋಟಿ[34] ಆಗಿದ್ದಿತು. |

**(ಮೂಲ: ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶ, ಸವಿವರ ಕಾಮಗಾರಿ ನೀಡಿಕೆ ಆದೇಶಗಳು, ಕಾರ್ಯಕ್ರಮಗಳ ಮೌಲ್ಯಮಾಪನ ಸಮೀಕ್ಷಾ ತಂತ್ರ ನಕಾಶೆಗಳು, ಗುವಿಸಕಂಯಿಂದ ಪತ್ರ ಪತ್ರವ್ಯವಹಾರಗಳು).**

[33] ಮೆ. ವಿಆರ್ ಪಾಟೀಲ್ ವಿವಿಧ್ ವಿದ್ಯುತ್ ನಿರ್ಮಾಣ್ ಪ್ರೈವೇಟ್ ಲಿಮಿಟೆಡ್ (ರಾಯಚೂರು), ಮೆ. ವಿಶ್ವನಾಥ್ ಪ್ರಾಜೆಕ್ಟ್ಸ್ ಲಿಮಿಟೆಡ್ (ಕಲಬುರಗಿ ಮತ್ತು ಬೀದರ್), ಮೆ. ಎಲ್‌ಎಎನ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜೀಸ್ (ಕೊಪ್ಪಳ), ಮೆ. ಸ್ಪೆಕ್ಟ್ರಮ್ ಕನ್ಸಲ್ಟೆಂಟ್ಸ್ (ಬಳ್ಳಾರಿ ಮತ್ತು ಹೊಸಪೇಟೆ), ವಿಇಎಂಪಿ ಪವರ್ ಸಿಸ್ಟಮ್ (ಯಾದಗಿರಿ).

[34] 1,94,263 × (₹ 76.30 ಕೋಟಿ / 4,34,851) × ಶೇಕಡಾ 5.

ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಗುವಿಸಕಂಯು ತನ್ನ ಸಮೀಕ್ಷಾ ಸಭೆಗಳ ವೇಳೆಯಲ್ಲಿ (ಜೂನ್/ಜುಲೈ 2019) ಮೆ. ಇಎಸ್‌ಪಿಆರ್‌ಓ ಸಲ್ಯುಷನ್ಸ್ ಪ್ರೈವೇಟ್ ಲಿಮಿಟೆಡ್ (ಮೇಲಿನ ಕೋಷ್ಟಕದಲ್ಲಿ ಕ್ರಮ ಸಂಖ್ಯೆ 1), ಇವರ ಕಾಮಗಾರಿಗಳಲ್ಲಿನ ನಿಕೃಷ್ಟಮಟ್ಟದ ಪ್ರಗತಿಯನ್ನು ಗಮನಿಸಿತು ಹಾಗೂ ಸವಾಲು ಷರತ್ತುಗಳನ್ನು ಉಲ್ಲಂಘಿಸಿ ಕಾಮಗಾರಿಗಳು ತ್ವರಿತವಾಗಿ ಪೂರ್ಣಗೊಳ್ಳುವುದಕ್ಕೆ ಅನುಕೂಲ ಕಲ್ಪಿಸುವ ಸಲುವಾಗಿ ಸಾಮಗ್ರಿಗಳ ಪರಿಶೀಲನೆಯನ್ನೂ ಸಹ ಮನ್ನಾ ಮಾಡಿತು (ಮೇ 2019). ನಿರ್ದಿಷ್ಟ ಕಾಲಮಿತಿಗೆ ಬದ್ಧರಾಗಿರುವಲ್ಲಿ ತಪ್ಪಿತಸ್ತರಾದ ಗುತ್ತಿಗೆದಾರರಿಗೆ ನೋಟೀಸುಗಳನ್ನೂ ಸಹ ನೀಡಲಾಯಿತು (ಜೂನ್/ಜುಲೈ/ಆಗಸ್ಟ್ 2019). ಆದಾಗ್ಯೂ, ಗುತ್ತಿಗೆದಾರರ ಕೋರಿಕೆಯ ಮೇರೆಗೆ ಒಡಂಬಡಿಕೆಯ ದಂಡನೆ ಷರತ್ತುಗಳನ್ನು ಜಾರಿಗೊಳಿಸದೆಯೇ ಗುತ್ತಿಗೆಯನ್ನು ಮಾರ್ಚ್ 2020ರವರೆಗೂ ವಿಸ್ತರಿಸಲಾಯಿತು. ಈ ರೀತಿಯಾಗಿ, ಅಲ್ಪಾವಧಿ ಟೆಂಡರುಗಳನ್ನು ಆಹ್ವಾನಿಸಿದ್ದರ ಹಾಗೂ ಸಾಮಗ್ರಿಗಳ ಪರಿಶೀಲನೆಯನ್ನು ಮನ್ನಾ ಮಾಡಿದ್ದರ ಉದ್ದೇಶವನ್ನು ವಿಫಲಗೊಳಿಸಲಾಯಿತು. ಅಲ್ಲದೆಯೇ, ಗುತ್ತಿಗೆ ಷರತ್ತುಗಳ ಅನುಸಾರ ಸಾಮಗ್ರಿಗಳ ಕಡ್ಡಾಯ ಪರಿಶೀಲನೆಯನ್ನು ಮನ್ನಾ ಮಾಡಿದ್ದರಿಂದ, ಕಾಮಗಾರಿಯಲ್ಲಿ ಉಪಯೋಗಿಸಲಾಗಿದ್ದ ಸಾಮಗ್ರಿಗಳ ಗುಣಮಟ್ಟವನ್ನು ಖಚಿತಪಡಿಸಿಕೊಂಡಿರಲಿಲ್ಲ.

- ಅದೇ ರೀತಿಯಲ್ಲಿ, ಮೀಟರುಗಳನ್ನು ಸ್ಥಳಾಂತರಿಸುವುದು ಮತ್ತು ಬದಲಾಯಿಸುವುದಕ್ಕೆ ಸಂಬಂಧಿತ ಗುತ್ತಿಗೆಗೆ ಸಂಬಂಧಿಸಿದಂತೆ (ಮೇಲಿನ ಕೋಷ್ಟಕದ ಕ್ರಮ ಸಂಖ್ಯೆ 2) ಗುವಿಸಕಂಯು ಮೀಟರುಗಳು, ಮುಂತಾದವುಗಳ ಖರೀದಿಯಲ್ಲಿ ಗುತ್ತಿಗೆದಾರರುಗಳ ಕಡೆಯಿಂದ ವಿಳಂಬಗಳನ್ನು ಗಮನಿಸಿತು ಹಾಗೂ ಕಾಮಗಾರಿಗಳನ್ನು ನಿಗದಿತ ದಿನಾಂಕದ ಒಳಗೆ ಪೂರ್ಣಗೊಳಿಸದಿದ್ದುದಕ್ಕಾಗಿ ಗುತ್ತಿಗೆದಾರರುಗಳಿಗೆ ನೋಟೀಸುಗಳನ್ನು ನೀಡಿತು (ನವಂಬರ್ 2020). ಆದಾಗ್ಯೂ, ಕಾಮಗಾರಿಗಳನ್ನು ಪೂರ್ಣಗೊಳಿಸಲು ಆರು ತಿಂಗಳುಗಳ ಕಾಲಾವಧಿಯು ಕಾರ್ಯಸಾಧ್ಯವಾಗಿರುವುದಿಲ್ಲ ಎಂಬುದಾಗಿ ತಿಳಿಸಿ ಗುತ್ತಿಗೆ ಅವಧಿಯನ್ನು ಸಮಾಪನ ನಷ್ಟಗಳನ್ನು ವಿಧಿಸದೆಯೇ ವಿಸ್ತರಿಸಿತು. ಗುತ್ತಿಗೆದಾರರು ಗುತ್ತಿಗೆ ಒಡಂಬಡಿಕೆಯ ಅನುಸಾರ ಒಪ್ಪಂದವಾಗಿದ್ದಂತಹ ವೇಳಾಪಟ್ಟಿಗೆ ಬದ್ಧರಾಗಿರಬೇಕಿದ್ದಿತಾದ್ದರಿಂದ, ಇದು ಸಮರ್ಥನೀಯವಾಗಿರಲಿಲ್ಲ.

ಈ ರೀತಿಯಾಗಿ, ಸಮಾಪನ ನಷ್ಟಗಳನ್ನು ವಿಧಿಸದೆಯೇ ಗುತ್ತಿಗೆ ಅವಧಿಯನ್ನು ವಿಸ್ತರಿಸಿದ್ದುದು ಗುತ್ತಿಗೆಯ ಸಾಮಾನ್ಯ ಷರತ್ತುಗಳು/ಸವಿವರ ಕಾಮಗಾರಿ ನೀಡಿಕೆ ಆದೇಶಗಳ ಉಲ್ಲಂಘನೆಯಾಗಿದ್ದಿತು. ಅಲ್ಲದೆಯೇ, ಸಮರ್ಪಕವಾದ ರೀತಿಯಲ್ಲಿ ಕಾರ್ಯನಿರ್ವಹಿಸದ ಗುತ್ತಿಗೆದಾರರ ಮೇಲೆ ನಿರೋಧಕ ಅಸ್ತ್ರವಾಗಿ ಪಾತ್ರವಹಿಸುವ ದಂಡನೀಯ ಷರತ್ತನ್ನು ಸೇರಿಸಿರುವುದರ ಮೂಲ ಉದ್ದೇಶವನ್ನೇ ಅದು ವಿಫಲಗೊಳಿಸಿದ್ದಿತು. ಮೇಲಿನ ಗುತ್ತಿಗೆಗಳಲ್ಲಿ ಗುತ್ತಿಗೆ ಷರತ್ತುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಗುತ್ತಿಗೆದಾರರಿಗೆ ವಿಧಿಸಬೇಕಿದ್ದ ₹ 2.30 ಕೋಟಿ ಮೊತ್ತದಷ್ಟು ಸಮಾಪನ ನಷ್ಟಗಳನ್ನು ವಿಧಿಸಿರಲಿಲ್ಲ.

ಚದುರಿದಂತೆ ಅಲ್ಲಿ ಇಲ್ಲಿ ಇದ್ದಂತಹ ಮನೆಗಳು, ಮಾರ್ಗಗಳಿಗೆ ಅನುಮತಿ, ಕೆಲಸಗಾರರ ನಿಕೃಷ್ಟಮಟ್ಟದ ಲಭ್ಯತೆ, ಮಳೆಗಳು ಮತ್ತು ಪ್ರವಾಹಗಳು (ಒಂದು ತಿಂಗಳು), ಹಾಗೂ ಚುನಾವಣೆಗಳು (ಎರಡು ತಿಂಗಳು), ಈ ಕಾರಣಗಳಿಂದಾಗಿ ಕಾಮಗಾರಿಗಳು ವಿಳಂಬಗೊಂಡವು ಎಂಬುದಾಗಿ ಸರ್ಕಾರವು ತನ್ನ ಉತ್ತರದಲ್ಲಿ ತಿಳಿಸಿತು (ನವಂಬರ್ 2021).

ಉತ್ತರದಲ್ಲಿ ನೀಡಲಾಗಿರುವ ಕಾರಣಗಳನ್ನು ಗುತ್ತಿಗೆದಾರರು ಸಮರ್ಪಕ ರೀತಿಯಲ್ಲಿ ಕಾರ್ಯನಿರ್ವಹಿಸದಿರುವ ಬಗ್ಗೆ ಚರ್ಚಿಸಲಾದಂತಹ ಸಮೀಕ್ಷಾ ಸಭೆಗಳಲ್ಲಿ ಚರ್ಚಿಸಿರಲಿಲ್ಲವಾದ್ದರಿಂದ ಹಾಗೂ ಈ ಕಾರಣಗಳನ್ನು ನಿಕೃಷ್ಟಮಟ್ಟದ ಪ್ರಗತಿಯಿಂದಾಗಿ ಗುತ್ತಿಗೆದಾರರಿಗೆ ನೀಡಿದ ನೋಟೀಸುಗಳ ದಾಖಲೆಗಳಲ್ಲಿ ಇಟ್ಟಿರಲಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಅಲ್ಲದೆಯೇ, ಅಂತಹ ಕಾರಣಗಳು ಗುತ್ತಿಗೆಯ ಅವಧಿಯನ್ನು ವಿಸ್ತರಿಸುವಲ್ಲಿ ಒಂದು ಭಾಗವಾಗಿರಲಿಲ್ಲ.

### *ಗುಣಮಟ್ಟ ಭರವಸೆ ವ್ಯವಸ್ಥೆ*

**3.9**. ಗುತ್ತಿಗೆಯ ಸಾಮಾನ್ಯ ಷರತ್ತುಗಳು (*ಷರತ್ತು 19 ಮತ್ತು 21ಎ*) ಹಾಗೂ ಸವಿವರ ಕಾಮಗಾರಿಗಳನ್ನು ನೀಡಿಕೆ ಆದೇಶಗಳ (*ಷರತ್ತು 11.1*) ಅನುಸಾರ ಸವಾಲುದಾರರು ತಮ್ಮ ಫ್ಯಾಕ್ಟರಿ ಸ್ಥಳದಲ್ಲಿ ಟೆಂಡರುಗಳಲ್ಲಿ ನಿರ್ದಿಷ್ಟನಿರೂಪಣೆಗಳಲ್ಲಿ ವಿವರಿಸಿರುವ ರೀತಿಯಲ್ಲಿ ಸಾಮಗ್ರಿಗಳನ್ನು ತಯಾರಿಸಿದ ನಂತರ ಪೂರ್ವ–ಪರೀಕ್ಷಣೆಗಾಗಿ ಕರೆಯನ್ನು ನೀಡಬೇಕಿದ್ದಿತು. ಸಾಮಗ್ರಿಗಳನ್ನು ವಿಸಕಂಗಳು ಅನುಮೋದಿಸಿರುವಂತಹ ಮಾರಾಟಗಾರರುಗಳಿಂದಲೇ ಖರೀದಿಸತಕ್ಕದ್ದು ಎಂಬುದಾಗಿಯೂ ಷರತ್ತುಗಳು ನಿರ್ದಿಷ್ಟಪಡಿಸಿದ್ದವು. ಅಂತಹ ಪರೀಕ್ಷಣೆಗಳು ಹಾಗೂ ಗುಣಮಟ್ಟದ ಪರಿಮಿತಿಗಳನ್ನು ಖಚಿತಪಡಿಸಿಕೊಂಡನಂತರ ವಿಸಕಂಗಳು ಸಾಮಗ್ರಿಗಳ ರವಾನೆಗಾಗಿ ನಿರ್ದೇಶನಗಳನ್ನು ನೀಡಬೇಕಿದ್ದಿತು.

ಲೆಕ್ಕಪರಿಶೋಧನೆಯು ಈ ಕೆಳಗಿನ ಲೋಪದೋಷಗಳನ್ನು ಗಮನಿಸಿತು:

- ಡಿಡಿಯುಜಿಜೆವೈ ಅಡಿಯಲ್ಲಿ ಎಂಟು ಜಿಲ್ಲೆಗಳಲ್ಲಿ[35] ಕೈಗೆತ್ತಿಕೊಳ್ಳಲಾದ ಗ್ರಾಮೀಣ ವಿದ್ಯುತೀಕರಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ (15 ಮಾರ್ಚ್ 2017/24 ಮೇ 2017 ದಿನಾಂಕಗಳ ಸವಿವರ ಕಾಮಗಾರಿಗಳ ನೀಡಿಕೆ ಆದೇಶಗಳು), ಬೆಂವಿಸಕಂಯು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಮನೆಗಳ ವಿದ್ಯುತೀಕರಣಕ್ಕಾಗಿ ಮುಕ್ತ ಮಾರುಕಟ್ಟೆಯಲ್ಲಿ ಅನುಮೋದಿತಗೊಂಡಿರದ ಮಾರಾಟಗಾರರುಗಳಿಂದ (ಮೆ. ಎಲ್‌ವಿಎಚ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಮತ್ತು ಮೆ. ಸೌತ್ ಏಷಿಯಾ ಇಂಪೆಕ್ಸ್ (ಇಂಡಿಯಾ) ಖರೀದಿಸಲಾದಂತಹ ₹ 31.80 ಕೋಟಿ ಮೌಲ್ಯದ (1,05,990 ಕುಟುಂಬಗಳು, ಪ್ರತೀ ಕುಟುಂಬಕ್ಕೂ ₹ 3,000 ದಂತೆ) ಸಾಮಗ್ರಿಗಳ[36] (ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸಂಬಂಧಿತ ಕಿಟ್ಟುಗಳು) ಪರೀಕ್ಷಣೆಯ ಮನ್ನಾ ಮಾಡುವಿಕೆಯನ್ನು ಅನುಮೋದಿಸಿದ್ದಿತು (ಸೆಪ್ಟಂಬರ್/ಡಿಸೆಂಬರ್ 2017). ಫಲಾನುಭವಿಗಳ ಸಮೀಕ್ಷೆಯ ಸಮಯದಲ್ಲಿ, ಮೀಟರು ಬೋರ್ಡುಗಳಿಗಾಗಿ ನಿಕೃಷ್ಟ ಗುಣಮಟ್ಟದ ಸಾಮಗ್ರಿಗಳನ್ನು ಬಳಸಲಾಗಿದ್ದಿತು (ಕೊರಟಗೆರೆ, ಸಿರಾ ಹಾಗೂ ತುಮಕೂರು ತಾಲ್ಲೂಕುಗಳು) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪ್ರಮಾಣಕ ಸವಾಲು ದಾಖಲೆಯು, ಮೀಟರು ಬೋರ್ಡುಗಳು ಉತ್ತಮ ಗುಣಮಟ್ಟದ ಮರದಿಂದ ಅಥವಾ ಫೈಬರ್ ಗ್ಲಾಸ್ ರೀಇನ್ಫೋರ್ಸ್ಡ್ ಪಾಲಿಸ್ಟರ್ ಶೀಟುಗಳ ಮೌಲ್ಡಿಂಗ್ ಕಾಂಪೌಂಡ್‌ನಿಂದ (ಎಸ್‌ಎಮ್‌ಸಿ) ತಯಾರಿಸಿರತಕ್ಕದ್ದು ಎಂಬುದಾಗಿ ನಿರ್ದಿಷ್ಟಪಡಿಸಿರುವುದು. ಆದಾಗ್ಯೂ, ಮೀಟರುಗಳನ್ನು (ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸಂಬಂಧಿತ ಕಿಟ್ಟುಗಳ ಭಾಗವಾಗಿದ್ದಿತು) ಪ್ಲೈವುಡ್ ಶೀಟಿನ ಮೇಲೆ ಸ್ಥಿರೀಕರಿಸಲಾಗಿದ್ದಿತು ಹಾಗೂ ಅವು ಜಖಂಗೊಂಡಿರುವ ಸ್ಥಿತಿಯಲ್ಲಿರುವುದು ಕಂಡುಬಂದವು.

- ಬೆಂವಿಸಕಂಯು, ಗುತ್ತಿಗೆದಾರರಿಗೆ ನೀಡಲಾಗಿದ್ದ ಗುತ್ತಿಗೆ ಅವಧಿಯು ಬಹಳ ಕಡಿಮೆ ಅವಧಿಯದಾಗಿದ್ದಿತು (ಎರಡು ತಿಂಗಳುಗಳು) ಎಂಬುದಾಗಿ ಸಮರ್ಥಿಸಿಕೊಂಡು ಗುತ್ತಿಗೆದಾರರ ಕೋರಿಕೆಯ ಮೇರೆಗೆ (ಮೇ/ಜುಲೈ 2019) ಎಚ್‌ಟಿ ಮೀಟರಿಂಗ್ ಕ್ಯೂಬಿಕಲ್‌ಗಳ (22 ಮತ್ತು 68 ಸಂಖ್ಯೆಗಳು) ಪರೀಕ್ಷಣೆಯನ್ನೂ ಸಹ ಎರಡು ಸಲ (ಮೇ/ಜುಲೈ 2019) ಮನ್ನಾ ಮಾಡಿದ್ದಿತು.

- ಡಿಡಿಜಿ ಅಡಿಯಲ್ಲಿ ದುಬಾರೆಯಲ್ಲಿನ ವಿದ್ಯುತೀಕರಣಗೊಂಡಿರದ ಜನವಸತಿ ಪ್ರದೇಶಗಳಲ್ಲಿ ಚಾವಿಸನಿವು ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂಬ ಕಾರಣವನ್ನು ನೀಡಿ ಫ್ಯಾಕ್ಟರಿ ಸ್ಥಳದಲ್ಲಿ ಸಾಮಗ್ರಿಗಳ (15,620 ಮೀಟರುಗಳಷ್ಟು ಯುಜಿ ಕೇಬಲ್ಲುಗಳು, 2,130 ಮೀಟರುಗಳಷ್ಟು ಡಿಸಿ ಕೇಬಲ್ಲುಗಳು, 40 ಸಂಖ್ಯೆಗಳಷ್ಟು ಎಸ್‌ಪಿವಿ ಸಿಸ್ಟಮ್‌ಗಳು, 100 ಸಂಖ್ಯೆಗಳಷ್ಟು ಎಲ್‌ಇಡಿ ಲ್ಯಾಂಪುಗಳು, ಬ್ಯಾಟರಿಗಳು, ಮೀಟರುಗಳು ಮತ್ತು ಮೀಟರು

[35] ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ರಾಮನಗರ ಮತ್ತು ತುಮಕೂರು.

[36] ಸೇವೆಗಳಿಗೆ ಬೆಂಬಲಗಳು, ಪಿವಿಸಿ ಪೈಪು, ಇನ್‌ಸ್ಯೂಲೇಟೆಡ್ ಕೇಬಲ್, ಮೀಟರು ಬೋರ್ಡ್, ಆಂತರಿಕ ವೈರಿಂಗ್ ಕಿಟ್ಟು, ಎಂಎಸ್ ಕಂಬ, ಇತ್ಯಾದಿ.

ಬಾಕ್ಸುಗಳು ಹಾಗೂ ಪ್ಯಾನೆಲ್‌ಗಳು) ಪರೀಕ್ಷಣೆಯನ್ನು ಮನ್ನಾ ಮಾಡಿದ್ದಿತು (ಮಾರ್ಚ್/ ಅಕ್ಟೋಬರ್ 2016).

ಈ ರೀತಿಯಾಗಿ, ವಿಸಕಂಗಳು ಸಾಮಗ್ರಿಗಳ ಪರೀಕ್ಷಣೆಯನ್ನು ಮನ್ನಾ ಮಾಡಿದ್ದ ಕಾರಣ ಕಾಮಗಾರಿಗಳಲ್ಲಿ ಉಪಯೋಗಿಸಲಾಗಿದ್ದಂತಹ ಸಾಮಗ್ರಿಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಯಾವುದೇ ಮಾರ್ಗೋಪಾಯಗಳನ್ನು ಹೊಂದಿರಲಿಲ್ಲ. ಅಲ್ಲದೆಯೇ, ಅನುಮೋದನೆಯನ್ನು ಹೊಂದಿರದ/ಅನಧಿಕೃತ ಮಾರಾಟಗಾರರಿಂದ ಸಾಮಗ್ರಿಗಳ ಖರೀದಿಗಾಗಿ ಬೆಂವಿಸಕಂಯು ನೀಡಿದ್ದ ಅನುಮೋದನೆಯು ಗುತ್ತಿಗೆ ಷರತ್ತಿನ ಮಾರ್ಗಾಂತರಣವಾಗಿದ್ದಿತು.

ಅನುಮೋದನೆಯನ್ನು ಹೊಂದಿರದ/ಅನಧಿಕೃತ ಮಾರಾಟಗಾರರಿಂದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸಂಬಂಧಿತ ಕಿಟ್ಟುಗಳಿಗೆ ಸಂಬಂಧಿಸಿದಂತೆ, ಸಿಂಗಲ್ ಫೇಸ್ ವಿದ್ಯುತ್ ಮೀಟರು ಹಾಗೂ ಮೀಟರು ಬಾಕ್ಸನ್ನು ಹೊರತುಪಡಿಸಿದಂತೆ ನಿರ್ದಿಷ್ಟ ಅನುಮೋದಿತ ಮಾರಾಟಗಾರರುಗಳು ಇರಲಿಲ್ಲವಾದ್ದರಿಂದ ಇತರೆ ಐಟಂಗಳನ್ನು ಮುಕ್ತ ಮಾರುಕಟ್ಟೆಯಿಂದ ಖರೀದಿಸಬೇಕಿದ್ದಿತು ಎಂಬುದಾಗಿ ಸರ್ಕಾರವು ತಿಳಿಸಿತು (ನವಂಬರ್ 2021). ಎಚ್‌ಟಿ ಮೀಟರಿಂಗ್ ಕ್ಯೂಬಿಕಲ್ಸ್‌ಗಳ ಪರೀಕ್ಷಣೆಗೆ ಸಂಬಂಧಿಸಿದಂತೆ, ಸಾಮಗ್ರಿಯ ಮೂಲಮಾದರಿಯನ್ನು ಫ್ಯಾಕ್ಟರಿ ಸ್ಥಳದಲ್ಲಿ ಮಾಡಲಾಗಿದ್ದಿತಾದ್ದರಿಂದ ಹಾಗೂ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಬೇಕಾಗಿದ್ದಿತಾದರಿಂದ 90 ಹೆಚ್‌ಟಿ ಕ್ಯೂಬಿಕಲ್‌ಗಳಿಗೆ ಪರೀಕ್ಷಣೆಯನ್ನು ಮನ್ನಾ ಮಾಡಲಾಗಿದ್ದಿತು ಎಂಬುದಾಗಿ ತಿಳಿಸಲಾಗಿದ್ದಿತು.

ಉತ್ತರವು ಒಪ್ಪುವಂತಿಲ್ಲ. ಪ್ರಮಾಣಕ ಸವಾಲು ದಾಖಲೆಯ (ಷರತ್ತು 21ಎ) ಮತ್ತು ಸವಿವರ ಕಾಮಗಾರಿ ನೀಡಿಕೆ ಆದೇಶದ (ಷರತ್ತು 11 ಮತ್ತು 12) ಅನುಸಾರ, ಕಾರ್ಖಾನೆ ಸ್ಥಳಕ್ಕೆ ಭೇಟಿ ನೀಡಿ ತಯಾರಕರ ಸಾಮರ್ಥ್ಯವನ್ನು ನಿರ್ಧಾರಣೆ ಮಾಡಿದ ನಂತರ ವಿಸಕಂಗಳು ಹೊಸ ಮಾರಾಟಗಾರರುಗಳಿಗೆ ಅನುಮೋದನೆ ನೀಡಬೇಕಿದ್ದಿತು. ಆದಾಗ್ಯೂ, ಬೆಂವಿಸಕಂಯು ₹ 31.80 ಕೋಟಿ ಮೊತ್ತದಷ್ಟು ಸಾಮಗ್ರಿಗಳನ್ನು ಅನುಮೋದನೆ ಹೊಂದಿರದ ಮಾರಾಟಗಾರರುಗಳಿಂದ (ಮೆ. ಎಲ್‌ವಿಎಚ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಮತ್ತು ಮೆ. ಸೌತ್ ಏಷಿಯಾ ಇಂಪೆಕ್ಸ್ (ಇಂಡಿಯಾ)) ತಯಾರಕರುಗಳ ಸಾಮರ್ಥ್ಯವನ್ನು ನಿರ್ಧಾರಣೆ ಮಾಡದೆಯೇ ಖರೀದಿಸಿದ್ದಿತು. ಮುಂದುವರೆದು, ಎಚ್‌ಟಿ ಮೀಟರಿಂಗ್ ಕ್ಯೂಬಿಕಲ್ಸ್‌ನ ಪರೀಕ್ಷಣೆಯನ್ನು ಮನ್ನಾ ಮಾಡಿದ್ದು ಪ್ರಮಾಣಕ ಸವಾಲು ಷರತ್ತುಗಳ ಉಲ್ಲಂಘನೆಯಾಗಿದ್ದಿತು.

ಚಾವಿಸನಿಯಿಂದ ಮನ್ನಾ ಮಾಡಿರುವುದಕ್ಕೆ ಸಂಬಂಧಿಸಿದಂತೆ (ವಿಕೇಂದ್ರೀಕೃತ ವಿತರಿಸಲ್ಪಟ್ಟಿರುವ ವಿದ್ಯುತ್ ಉತ್ಪಾದನೆ(ಡಿಡಿಜಿ) ಅಡಿಯಲ್ಲಿ ದುಬಾರೆ ಜನವಸತಿ ಪ್ರದೇಶಗಳಲ್ಲಿ), ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಪರೀಕ್ಷಣೆಯನ್ನು ಮನ್ನಾ ಮಾಡಲಾಯಿತು ಎಂಬುದಾಗಿ ಪುನರುಚ್ಚರಿಸಿದ್ದಿತು. ಆದಾಗ್ಯೂ, ಪರೀಕ್ಷಣೆಯನ್ನು ಮನ್ನಾ ಮಾಡಿದ್ದು ಗುತ್ತಿಗೆ ಷರತ್ತುಗಳ ಉಲ್ಲಂಘನೆಯಾಗಿದ್ದಿತು ಹಾಗೂ ಸಾಮಗ್ರಿಗಳ ಗುಣಮಟ್ಟದ ಬಗ್ಗೆ ಯಾವುದೇ ಭರವಸೆಯೂ ಇರಲಿಲ್ಲ.

## ಸೌಭಾಗ್ಯ ಅಡಿಯಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ್ದು

**3.10.** ವಿಳಂಬದೊಂದಿಗೆ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದುದು, ಅನುಮೋದನೆಗೊಂಡಿರದ ಅಂದಾಜುಗಳೊಂದಿಗೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ್ದುದು (₹ 4.75 ಕೋಟಿ), ನಿಗದಿತ ಕಾಲಮಿತಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದುದು, ಗುತ್ತಿಗೆದಾರರ ಮಳಿಗೆಗಳಲ್ಲಿ ಸಾಮಗ್ರಿಗಳ ಪರೀಕ್ಷಣೆಯಲ್ಲಿ ಲೋಪದೋಷಗಳು ಹಾಗೂ ಗುತ್ತಿಗೆದಾರರಿಗೆ ಪಾವತಿಗಳನ್ನು ಅಧಿಕ ಪ್ರಮಾಣದಲ್ಲಿ ಮಾಡಿದ್ದುದು (₹ 23.35 ಲಕ್ಷ), ಇವುಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ***ಕಂಡಿಕೆಗಳು 3.10.1ರಿಂದ 3.10.4ರಲ್ಲಿ*** ಚರ್ಚಿಸಲಾಗಿದೆ.

### *ಕಾಮಗಾರಿಗಳ ಪೂರ್ಣಗೊಳ್ಳುವಿಕೆ*

**3.10.1.** ಪರೀಕ್ಷಾ-ಪರಿಶೀಲನೆ ಮಾಡಲಾದ ಜಿಲ್ಲೆಗಳಲ್ಲಿ ಸೌಭಾಗ್ಯ ಯೋಜನೆಯ ಅಡಿಯಲ್ಲಿ ಕಾರ್ಯಗತಗೊಳಿಸಲಾದ ವಿದ್ಯುತೀಕರಣ ಕಾಮಗಾರಿಗಳ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ

ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 3.7: ಸೌಭಾಗ್ಯ ಅಡಿಯಲ್ಲಿ ಗುತ್ತಿಗೆಗಳ ವಿವರಗಳು**

| ಕ್ರಮ ಸಂಖ್ಯೆ | ಜಿಲ್ಲೆ | ಗುತ್ತಿಗೆಯನ್ನು ನೀಡಿದ ದಿನಾಂಕ | ಗುತ್ತಿಗೆ ಮೌಲ್ಯ (₹ ಕೋಟಿ) | ಗುತ್ತಿಗೆ ಷರತ್ತಿನ ಅನುಸಾರ ಪೂರ್ಣಗೊಳಿಸಲು ನಿಗದಿತ ದಿನಾಂಕ | ಪೂರ್ಣಗೊಳಿಸಲಾದ ವಾಸ್ತವಿಕ ದಿನಾಂಕ | ವಿಳಂಬ (ತಿಂಗಳುಗಳು) |
|---|---|---|---|---|---|---|
| 1 | ಬೀದರ್ | ನವಂಬರ್ 2018 | 30.22 | ಫೆಬ್ರವರಿ 2019 | ಮಾರ್ಚ್ 2020 | 13 |
| 2 | ರಾಯಚೂರು | ಡಿಸೆಂಬರ್ 2018 /ಜನವರಿ 2019 | 6.23 | ಮಾರ್ಚ್ 2019 | ಅಕ್ಟೋಬರ್ 2019 | 7 |
| 3 | ಹಾವೇರಿ | ಡಿಸೆಂಬರ್ 2018 | 19.57 | ಮಾರ್ಚ್ 2019 | ನವಂಬರ್ 2019 | 8 |
| 4 | ಚಿಕ್ಕಮಗಳೂರು | ಜನವರಿ 2019 | 2.64 | ಮಾರ್ಚ್ 2019 | ಆಗಸ್ಟ್ 2019 | 5 |
| 5 | ಉಡುಪಿ | ಡಿಸೆಂಬರ್ 2018 | 12.42 | ಫೆಬ್ರವರಿ 2019 | ಜುಲೈ 2019 | 5 |

**(ಮೂಲ: ಆಶಯ ಪತ್ರಗಳು/ಸವಿವರ ಕಾಮಗಾರಿ ನೀಡಿಕೆ ಆದೇಶಗಳು, ಯೋಜನೆ ಮುಕ್ತಾಯಗೊಂಡಿರುವುದಕ್ಕೆ ಸಂಬಂಧಿತ ವರದಿಗಳು)**

ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ನಿಗದಿತ ದಿನಾಂಕವನ್ನು ಮೀರಿದಂತೆ ಏಳರಿಂದ ಹದಿಮೂರು ತಿಂಗಳುಗಳ ವಿಳಂಬಗಳೊಂದಿಗೆ ಪೂರ್ಣಗೊಳಿಸಲಾಗಿದ್ದಿತು, ಇಂಧನ ಮಂತ್ರಾಲಯವು ಯೋಜನೆಯನ್ನು ಪೂರ್ಣಗೊಳಿಸಲು ಕಾಲಾವಧಿಯನ್ನು ವಿಸ್ತರಿಸಿರುವುದು ಎಂಬುದಾಗಿ ತಿಳಿಸಿ, ಗುವಿಸಕಂಯು ಯಾವುದೇ ಸಮಾಪನ ನಷ್ಟಗಳನ್ನು ವಿಧಿಸದೆಯೇ ಗುತ್ತಿಗೆಗಳನ್ನು ನಿಗದಿತ ದಿನಾಂಕಗಳನ್ನು ಮೀರಿದಂತೆ ವಿಸ್ತರಿಸಿದ್ದಿತು;

- ಹಾವೇರಿ ಜಿಲ್ಲೆಯ ಗುತ್ತಿಗೆಗೆ ಸಂಬಂಧಿಸಿದಂತೆ, ಹುವಿಸಕಂಯು, ಕಾಮಗಾರಿಗಳಿಗೆ ಅಗತ್ಯವಿರುವ ಸಾಮಗ್ರಿಗಳ ಸರಬರಾಜಿನಲ್ಲಿ ವಿಳಂಬವಾಗಿದ್ದಿತು ಹಾಗೂ ಯೋಜನೆಗಾಗಿ ಮೀಸಲಿರಿಸಲಾಗಿದ್ದ ಕೆಲವು ಸಾಮಗ್ರಿಗಳನ್ನು ಇತರೆ ತುರ್ತು ಕಾಮಗಾರಿಗಳಿಗಾಗಿ ಮಾರ್ಗಾಂತರಣ ಮಾಡಲಾಗಿದ್ದಿತು ಎಂಬುದಾಗಿ ತಿಳಿಸಿ ಸಮಾಪನ ನಷ್ಟಗಳನ್ನು ವಿಧಿಸದೆಯೇ ಗುತ್ತಿಗೆ ಅವಧಿಗಳನ್ನು ನಿಗದಿತ ದಿನಾಂಕಗಳನ್ನು ಮೀರಿದಂತೆ ವಿಸ್ತರಿಸಿದ್ದಿತು;

- ವಿದ್ಯುತೀಕರಣಗೊಂಡಿರದ ಕುಟುಂಬಗಳ ಸಿದ್ಧ ಮಾಹಿತಿಯು ಲಭ್ಯವಿರದಿದ್ದ ಕಾರಣ ಸಂಖ್ಯೆಯನ್ನು ಕಂಡುಕೊಳ್ಳುವಲ್ಲಿ ಹಾಗೂ ಅಂತಹ ಮಾಹಿತಿಯನ್ನು ಗ್ರಾಮ ಪಂಚಾಯತಿಗಳಿಂದ ಸಂಗ್ರಹಿಸುವಲ್ಲಿ ತೊಂದರೆಯನ್ನು ಎದುರಿಸಿದ ಕಾರಣ ಕಾಮಗಾರಿಗಳು ಪೂರ್ಣಗೊಳ್ಳಲು ವಿಳಂಬವಾಗಿದ್ದಿತು (ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉಡುಪಿ) ಎಂಬುದಾಗಿ ಮಂವಿಸಕಂಯು ತಿಳಿಸಿತು.

ಈ ರೀತಿಯಾಗಿ, ಗುತ್ತಿಗೆದಾರರ ಕಡೆಯಿಂದ ಸಂಭವಿಸಿದ ವಿಳಂಬವು ಗುತ್ತಿಗೆ ಷರತ್ತುಗಳ ದಂಡ ವಿಧಿಸುವ ಅನುವುಗಳನ್ನು ಆಕರ್ಷಿಸುವುದರಿಂದ ಇಂಧನ ಮಂತ್ರಾಲಯವು ಯೋಜನೆಯನ್ನು ಪೂರ್ಣಗೊಳಿಸಲು ಕಾಲಮಿತಿಯನ್ನು ವಿಸ್ತರಿಸಿದ್ದಿತು ಎಂಬ ಕಾರಣದ ಮೇರೆಗೆ ಗುತ್ತಿಗೆ ಅವಧಿಯನ್ನು ವಿಸ್ತರಿಸುವ ಸಲುವಾಗಿ ಗುವಿಸಕಂಯು ತೆಗೆದುಕೊಂಡ ನಿರ್ಧಾರವು ಸಮರ್ಥನೀಯವಾಗಿರಲಿಲ್ಲ. ಮುಂದುವರೆದು, ವಿಸಕಂಗಳು ಕಾಮಗಾರಿಗಳನ್ನು ನೀಡುವ ಮೊದಲು ಸಾಮಗ್ರಿಗಳ ಲಭ್ಯತೆಯನ್ನು ಹಾಗೂ ವಿದ್ಯುತೀಕರಣಗೊಂಡಿರದ ಕುಟುಂಬಗಳನ್ನು ಗುರುತಿಸಿರುವುದನ್ನು ಖಚಿತಪಡಿಸಿಕೊಂಡಿರಲಿಲ್ಲ.

ಮಂವಿಸಕಂಯಲ್ಲಿ ಕಾಮಗಾರಿಗಳು ವಿಸ್ತರಿಸಲ್ಪಟ್ಟಿದ್ದಂತಹ ಕಾಲಮಿತಿಯೊಳಗೆ ಪೂರ್ಣಗೊಂಡಿದ್ದವು ಎಂಬುದಾಗಿ ಸರ್ಕಾರವು ತಿಳಿಸಿತು (ನವಂಬರ್ 2021).

ವಿದ್ಯುತೀಕರಣದ ಉದ್ದೇಶಿತ ಪ್ರಯೋಜನಗಳು ಫಲಾನುಭವಿಗಳಿಗೆ ಸಮಯೋಚಿತವಾಗಿ ತಲುಪಿರಲಿಲ್ಲ ಎಂಬ ವಾಸ್ತವಾಂಶವು ಉಳಿದುಕೊಂಡಿದ್ದಿತು. ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯು ಯಾವುದೇ ಭೂ ಸ್ವಾಧೀನ, ಶಾಸನಬದ್ಧ ಅನುಮತಿಗಳು, ಇತ್ಯಾದಿಗಳನ್ನು ಒಳಗೊಂಡಿರಲಿಲ್ಲ ಎಂಬ ವಾಸ್ತವಾಂಶದ

ಹೊರತಾಗಿಯೂ ವಿಳಂಬಗೊಂಡಿದ್ದಿತು. ಗುವಿಸಕಂ ಮತ್ತು ಹುವಿಸಕಂಗೆ ಸಂಬಂಧಿಸಿದಂತೆ ಉತ್ತರವನ್ನು ನೀಡಿರುವುದಿಲ್ಲ.

***ಅನುಮೋದಿತ ಅಂದಾಜುಗಳಿಲ್ಲದೆಯೇ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ್ದುದು***

**3.10.2**. ಲೆಕ್ಕಪತ್ರಗಳ ಕೈಪಿಡಿ ಸಂಪುಟ IIರ ಅನುಸಾರ, ಸವಿವರ ಪೂರ್ವಭಾವಿ ಯೋಜನೆ ಹಾಗೂ ಅಂದಾಜುಗಳು ಸಕ್ಷಮ ಅಧಿಕಾರಿಯವರಿಂದ ಅನುಮೋದಿಸಲ್ಪಟ್ಟಿರದ ಹೊರತು ಯಾವುದೇ ಕಾಮಗಾರಿಯನ್ನು ಕಾರ್ಯಗತಗೊಳಿಸುವ ಸಲುವಾಗಿ ಕೈಗೆತ್ತಿಕೊಳ್ಳಕೂಡದು. ಅನುಮೋದಿತ ಅಂದಾಜಿನಲ್ಲಿ ನಿರ್ದಿಷ್ಟವಾಗಿ ಅನುವು ಮಾಡದಿರುವ ಕಾಮಗಾರಿಗಳ ಐಟಂಗಳನ್ನು ಪರಿಷ್ಕೃತ ಅಂದಾಜನ್ನು ಅಥವಾ ಪೂರಕ ಅಂದಾಜನ್ನು ಅನುಮೋದಿಸದ ಹೊರತು ಕಾರ್ಯಗತಗೊಳಿಸತಕ್ಕದ್ದಲ್ಲ.

ರಾಯಚೂರು ಜಿಲ್ಲೆಯಲ್ಲಿ ಸೌಭಾಗ್ಯ ಯೋಜನೆಯ ಅಡಿಯಲ್ಲಿ ಗ್ರಾಮೀಣ ವಿದ್ಯುತೀಕರಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ₹ 4.75 ಕೋಟಿ[37] (ಡಿಸೆಂಬರ್ 2018/ಜನವರಿ 2019ರಲ್ಲಿ ನೀಡಲಾಗಿದ್ದುದು) ಮೌಲ್ಯದಷ್ಟು ಕಾಮಗಾರಿಗಳನ್ನು ಸಕ್ಷಮ ಅಧಿಕಾರಿಯವರಿಂದ (ಕಾರ್ಯನಿರ್ವಾಹಕ ಇಂಜಿನಿಯರ್/ ಅಧೀಕ್ಷಕ ಇಂಜಿನಿಯರ್/ ಮುಖ್ಯ ಇಂಜಿನಿಯರ್) ಅಂದಾಜುಗಳಿಗೆ ಪೂರ್ವಾನುಮೋದನೆಯನ್ನು ಪಡೆದುಕೊಳ್ಳದೆಯೇ ಕಾರ್ಯಗತಗೊಳಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಗುವಿಸಕಂಯು ಒದಗಿಸಿದ ಮಾಹಿತಿಯಂತೆ, ಈ ಕಾಮಗಾರಿಗಳನ್ನು ಮಾರ್ಚ್ 2019 ಹಾಗೂ ಅಕ್ಟೋಬರ್ 2019ರ ನಡುವೆ ಪೂರ್ಣಗೊಳಿಸಲಾಗಿದ್ದಿತಾದಲ್ಲಿ, ವಾಸ್ತವಿಕವಾಗಿ ಕಾರ್ಯಗತಗೊಳಿಸಲಾದ ಪರಿಮಾಣಗಳನ್ನು ಸೂಚಿಸಿದಂತೆ ಕಾಮಗಾರಿ ಆದೇಶಗಳಿಗೆ ಅಕ್ಟೋಬರ್ 2019 ಹಾಗೂ ಮಾರ್ಚ್ 2020ರ ನಡುವೆ ಅನುಮೋದನೆ ನೀಡಲಾಗಿದ್ದಿತು, ಇದು ಕಾಮಗಾರಿಗಳನ್ನು ಪೂರ್ಣಗೊಳಿಸಿದನಂತರ ಘಟನೋತ್ತರವಾಗಿ ಅನುಮೋದನೆ ನೀಡಲಾಗಿದ್ದಿತು ಎಂಬುದಾಗಿ ಅರ್ಥೈಸುತ್ತದೆ. ಕೈಪಿಡಿಯ ಅನುವುಗಳಿಗೆ ವಿರುದ್ಧವಾಗಿ ಪೂರ್ವಾನುಮೋದನೆಯನ್ನು ಹೊಂದಿರದೆಯೇ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗಿದ್ದಿತಾದ್ದರಿಂದ, ಇದು ಕಾಮಗಾರಿಗಳನ್ನು ಅನಧಿಕೃತವಾಗಿ ಕಾರ್ಯಗತಗೊಳಿಸಿದಂತಾಗಿದ್ದಿತು.

ಮೂರು ತಿಂಗಳುಗಳ ನಿರ್ದಿಷ್ಟ ಅವಧಿಯ ಒಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವ ಉದ್ದೇಶದಿಂದ ತಾತ್ಕಾಲಿಕ/ಅಂದಾಜು ಮೊತ್ತದೊಂದಿಗೆ ಕಾಮಗಾರಿ ಆದೇಶಗಳನ್ನು ನೀಡಲಾಗಿದ್ದಿತು ಎಂಬುದಾಗಿ ಸರ್ಕಾರವು ತಿಳಿಸಿತು (ನವಂಬರ್ 2021).

ತಾತ್ಕಾಲಿಕ/ಅಂದಾಜು ಮೊತ್ತದೊಂದಿಗೆ ನೀಡಲಾಗಿದ್ದಿತೆಂಬುದಾಗಿ ಹೇಳಲಾದ ಕಾಮಗಾರಿ ಆದೇಶವನ್ನು ದಾಖಲೆಗಳಲ್ಲಿ ಇಟ್ಟಿರಲಿಲ್ಲವಾದ್ದರಿಂದ, ಉತ್ತರವು ಯಾವುದೇ ವಾಸ್ತವಾಂಶದ ಬೆಂಬಲದಿಂದ ಕೂಡಿರಲಿಲ್ಲ. ಅಲ್ಲದೆಯೇ ಕೈಪಿಡಿಯ ಅನುವುಗಳ ಅನುಸಾರ ತಾತ್ಕಾಲಿಕ/ಅಂದಾಜು ಮೊತ್ತದೊಂದಿಗಿನ ಆದೇಶಗಳನ್ನು ಕೇವಲ ತುರ್ತು ಕಾಮಗಾರಿಗಳಿಗೆ ಮಾತ್ರ ನೀಡಬಹುದಾಗಿದ್ದಿತು.

***ಗುತ್ತಿಗೆದಾರರ ಉಗ್ರಾಣದಲ್ಲಿ ಸಾಮಗ್ರಿಗಳ ಪರೀಕ್ಷಣೆಯಲ್ಲಿನ ಲೋಪದೋಷಗಳು***

**3.10.3**. ಸವಾಲು ಷರತ್ತುಗಳ ಅನುಸಾರ, ಸಾಮಗ್ರಿಗಳನ್ನು ರವಾನೆ ಮಾಡುವ ಮೊದಲು ಕಾರ್ಖಾನೆ ಸ್ಥಳದಲ್ಲಿ ಗುವಿಸಕಂಯ ಗುಣಮಟ್ಟ ನಿಯಂತ್ರಣ ವಿಭಾಗವು ಸಾಮಗ್ರಿಗಳನ್ನು ಪರೀಕ್ಷಿಸಬೇಕಿದ್ದಿತು ಹಾಗೂ ತದನಂತರ ಗುತ್ತಿಗೆದಾರರಿಗೆ ರವಾನೆಗಾಗಿ ನಿರ್ದೇಶನಗಳನ್ನು ನೀಡಬೇಕಿದ್ದಿತು. ಈ ಸಾಮಗ್ರಿಗಳನ್ನು ತದನಂತರದಲ್ಲಿ ರವಾನಿಸಬೇಕಿದ್ದಿತು ಹಾಗೂ ಕಾಮಗಾರಿಗಳಲ್ಲಿ ಉಪಯೋಗಿಸಿಕೊಳ್ಳುವ ಸಲುವಾಗಿ ಗುತ್ತಿಗೆದಾರರ ಉಗ್ರಾಣಗಳಲ್ಲಿ ಇರಿಸಬೇಕಿದ್ದಿತು. ಉಗ್ರಾಣಗಳಲ್ಲಿ ಸ್ವೀಕರಿಸಲಾದಂತಹ ಸಾಮಗ್ರಿಗಳನ್ನು ಅವುಗಳ ಗುಣಮಟ್ಟ ಮತ್ತು ಪರಿಮಾಣಗಳ ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಗುವಿಸಕಂಯಿಂದ ಭೌತಿಕ ಪರಿಶೀಲನೆಗೆ ಒಳಪಡಬೇಕಿದ್ದಿತು.

1,084 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸುವ

[37] ಮಾನ್ವಿ (₹ 1.31 ಕೋಟಿ); ಆರ್‌ಎಸ್‌ಡಿ, ರಾಯಚೂರು (₹ 0.98 ಕೋಟಿ); ದೇವದುರ್ಗ (₹ 1.23 ಕೋಟಿ); ಸಿಂಧನೂರು (₹ 1.23 ಕೋಟಿ).

ಸಲುವಾಗಿನ ಗುತ್ತಿಗೆಗೆ ಸಂಬಂಧಿಸಿದಂತೆ, ರಾಯಚೂರು ಗ್ರಾಮೀಣ ಉಪ–ವಿಭಾಗವು ₹ 1.12 ಕೋಟಿ ಮೊತ್ತಕ್ಕೆ ನೀಡಿದ್ದಂತಹ (ಜನವರಿ 2019) ಕಾಮಗಾರಿಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಕಾರ್ಖಾನೆ ಸ್ಥಳದಲ್ಲಿ ಸಾಮಗ್ರಿಗಳ ರವಾನೆಪೂರ್ವ ಪರೀಕ್ಷಣೆಗಾಗಿ ಹಾಗೂ ರವಾನೆಗಾಗಿ ನಿರ್ದೇಶನಗಳನ್ನು ಮಾರ್ಚ್ 2019 ಹಾಗೂ ಮೇ 2019ರ ನಡುವೆ ನೀಡಲಾಗಿದ್ದಿತಾದಲ್ಲಿ, ಗುತ್ತಿಗೆದಾರರ ಉಗ್ರಾಣಗಳಲ್ಲಿ ಭೌತಿಕ ಪರಿಶೀಲನೆಯ ದಿನಾಂಕವನ್ನು 26 ಫೆಬ್ರವರಿ 2019 ಅಂದರೆ ಸಾಮಗ್ರಿಗಳ ರವಾನೆಪೂರ್ವ ಪರೀಕ್ಷಣೆ ಹಾಗೂ ರವಾನೆಗಾಗಿ ನಿರ್ದೇಶನಗಳನ್ನು ನೀಡುವ ಮೊದಲೇ ಎಂಬುದಾಗಿ ಪ್ರಮಾಣೀಕರಿಸಲಾಗಿದ್ದಿತು;

- ಕಾಮಗಾರಿಗಳನ್ನು 25 ಮಾರ್ಚ್ 2019ರಂದು ಪೂರ್ಣಗೊಳಿಸಲಾಗಿದ್ದಿತು ಎಂಬುದನ್ನು ಅಳತೆ ಪುಸ್ತಕವು ಸೂಚಿಸುತ್ತಿದ್ದಿತು, ಅಂದರೆ ಕಾರ್ಖಾನೆ ಸ್ಥಳದಲ್ಲಿ ಸಾಮಗ್ರಿಗಳ ರವಾನೆಪೂರ್ವ ಪರೀಕ್ಷಣೆ ಮಾಡುವುದಕ್ಕೆ ಮೊದಲೇ.

ಆದ್ದರಿಂದ, ಸಾಮಗ್ರಿಗಳ ಸ್ವೀಕೃತಿ, ಗುತ್ತಿಗೆದಾರರ ಉಗ್ರಾಣಗಳಲ್ಲಿ ಅವುಗಳ ಭೌತಿಕ ಪರಿಶೀಲನೆ, ಹಾಗೂ ಕಾಮಗಾರಿಗಳು ಪೂರ್ಣಗೊಂಡಿದ್ದು, ಇವುಗಳ ಬಗ್ಗೆ ಪ್ರಾಮಾಣಿಕತೆ/ನಿಖರತೆಯನ್ನು ಲೆಕ್ಕಪರಿಶೋಧನೆಯು ಖಚಿತಪಡಿಸಿಕೊಳ್ಳಲಾಗಲಿಲ್ಲ.

ಕಾಮಗಾರಿಗಳನ್ನು ನಿರ್ದಿಷ್ಟ ಅವಧಿಯ ಒಳಗೆ ಪೂರ್ಣಗೊಳಿಸುವ ಸಲುವಾಗಿ, ಸಂಬಂಧಿತ ಕಾರ್ಯಗತಗೊಳಿಸುವ ಅಧಿಕಾರಿಯವರು ಸಾಮಗ್ರಿಗಳನ್ನು ಕಾರ್ಖಾನೆ ಸ್ಥಳದಲ್ಲಿ ಪರೀಕ್ಷಣೆ ಮಾಡಿದ್ದರು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವಂಬರ್ 2021).

ಉತ್ತರವು ರವಾನೆ ನಿರ್ದೇಶನಗಳ ದಿನಾಂಕಗಳು ಹಾಗೂ ಗುತ್ತಿಗೆದಾರರುಗಳ ಉಗ್ರಾಣಗಳಲ್ಲಿ ಭೌತಿಕ ಪರಿಶೀಲನೆ ದಿನಾಂಕ ಹಾಗೂ ಕಾಮಗಾರಿಗಳು ಪೂರ್ಣಗೊಂಡಿರುವ ದಿನಾಂಕಗಳ ನಡುವಿನ ಅಸಮಂಜಸತೆಗಳಿಗೆ ಸಂಬಂಧಿಸಿದಂತೆ ಉತ್ತರವು ಮೌನವಾಗಿದ್ದಿತು.

***ಗುತ್ತಿಗೆದಾರರಿಗೆ ಅಧಿಕ ಪ್ರಮಾಣದಲ್ಲಿ ಪಾವತಿಸಿದ್ದುದು***

**3.10.4**. ಗುವಿಸಕಂಯು ಬೀದರ್ ಜಿಲ್ಲೆಯಲ್ಲಿ ಸೌಭಾಗ್ಯ ಯೋಜನೆಯ ಅಡಿಯಲ್ಲಿ 9,432 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸುವ ಸಲುವಾಗಿ ಗುತ್ತಿಗೆಯನ್ನು ₹ 17.17ಕೋಟಿ ಮೌಲ್ಯಕ್ಕೆ ಮೆ. ಮಹದೇವ್ ಪ್ರೀಸ್ಟ್ರೆಸ್ಡ್ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್, ಇವರಿಗೆ ನೀಡಿತು (ನವಂಬರ್ 2018). ಮೂಲಸೌಕರ್ಯ ಕಾಮಗಾರಿಗಳನ್ನು (ವಿತರಣಾ ಟ್ರಾನ್ಸ್‌ಫಾರ್ಮರುಗಳು, 11ಕಿವ್ಯಾ ಮಾರ್ಗಗಳು, ಎಲ್‌ಟಿ ಮಾರ್ಗಗಳು, ಇತ್ಯಾದಿ) ಒಳಗೊಂಡಿದ್ದಂತಹ ಗುತ್ತಿಗೆಯನ್ನು ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶವನ್ನು ನೀಡಿದ ದಿನಾಂಕದಿಂದ ಮೂರು ತಿಂಗಳುಗಳ ಒಳಗೆ ಅಂದರೆ ಫೆಬ್ರವರಿ 2019ರ ಒಳಗೆ ಪೂರ್ಣಗೊಳಿಸಬೇಕಿದ್ದಿತು. 9,426 ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸುವ ಕಾಮಗಾರಿಗಳು ಮಾರ್ಚ್ 2020ರಲ್ಲಿ ₹ 9.78 ಕೋಟಿ ಒಟ್ಟಾರೆ ಮೊತ್ತದಲ್ಲಿ ಪೂರ್ಣಗೊಂಡಿದ್ದವು. ವೆಚ್ಚದಲ್ಲಿನ ಇಳಿಕೆಯು ಪ್ರಮುಖವಾಗಿ ಮೂಲಸೌಕರ್ಯ ಕಾಮಗಾರಿಗಳು ಶೇಕಡಾ 43.04ರಷ್ಟು ಕಡಿಮೆಯಾಗಿದ್ದ ಕಾರಣದಿಂದ ಸಂಭವಿಸಿದ್ದಿತು.

ಲೆಕ್ಕಪರಿಶೋಧನೆಗೆ ಒದಗಿಸಲಾದ ದಾಖಲೆಗಳ ಪರಿಶೀಲನೆ, ಗುತ್ತಿಗೆದಾರರು ಮತ್ತು ಸಂಬಂಧಿತ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್) ಸಹಿ ಮಾಡಿದ್ದ ಜಂಟಿ ಸರಕು ಸಾಮಗ್ರಿ ತ:ಖ್ತೆಗಳು ಹಾಗೂ ಮುಖ್ಯ ಇಂಜಿನಿಯರ್‌ರವರು ಅನುಮೋದಿಸಿದ್ದಂತಹ (ಜನವರಿ 2021) ಅಂತಿಮ ವ್ಯತ್ಯಯಗಳ ತಃಖ್ತೆಯ ನಡುವೆ ವ್ಯತ್ಯಯಗಳಿದ್ದವು ಎಂಬುದನ್ನು ತೋರಿಸಿಕೊಟ್ಟಿತು. ಪಾವತಿಗಳನ್ನು ಅಂತಿಮ ವ್ಯತ್ಯಯ ತ:ಖ್ತೆಯ ಅನುಸಾರ ಪಾವತಿಸಲಾಗಿದ್ದಿತು. ವ್ಯತ್ಯಯಗಳನ್ನು ಈ ಕೆಳಗೆ ತೋರಿಸಲಾಗಿದೆ:

**ಕೋಷ್ಟಕ ಸಂಖ್ಯೆ 3.8: ಸೌಭಾಗ್ಯ ಅಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಮಾಡಲಾಗಿದ್ದ ಪಾವತಿಯಲ್ಲಿನ ವ್ಯತ್ಯಯಗಳ ವಿವರಗಳು**

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ಜಂಟಿ ಸರಕುಸಾಮಗ್ರಿ ತ:ಖ್ತೆಗಳ ಅನುಸಾರ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸಲಾಗಿದ್ದ ಕುಟುಂಬಗಳ ಸಂಖ್ಯೆ | ಪಾವತಿಗಳನ್ನು ಮಾಡಲಾದ / ಯೋಜನೆಯನ್ನು ಮುಕ್ತಾಯಗೊಳಿಸುವಿಕೆಗೆ ಸಂಬಂಧಿತ ಪ್ರಸ್ತಾವನೆಯಲ್ಲಿ ಕೋರಲಾದ ಕುಟುಂಬಗಳ ಸಂಖ್ಯೆ | ಅಧಿಕ / (ಕೊರತೆ (–) (ಕುಟುಂಬಗಳ ಸಂಖ್ಯೆ) | ಅಧಿಕ ಪ್ರಮಾಣದಲ್ಲಿ ಮಾಡಲಾದ ಪಾವತಿ / ಕೊರತೆಯಿಂದ ಕೂಡಿದ್ದ ಪಾವತಿ (–) (₹) |
|---|---|---|---|---|---|
| 1 | ಔರಾದ್ | 3,230 | 3,204 | –26 | (–) 2,72,494 |
| 2 | ಭಾಲ್ಕಿ | 2,520 | 2,803 | 283 | 29,53,543 |
| 3 | ಬೀದರ್ | 1,480 | 1,397 | –83 | (–) 9,34,229 |
| 4 | ಕಂಟನ | 2,196 | 2,264 | 68 | 5,88,173 |
| | **ಒಟ್ಟು** | **9,426** | **9,668** | **242** | **23,34,993** |

(ಮೂಲ: ಜಂಟಿ ಸರಕುಸಾಮಗ್ರಿ ವರದಿ, ಯೋಜನೆಯು ಮುಕ್ತಾಯಗೊಂಡಿದ್ದರ ಬಗ್ಗೆ ವರದಿಗಳು)

ಮೇಲಿನ ವಿವರಗಳಿಂದ ಕಾಣಬಹುದಾದಂತೆ, 242 ಕುಟುಂಬಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಿಗೆ ₹ 23,34,993/–ರಷ್ಟು ನಿವ್ವಳ ಮೊತ್ತದ ಅಧಿಕ ಪ್ರಮಾಣದ ಪಾವತಿಯನ್ನು ಮಾಡಲಾಗಿದ್ದಿತು. ಅಂತಹ ವ್ಯತ್ಯಯಗಳಿಗೆ ಯಾವುದೇ ವಿವರಣೆಗಳ ಅನುಪಸ್ಥಿತಿಯಲ್ಲಿ ಲೆಕ್ಕಪರಿಶೋಧನೆಯು ಪಾವತಿಯ ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. ಮುಂದುವರೆದು, ಗುವಿಸಕಂಯು ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತದಿಂದ (ಆರ್‌ಇಸಿ) ಯೋಜನೆಯು ಪೂರ್ಣಗೊಂಡಿರುವ ಬಗ್ಗೆ ಪ್ರಸ್ತಾವನೆಗಳ ಮೂಲಕ ಹಣಕಾಸಿನ ಪಾವತಿಯನ್ನು ಕೋರುವ ವೇಳೆಯಲ್ಲಿ (ಮಾರ್ಚ್ 2021–ಏಪ್ರಿಲ್ 2021) ಜಂಟಿ ಸರಕುಸಾಮಗ್ರಿ ತ:ಖ್ತೆಯಲ್ಲಿ ಪ್ರಮಾಣೀಕರಿಸಲಾಗಿದ್ದಂತಹ 9,426 ಕುಟುಂಬಗಳಿಗೆ ಪ್ರತಿಯಾಗಿ 9,668 ಕುಟುಂಬಗಳು ಎಂಬುದಾಗಿ ನಮೂದಿಸಿದ್ದಿತು.

ಜಂಟಿ ಸರಕುಸಾಮಗ್ರಿ ತ:ಖ್ತೆಯನ್ನು ತೆಗೆದುಕೊಂಡನಂತರ ಪರಿಮಾಣ ವ್ಯತ್ಯಯವನ್ನು ಮುಖ್ಯ ಇಂಜಿನಿಯರ್, ಕಲಬುರಗಿ ವಲಯ, ಇವರು ತಮ್ಮ 6 ಜನವರಿ 2021ರ ಪತ್ರದ ಮೂಲಕ ಅನುಮೋದಿಸಿದ್ದರು ಹಾಗೂ ಯಾವುದೇ ಅಧಿಕ ಪ್ರಮಾಣದ ಪಾವತಿಯಾಗಿರಲಿಲ್ಲ ಎಂಬುದಾಗಿ ಸರ್ಕಾರವು ತಿಳಿಸಿತು (ನವಂಬರ್ 2021).

ಗುತ್ತಿಗೆದಾರರು ಕಾರ್ಯಗತಗೊಳಿಸದಿದ್ದಂತಹ ಪರಿಮಾಣಗಳಿಗೆ (242 ಸಂಖ್ಯೆಗಳು) ಪಾವತಿಗಳಿಗೆ ಕಾರಣಗಳನ್ನು ಕೇಳುವುದಕ್ಕೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದ ಅಂಶಗಳಿಗೆ ಉತ್ತರವು ಮೌನವಾಗಿದ್ದಿತು.

## ಆರ್‌ಜಿಜಿವಿವೈ XIIನೇ ಯೋಜನೆ ಅಡಿಯಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ್ದು

**3.11.** ***ಕಂಡಿಕೆಗಳು 3.11.1ರಿಂದ 3.11.4ರಲ್ಲಿ*** ವಿವರಿಸಿರುವಂತೆ, ಲೆಕ್ಕಪರಿಶೋಧನೆಯು ಯೋಜನೆಯ ಅಡಿಯಲ್ಲಿನ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಅಧಿಕ ವೆಚ್ಚದಲ್ಲಿ (₹ 15.68 ಕೋಟಿ) ನೀಡಿದ್ದುದು, ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದ ಕಾರಣ ಸಹಾಯಧನದ ನಷ್ಟ (₹ 18.97 ಕೋಟಿ) ಹಾಗೂ ಸಾಮಗ್ರಿಗಳ ಕೊರತೆ (₹ 4.27 ಕೋಟಿ) ಹಾಗೂ ₹ 2.88 ಕೋಟಿ ಸಹಾಯಧನದ ನಷ್ಟ, ಈ ಲೋಪದೋಷಗಳನ್ನು ಗಮನಿಸಿತು.

***ಕಾರ್ಯಗತಗೊಳಿಸುವಲ್ಲಿನ ಲೋಪದೋಷಗಳು***

**3.11.1.** ಬೆಂವಿಸಕಂಯು ಆರ್‌ಜಿಜಿವಿವೈ – XIIನೇ ಯೋಜನೆ ಅಡಿಯಲ್ಲಿ ಐದು ಜಿಲ್ಲೆಗಳಲ್ಲಿ[38] ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಗಾಗಿ 24 ತಿಂಗಳುಗಳಲ್ಲಿ (ನವೆಂಬರ್ 2016)

[38] ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ದಾವಣಗೆರೆ, ಕೋಲಾರ ಮತ್ತು ರಾಮನಗರ.

ಪೂರ್ಣಗೊಳಿಸತಕ್ಕದ್ದು ಎಂಬ ಷರತ್ತಿನೊಂದಿಗೆ ನವೆಂಬರ್ 2014ರಲ್ಲಿ ಯಶಸ್ವಿ ಸವಾಲುದಾರರಿಗೆ ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶವನ್ನು ನೀಡಿದ್ದಿತು. ಗುತ್ತಿಗೆದಾರರ ಕೋರಿಕೆಯ ಮೇರೆಗೆ ಗುತ್ತಿಗೆ ಅವಧಿಯನ್ನು ಸೆಪ್ಟಂಬರ್ 2017ರವರೆಗೂ ವಿಸ್ತರಿಸಲಾಯಿತು. ಆದಾಗ್ಯೂ, ಕಾಮಗಾರಿಗಳನ್ನು ಡಿಸೆಂಬರ್ 2017ರಲ್ಲಿ ಪೂರ್ಣಗೊಳಿಸಲಾಗಿದ್ದಿತು.

ನಿಗದಿತ ಕಾಲಮಿತಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸದಿರಲು ಕಾರಣಗಳನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಲಾಗಿ, ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

- ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗುತ್ತಿಗೆದಾರರು ಕ್ಷೇತ್ರ ಸಮೀಕ್ಷೆಯನ್ನು ನಡೆಸಿದನಂತರ ಅನುಮೋದನೆಗೊಂಡಿರುವ ಸವಿವರ ಯೋಜನಾ ವರದಿಯೊಂದಿಗೆ ಹೋಲಿಸಿದಂತೆ ಪರಿಮಾಣಗಳಲ್ಲಿ ಶೇಕಡಾ (–)100ರಿಂದ ಶೇಕಡಾ 36ರವರೆಗೆ ವಿಪರೀತವಾದಂತಹ ವ್ಯತ್ಯಯಗಳನ್ನು (11ಕಿವ್ಯಾ/ಎಲ್‌ಟಿ ಮಾರ್ಗಗಳು, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು, ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳು (ಡಿಟಿಸಿಗಳು)) ಗಮನಿಸಿದರು. ಮುಂದುವರೆದು, ಗುತ್ತಿಗೆಗೆ ನೀಡಲಾಗಿದ್ದ ಪರಿಮಾಣಗಳಿಗೆ ಹೋಲಿಸಿದಂತೆ ವಾಸ್ತವಿಕವಾಗಿ ಕಾರ್ಯಗತಗೊಳಿಸಲಾಗಿದ್ದ ಪರಿಮಾಣಗಳ ನಡುವೆಯೂ ಶೇಕಡಾ 34ರಿಂದ ಶೇಕಡಾ (–) 100ರವರೆಗೆ ವ್ಯತ್ಯಯಗಳಿದ್ದವು. ಇದು, ಸವಿವರ ಯೋಜನಾ ವರದಿಯನ್ನು ತಯಾರಿಸುವ ವೇಳೆಯಲ್ಲಿ ನಡೆಸಲಾದಂತಹ ಸಮೀಕ್ಷೆಯು ವಾಸ್ತವಿಕತೆಯಿಂದ ಕೂಡಿರಲಿಲ್ಲ ಎಂಬುದನ್ನು ತಿಳಿಸುತ್ತಿದ್ದಿತು;

- ಸಾಮಗ್ರಿಗಳ ಪರೀಕ್ಷಣೆಗೆ ಜವಾಬ್ದಾರಿಯುತವಾಗಿದ್ದ ಮೂರನೇ ತಂಡವನ್ನು (ಆರ್‌ಇಸಿಪಿಡಿಸಿಎಲ್) ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶವನ್ನು ನೀಡಿದ ದಿನಾಂಕದ (ನವಂಬರ್ 2014) ನಂತರ ಒಂಬತ್ತು ತಿಂಗಳುಗಳು ಕಳೆದನಂತರ ಅಂದರೆ ಆಗಸ್ಟ್ 2015ರಲ್ಲಿಯಷ್ಟೇ ನೇಮಕ ಮಾಡಲಾಗಿದ್ದಿತು;

- ನೆಲಮಂಗಲ ಮತ್ತು ಹೊಸಕೋಟೆ ವಿಭಾಗಗಳಲ್ಲಿ ಕಾಮಗಾರಿ ಆದೇಶಗಳನ್ನು ಗುತ್ತಿಗೆದಾರರಿಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿತವಾಗಿದ್ದ ದಿನಾಂಕದ ನಂತರ ನೀಡಲಾಗಿದ್ದಿತು (ಮಾರ್ಚ್ 2017 ಮತ್ತು ಜೂನ್ 2017ರ ನಡುವೆ). ಕಾಮಗಾರಿ ಆದೇಶಗಳನ್ನು ಸಮಯೋಚಿತವಾಗಿ ನೀಡಿರಲಿಲ್ಲವಾದ್ದರಿಂದ, ಇದು ಕಾಮಗಾರಿಗಳ ಆದೇಶಗಳನ್ನು ನೀಡುವ ವ್ಯವಸ್ಥೆಯು ಲೋಪದೋಷಗಳಿಂದ ಕೂಡಿದ್ದಿತು ಎಂಬುದನ್ನು ತೋರಿಸುತ್ತದೆ;

- ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪಟ್ಟಿಯನ್ನು ಸ್ವೀಕರಿಸುವಲ್ಲಿನ ವಿಳಂಬಕ್ಕೆ ಸಂಬಂಧಿಸಿದಂತೆ (ಡಿಸೆಂಬರ್ 2014/ಫೆಬ್ರವರಿ 2015/ಮಾರ್ಚ್ 2015), ಚಿಕ್ಕಬಳ್ಳಾಪುರ ಮತ್ತು ಕೋಲಾರದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸೇರ್ಪಡೆ, ಕೋರಿಕೆಯನ್ನು ಮಾಡಿ 45 ದಿನಗಳು ಕಳೆದನಂತರವೂ ಬೆಂವಿಸಕಂಯು ಸಾಮಗ್ರಿಗಳನ್ನು (ಕಂಬಗಳು) ಪರೀಕ್ಷಿಸದಿದ್ದುದು ಹಾಗೂ ಇದರ ತತ್ಪರಿಣಾಮವಾಗಿ ಸ್ಥಳದ ಅಭಾವದಿಂದಾಗಿ ಹೊಸ ಕಂಬಗಳನ್ನು ತಯಾರಿಸುವಲ್ಲಿ ತೊಂದರೆಯುಂಟಾಗಿದ್ದುದು, ಇವುಗಳ ಬಗ್ಗೆ ಗುತ್ತಿಗೆದಾರರು ದೂರಿದ್ದರು.

ಕಾಮಗಾರಿ ಆದೇಶಗಳನ್ನು ನೀಡುವಲ್ಲಿನ ವಿಳಂಬಕ್ಕೆ ಸಂಬಂಧಿಸಿದಂತೆ ಗುರಿಯಾಗಿಸಿಕೊಳ್ಳಲಾಗಿದ್ದ ದಿನಾಂಕವು ಸಮೀಪಿಸುತಿದ್ದಿತಾದ್ದರಿಂದ ಕಾಮಗಾರಿ ಆದೇಶಗಳನ್ನು ಕಾಮಗಾರಿಗಳು ಪೂರ್ಣಗೊಂಡನಂತರ ನೀಡಲಾಗಿದ್ದಿತು ಎಂಬುದಾಗಿ ಸರ್ಕಾರವು ತಿಳಿಸಿತು (ನವಂಬರ್ 2021). ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತವು (ಆರ್‌ಇಸಿ) ಯೋಜನೆಯನ್ನು ಪೂರ್ಣಗೊಳಿಸಲು ಕಾಲಾವಧಿಯನ್ನು ಡಿಸೆಂಬರ್ 2017ರವರೆಗೂ ವಿಸ್ತರಿಸಿದ್ದಿತಾದ್ದರಿಂದ ಗುತ್ತಿಗೆದಾರರಿಗೆ ದಂಡವನ್ನು ವಿಧಿಸದೆಯೇ ಕಾಲಾವಧಿ ವಿಸ್ತರಣೆಯನ್ನು ನೀಡಲಾಗಿದ್ದಿತು.

ಹೊಸಕೋಟೆ ವಿಭಾಗದಿಂದ ಜೂನ್ 2017ರಲ್ಲಿ ನೀಡಲಾಗಿದ್ದಂತಹ ಕಾಮಗಾರಿ ಆದೇಶಗಳಿಗೆ (ಐದು ಸಂಖ್ಯೆಗಳು) ಸಂಬಂಧಿಸಿದಂತೆ ಕಾಮಗಾರಿಗಳನ್ನು ಕೇವಲ ಅಗಸ್ಟ್/ಡಿಸೆಂಬರ್ 2017ರಲ್ಲಿ

ಪೂರ್ಣಗೊಳಿಸಲಾಗಿದ್ದಿತಾದ್ದರಿಂದ ಗುರಿಯಾಗಿಸಿಕೊಳ್ಳಲಾಗಿರುವ ದಿನಾಂಕವು ಸಮೀಪಿಸುತ್ತಿದ್ದಿತು. ಆದ್ದರಿಂದ, ಕಾಮಗಾರಿಗಳು ಪೂರ್ಣಗೊಂಡನಂತರ ಕಾಮಗಾರಿ ಆದೇಶಗಳನ್ನು ನೀಡಲಾಗಿದ್ದಿತು ಎಂಬುದಾಗಿ ನೀಡಲಾಗಿರುವ ಉತ್ತರವು ಒಪ್ಪುವಂತಿಲ್ಲ. ವಾಸ್ತವಿಕ ಪರಿಮಾಣಗಳಲ್ಲಿನ ವ್ಯತ್ಯಯಗಳು, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪಟ್ಟಿಯನ್ನು ಒದಗಿಸದಿದ್ದುದು, ಸಾಮಗ್ರಿಗಳ ಪರೀಕ್ಷಣೆಯಲ್ಲಿನ ವಿಳಂಬ, ಇತ್ಯಾದಿಗಳ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳಿಗೆ ಉತ್ತರವು ಮೌನವಾಗಿದ್ದಿತು.

***ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಅಧಿಕ ವೆಚ್ಚದಲ್ಲಿ ವಿದ್ಯುತೀಕರಣ ವ್ಯವಸ್ಥೆಯನ್ನು ನೀಡಿದ್ದುದು***

**3.11.2.** ಆರ್‌ಜಿಜಿವಿವೈ XIIನೇ ಯೋಜನೆಯ ಅಡಿಯಲ್ಲಿ ಇಂಧನ ಮಂತ್ರಾಲಯವು ನೀಡಿರುವ ಪ್ರಮಾಣಕ ಸವಾಲು ದಾಖಲೆಗಳ (ಷರತ್ತು ಐಟಿಬಿ 27.2) ಅನುಸಾರ, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಸರಬರಾಜು, ಕೂಲಿ/ಸಾಗಾಣಿಕೆ ಮತ್ತು ವಿಮೆ, ನಿರ್ಮಾಣ, ಪರೀಕ್ಷಣೆ ಹಾಗೂ ಕಾರ್ಯೋದ್ಯುಕ್ತಗೊಳಿಸುವಿಕೆ ಹಾಗೂ ತೆರಿಗೆ ಮತ್ತು ಸುಂಕಗಳನ್ನು ಒಳಗೊಂಡಂತೆ ಸೇವಾ ಸಂಪರ್ಕ ಒಂದಕ್ಕೆ ₹ 3,000 ದಷ್ಟು ಮೊತ್ತವನ್ನು ಮೀರಕೂಡದು. ಒಂದು ವೇಳೆ ಸೇವಾ ಸಂಪರ್ಕ ಒಂದಕ್ಕೆ ಘೋಷಿಸಲಾಗಿರುವ ಶುಲ್ಕಗಳು ₹ 3,000 ಕ್ಕಿಂತ ಅಧಿಕವಾಗಿದ್ದಲ್ಲಿ, ಪಾವತಿಯನ್ನು ₹ 3,000 ದಷ್ಟು ಮೊತ್ತಕ್ಕೆ ನಿರ್ಬಂಧಿಸತಕ್ಕದ್ದು.

ವಿಸಕಂಗಳು 2014–15ರಿಂದ 2016–17 ಸಾಲುಗಳಲ್ಲಿ ₹ 53.93 ಕೋಟಿ[39] ಮೊತ್ತವನ್ನು ಭರಿಸಿ 1,27,500 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಮಾಡಿದ್ದವು. ಈ ಕೆಳಗಿನ ಕೋಷ್ಟಕವು ರಾಜೀವ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆ ಅಡಿಯಲ್ಲಿ ಪರೀಕ್ಷಾ–ಪರಿಶೀಲನೆ ಮಾಡಲಾದ ಜಿಲ್ಲೆಗಳಲ್ಲಿ ಸೇವಾ ಸಂಪರ್ಕ ಒಂದಕ್ಕೆ ಭರಿಸಿದ ವೆಚ್ಚಗಳ ವಿವರಗಳನ್ನು ತೋರಿಸುತ್ತದೆ:

**ಕೋಷ್ಟಕ ಸಂಖ್ಯೆ: 3.9: ರಾಜೀವ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆ ಅಡಿಯಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಸಂಪರ್ಕ ಒಂದಕ್ಕೆ ಭರಿಸಿದ ವೆಚ್ಚಗಳ ವಿವರ**

| ಕ್ರಮ ಸಂಖ್ಯೆ | ವಿಸಕಂ | ಯೋಜನೆ | ವಿದ್ಯುತೀಕರಣ ವ್ಯವಸ್ಥೆಯನ್ನು ನೀಡಲಾದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ | ಬಡತನ ರೇಖೆಗಿಂತ ಕೆಳಗಿರುವ ಕುಟುಂಬ ಒಂದಕ್ಕೆ ನೀಡಲಾಗಿರುವ ಗುತ್ತಿಗೆ ಮೊತ್ತ (₹) | ಗುತ್ತಿಗೆ ಅನುಸಾರ ಒಟ್ಟು ವೆಚ್ಚ (₹ ಕೋಟಿಯಲ್ಲಿ) | ಯೋಜನೆಯ ಅನುಸಾರ ಒಟ್ಟು ವೆಚ್ಚ (₹ ಕೋಟಿಯಲ್ಲಿ) | ಹೆಚ್ಚುವರಿ ವೆಚ್ಚ (₹ ಕೋಟಿಯಲ್ಲಿ) |
|---|---|---|---|---|---|---|---|
| 1 | ಬೆಂವಿಸಕಂ | ಬೆಂಗಳೂರು ಗ್ರಾಮಾಂತರ | 8,288 | 4,121.12 | 3.42 | 2.49 | 0.93 |
| 2 | ಚಾವಿಸನಿ | ಮೈಸೂರು | 6,141 | 6,660.00 | 4.09 | 1.84 | 2.25 |

**(ಮೂಲ: ಸವಿವರ ಕಾಮಗಾರಿ ನೀಡಿಕೆ ಆದೇಶಗಳು, ಯೋಜನೆಯನ್ನು ಪರಿಪೂರ್ಣಗೊಳಿಸಿರುವುದಕ್ಕೆ ಸಂಬಂಧಿತ ವರದಿಗಳು)**

ಯೋಜನೆಯ ಅಡಿಯಲ್ಲಿ ನೀಡಲಾಗಿದ್ದ ಪ್ರಮಾಣಕ ಸವಾಲು ದಾಖಲೆಯ ಒಂದು ಭಾಗವಾಗಿದ್ದಂತಹ ಸವಾಲುದಾರರುಗಳಿಗೆ ನಿರ್ದೇಶನಗಳ ಅಡಿಯಲ್ಲಿನ ನಿರ್ದಿಷ್ಟ ಷರತ್ತಿನ ಹೊರತಾಗಿಯೂ ವಿಸಕಂಗಳು ಗುತ್ತಿಗೆಗಳನ್ನು ಯೋಜನೆಯ ಅಡಿಯಲ್ಲಿ ಅನುಮೋದನೆಗೊಂಡಿದ್ದ ದರಗಳಿಗಿಂತ (₹ 3,000), ಅಧಿಕ ದರಗಳಲ್ಲಿ (₹ 4,121.12 ಹಾಗೂ ₹ 6,660) ನೀಡಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿಶೇಷವಾಗಿ, ಚಾವಿಸನಿ ನೀಡಿದ್ದ ದರಗಳು ಸಂಪರ್ಕ ಒಂದಕ್ಕೆ ಅನುಮೋದಿತ ವೆಚ್ಚದ ಶೇಕಡಾ 222ರಷ್ಟು ಇದ್ದಿತು. ಇದು ರಾಜೀವ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆ ಅಡಿಯಲ್ಲಿ

[39] ಬೆಂವಿಸಕಂ: 96,251 ಕುಟುಂಬಗಳು/₹ 39.73 ಕೋಟಿ; ಚಾವಿಸನಿ (ಮೈಸೂರು, ಮಂಡ್ಯ): 11,264 ಕುಟುಂಬಗಳು/ ₹ 7.55 ಕೋಟಿ; ಗುವಿಸಕಂ: 1,347 ಕುಟುಂಬಗಳು /₹ 0.54 ಕೋಟಿ; ಹುವಿಸಕಂ (ಹಾವೇರಿ): 18,638 ಕುಟುಂಬಗಳು/₹ 6.11 ಕೋಟಿ.

ಪರೀಕ್ಷಾ–ಪರಿಶೀಲನೆ ಮಾಡಲಾದ ಎರಡು ಜಿಲ್ಲೆಗಳಲ್ಲಿ[40] ಬೆಂವಿಸಕಂ ಹಾಗೂ ಚಾವಿಸನಿದ ಅಡಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸುವ ಸಲುವಾಗಿ ₹ 3.18 ಕೋಟಿ ಮೊತ್ತದಷ್ಟು ಅಧಿಕ ವೆಚ್ಚವನ್ನು ಭರಿಸುವಲ್ಲಿ ಪರಿಣಮಿಸಿದ್ದಿತು.

ಡಿಡಿಯುಜಿಜೆವೈ ಅಡಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ತದನಂತರದ 2016–17 ಸಾಲಿನಲ್ಲಿ ವಿಸಕಂಗಳು ಪಾವತಿಯನ್ನು ಸೇವಾ ಸಂಪರ್ಕ ಒಂದಕ್ಕೆ ಇಂಧನ ಮಂತ್ರಾಲಯದ ಅನುಮೋದಿತ ವೆಚ್ಚದ ಅನುಸಾರ ₹ 3,000 ದಷ್ಟು ಮೊತ್ತಕ್ಕೆ ನಿರ್ಬಂಧಿಸಿದ್ದವು ಎಂಬುದನ್ನು ಇಲ್ಲಿ ತಿಳಿಸುವುದು ಸೂಕ್ತವಾಗುತ್ತದೆ. ಆದಾಗ್ಯೂ, ಎರಡೂ ಯೋಜನೆಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಷರತ್ತುಗಳು ಒಂದೇ ಆಗಿದ್ದವಾದರೂ, ಈ ತತ್ವವನ್ನು ರಾಜೀವ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆ XIIನೇ ಯೋಜನೆಯಲ್ಲಿ ಅನ್ವಯಗೊಳಿಸಿರಲಿಲ್ಲ.

ಯೋಜನೆಯ ಅಡಿಯಲ್ಲಿ ಮರುಪಾವತಿಸಬಹುದಾದ ₹ 3,000 ರಷ್ಟು ಮೊತ್ತಕ್ಕೆ ಪ್ರತಿಯಾಗಿ ದರಪಟ್ಟಿ/ಮಾರುಕಟ್ಟೆ ದರಗಳ ಅನುಸಾರ (ಬೆಂವಿಸಕಂ) ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯವಿರುವ ವಾಸ್ತವಿಕ ವೆಚ್ಚವು ₹ 4,019 ಆಗಿದ್ದಿತು ಎಂಬುದಾಗಿ ಸರ್ಕಾರ/ಆಡಳಿತ ಮಂಡಳಿಗಳು/ವ್ಯವಸ್ಥಾಪನೆಗಳು ತಿಳಿಸಿದವು (ನವಂಬರ್ 2021/ಫೆಬ್ರವರಿ 2022). ಚಾವಿಸನಿಯಲ್ಲಿ ಘೋಷಿಸಲಾಗಿದ್ದ ದರಗಳು ಅಧಿಕವಾಗಿದ್ದವಾದರೂ, ಅಂದಾಜು ವೆಚ್ಚವನ್ನು ಮೀರಿದಂತೆ ಒಟ್ಟಾರೆ ಟೆಂಡರು ಪ್ರೀಮಿಯಂ ಕಡಿಮೆ ಪ್ರಮಾಣದಲ್ಲಿದ್ದಿತು (ಶೇಕಡಾ 12.7) ಎಂಬುದಾಗಿ ತಿಳಿಸಲಾಗಿದ್ದಿತು.

ಉತ್ತರವು ಒಪ್ಪುವಂತಿಲ್ಲ, ಅನುಮೋದಿತ ವೆಚ್ಚವನ್ನು ಮೀರಿದಂತೆ ಮಾಡಲಾದ ವೆಚ್ಚಗಳು ಪ್ರಮಾಣಕ ಸವಾಲು ದಾಖಲೆಗಳ ಉಲ್ಲಂಘನೆಯಾಗಿದ್ದಿತು. ಸೇವಾ ಸಂಪರ್ಕ ಒಂದಕ್ಕೆ ಘೋಷಿಸಲಾದ ವೆಚ್ಚಗಳು ₹ 3,000ವನ್ನು ಮೀರಿದ್ದರೂ ಸಹ, ಪಾವತಿಯನ್ನು ₹ 3,000ಕ್ಕೆ ನಿರ್ಬಂಧಿಸತಕ್ಕದ್ದು ಎಂಬುದಾಗಿ ಸವಾಲುದಾರರಿಗೆ ನಿರ್ದೇಶನಗಳು ನಿರ್ದಿಷ್ಟಪಡಿಸಿದ್ದವು ಮತ್ತು ಆದ್ದರಿಂದ ಟೆಂಡರು ಪ್ರೀಮಿಯಂ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಸೇವಾ ಸಂಪರ್ಕ ಒಂದಕ್ಕೆ ಪಾವತಿಸಲಾದ ವೆಚ್ಚಗಳ ಮೇಲೆ ಯಾವುದೇ ಸಂಬಂಧವನ್ನೂ ಹೊಂದಿರುವುದಿಲ್ಲ.

***ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದ ಕಾರಣ ಸಹಾಯಧನದ ನಷ್ಟ***

**3.11.3**. ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ರಾಜೀವ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆ ಅಡಿಯಲ್ಲಿ ಗ್ರಾಮೀಣ ವಿದ್ಯುತೀಕರಣಕ್ಕಾಗಿ ಗುತ್ತಿಗೆಗಳನ್ನು ಮೆ. ಶ್ರೀಶ್ವರ್ ಇಲೆಕ್ಟ್ರಿಕಲ್ಸ್ ಪ್ರೈವೇಟ್ ಲಿಮಿಟೆಡ್, ಇವರಿಗೆ ₹ 26.49 ಕೋಟಿ ಮತ್ತು ₹ 17.73 ಕೋಟಿ ಮೊತ್ತಗಳಿಗೆ ನೀಡಲಾಗಿದ್ದಿತು (ನವೆಂಬರ್ 2014). ಗುತ್ತಿಗೆಗಳು ಮೈಸೂರಿನಲ್ಲಿ 14,274 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು (ಸಮೀಕ್ಷೆಯ ಸಮಯದಲ್ಲಿ 10,602ಕ್ಕೆ ಪರಿಷ್ಕರಿಸಲಾಗಿರುವುದು) ಹಾಗೂ ಮಂಡ್ಯದಲ್ಲಿ 10,824 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು (8,222ಕ್ಕೆ ಪರಿಷ್ಕರಿಸಲಾಗಿರುವುದು) ವಿದ್ಯುತೀಕರಣಗೊಳಿಸುವುದು ಹಾಗೂ ಸಂಬಂಧಿತ ಮೂಲಸೌಕರ್ಯ ಕಾಮಗಾರಿಗಳನ್ನು (11 ಕೆವಿ ಮಾರ್ಗಗಳು, ವಿತರಣಾ ಟ್ರಾನ್ಸ್‌ಫಾರ್ಮರುಗಳು, ಎಲ್‌ಟಿ ಮಾರ್ಗಗಳು, ಇತ್ಯಾದಿ) ಒಳಗೊಂಡಿರುವುದು. ಗುತ್ತಿಗೆಯನ್ನು ಪೂರ್ಣಗೊಳಿಸಲು ನಿಗದಿತ ಅವಧಿಯು ನವಂಬರ್ 2016 ಆಗಿದ್ದಿತು.

ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

i. ಎರಡೂ ಗುತ್ತಿಗೆಗಳನ್ನು ನೀಡಲಾಗಿದ್ದ ಮೆ. ಶ್ರೀಶ್ವರ್ ಇಲೆಕ್ಟ್ರಿಕಲ್ಸ್ ಪ್ರೈವೇಟ್ ಲಿಮಿಟೆಡ್, ಇವರನ್ನು ತಾಂತ್ರಿಕ ಮೌಲ್ಯಮಾಪನದ ವೇಳೆಯಲ್ಲಿ ಸವಾಲಿನ ಜೊತೆಯಲ್ಲಿ ಕೆಲವು

[40] ಡಿಡಿಯುಜಿಜೆವೈ ಅಡಿಯಲ್ಲಿ ಪರೀಕ್ಷಾ–ಪರಿಶೀಲನೆ ಮಾಡಲಾದ ಉಳಿದ ಎಂಟು ಜಿಲ್ಲೆಗಳಲ್ಲಿ ಈ ಅಂಶವನ್ನು ಗಮನಿಸಲಿಲ್ಲ.

ದಾಖಲೆಗಳನ್ನು[41] ಸಲ್ಲಿಸಿರದ ಕಾರಣ 'ಪ್ರತಿಕ್ರಿಯೆ ಇಲ್ಲದ' ಗುತ್ತಿಗೆದಾರರು ಎಂಬುದಾಗಿ ಗಮನಿಸಲಾಗಿದ್ದಿತು. ಆದಾಗ್ಯೂ, ಟೆಂಡರು ಪರಿಶೀಲನಾ ಸಮಿತಿಯ ಅಧ್ಯಕ್ಷರಾಗಿದ್ದ ಮುಖ್ಯ ಇಂಜಿನಿಯರ್ (ಇಲೆಕ್ಟ್ರಿಕಲ್ಸ್), ಮೈಸೂರು ವಲಯ, ಇವರು ಸಂಸ್ಥೆಯು ತಾಂತ್ರಿಕ ಮತ್ತು ವಾಣಿಜ್ಯ ಷರತ್ತುಗಳೆರಡನ್ನೂ ಪೂರೈಸಿದ್ದಿತು ಎಂಬ ಕಾರಣದ ಮೇರೆಗೆ ಸಂಸ್ಥೆಯನ್ನು 'ಪ್ರತಿಕ್ರಿಯೆ ಇರುವ' ಎಂಬುದಾಗಿ ಮಾಡುವಂತೆ ಹಾಗೂ ಆ ಸಂಸ್ಥೆ ಅತ್ಯಂತ ಕಡಿಮೆ ಬಿಡ್ ಮಾಡಿದ್ದರೆ ಅಗತ್ಯವಿರುವ ದಾಖಲೆಗಳನ್ನು ಪಡೆದುಕೊಳ್ಳುವಂತೆ ನಿರ್ದೇಶಿಸಿದ್ದರು (ನವಂಬರ್ 2014). ಸಂಸ್ಥೆಯನ್ನು 'ಪ್ರತಿಕ್ರಿಯೆ ಇರುವ' ಎಂಬುದಾಗಿ ಮಾಡಿದ್ದು ಸವಾಲುದಾರರುಗಳ ಸಮರ್ಪಕವಾದಂತಹ ಪ್ರತಿಕ್ರಿಯೆಯನ್ನು ನಿರ್ಧಾರಣೆ ಮಾಡುವುದನ್ನು ವ್ಯವಹರಿಸುವ ಕರ್ನಾಟಕ ಸಾರ್ವಜನಿಕ ಖರೀದಿಗಳು/ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ನಿಯಮಗಳು, 2000ದ ನಿಯಮ 24ರ ಅನುಸಾರ ಆಗಿರಲಿಲ್ಲ;

ii. ಚಾವಿಸನಿಯು ನಿಕೃಷ್ಟಮಟ್ಟದ ಕಾಮಗಾರಿಯಲ್ಲಿನ ಪ್ರಗತಿಯನ್ನು ಗಮನಿಸಿತು ಹಾಗೂ ಗುತ್ತಿಗೆದಾರರಿಗೆ ನೋಟೀಸುಗಳನ್ನು ನೀಡಿದ್ದಿತು (ಅಕ್ಟೋಬರ್ 2015ರಿಂದ ಮೇ 2016). ಮಾರ್ಚ್ 2019ರಲ್ಲಿದ್ದಂತೆ, ಅಂದರೆ ನಿಗದಿತ ದಿನಾಂಕದಿಂದ ಮೂರು ವರ್ಷಗಳು ಕಳೆದನಂತರವೂ ಮೈಸೂರಿನಲ್ಲಿ 10,602 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪೈಕಿ ಕೇವಲ 6,141ಕ್ಕೆ ಹಾಗೂ ಮಂಡ್ಯದಲ್ಲಿ 8,222 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪೈಕಿ ಕೇವಲ 5,123ಕ್ಕೆ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸಲಾಗಿದ್ದಿತು ಹಾಗೂ ಮೂಲಸೌಕರ್ಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಶೇಕಡಾ 2.53ರಷ್ಟು ಹಾಗೂ ಮಂಡ್ಯದಲ್ಲಿ ಶೇಕಡಾ 21.08ರಷ್ಟು ಪ್ರಗತಿ ಆಗಿದ್ದಿತು. ಕಾಲಮಿತಿಗಳನ್ನು ಉಲ್ಲಂಘಿಸಿದ್ದನ್ನು ಗಮನಿಸಿದ್ದಾಗ್ಯೂ, ಗುತ್ತಿಗೆಯನ್ನು ಪೂರ್ಣಗೊಳಿಸಲು ನಿಗದಿತವಾಗಿದ್ದ ದಿನಾಂಕದಿಂದ (ನವಂಬರ್ 2016) ನಾಲ್ಕು ವರ್ಷಗಳು ಕಳೆದನಂತರ ಜನವರಿ 2020ರಲ್ಲಿಯಷ್ಟೇ ರದ್ದುಗೊಳಿಸಲಾಗಿದ್ದಿತು. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿತ ದಿನಾಂಕದಂದು ಕಾಮಗಾರಿಗಳ ಪ್ರಗತಿಯು ನಿಕೃಷ್ಟತೆಯಿಂದ ಕೂಡಿದ್ದಿತಾದ್ದರಿಂದ, ಗುತ್ತಿಗೆಯನ್ನು ರದ್ದುಗೊಳಿಸುವಲ್ಲಿನ ವಿಳಂಬವು ಸಮರ್ಥನೀಯವಾಗಿರಲಿಲ್ಲ;

iii. ಗುತ್ತಿಗೆದಾರರು ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ತಪ್ಪಿತಸ್ಥರಾಗಿದ್ದರಿಂದ ಹಾಗೂ ಗುತ್ತಿಗೆಯನ್ನು ರದ್ದುಗೊಳಿಸುವಲ್ಲಿ ಚಾವಿಸನಿಯಿಂದ ಸಂಭವಿಸಿದ ವಿಳಂಬದ ಪರಿಣಾಮವಾಗಿ, ₹ 26.36 ಕೋಟಿ[42] ಮೌಲ್ಯದ ಮೂಲಸೌಕರ್ಯ ಕಾಮಗಾರಿಗಳನ್ನು (11ಕೆವಿ ಮತ್ತು ಎಲ್‌ಟಿ ಕಾಮಗಾರಿಗಳು) ಕಾರ್ಯಗತಗೊಳಿಸಿರಲಿಲ್ಲ. ರಾಜೀವ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆಯು ಭರಿಸಲಾದ ವೆಚ್ಚದ ಶೇಕಡಾ 90ರಷ್ಟು ದರದ ಸಹಾಯಧನವನ್ನು ಅನುವು ಮಾಡಿರುವುದರಿಂದ, ಚಾವಿಸನಿಯು ಗುತ್ತಿಗೆದಾರರಿಂದ ವಸೂಲಾತಿ ಮಾಡಲು ಪ್ರಸ್ತಾಪಿಸಲಾಗಿರುವ ₹ 4.75 ಕೋಟಿ[43] ಮೊತ್ತದಷ್ಟು ಸಮಾಪನ ನಷ್ಟವನ್ನು ಹೊಂದಾಣಿಕೆ ಮಾಡಿಕೊಂಡನಂತರ ₹ 18.97 ಕೋಟಿ ಮೊತ್ತದಷ್ಟು ಸಹಾಯಧನವನ್ನು ಉಪಯೋಗಿಸಿಕೊಳ್ಳುವ ಅವಕಾಶವನ್ನು ಕಳೆದುಕೊಂಡಿತು.

ಸವಾಲಿನ ಸಮರ್ಪಕವಾದಂತಹ ಪ್ರತಿಕ್ರಿಯೆಯನ್ನು ನಿರ್ಧಾರಣೆ ಮಾಡಿದಂತೆ ಸಂಸ್ಥೆಯು ತಾಂತ್ರಿಕ ಮತ್ತು ವಾಣಿಜ್ಯ ಷರತ್ತುಗಳೆರಡರಲ್ಲಿಯೂ ಅರ್ಹತೆಯ ಅಗತ್ಯತೆಗಳನ್ನು ಪೂರೈಸಿದ್ದಿತು ಎಂಬುದಾಗಿ ಸರ್ಕಾರವು

[41] ದರ ಹೊಂದಾಣಿಕೆ ಮಾಹಿತಿ, ಪ್ರಾರಂಭಿಕ ಮುಂಗಡಕ್ಕಾಗಿ ಆಯ್ಕೆ, ಇ–ಪಾವತಿಗಾಗಿ ಮಾಹಿತಿ, ಭವಿಷ್ಯ ನಿಧಿ ವಿವರಗಳು, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಬಗ್ಗೆ ಘೋಷಣೆ, ತೆರಿಗೆ ವಿನಾಯಿತಿ ಘೋಷಣೆ, ಕಳೆಯುವಿಕೆಗಳು, ಭತ್ಯೆಗಳು ಅಥವಾ ಪ್ರಯೋಜನಗಳು, ಬ್ಯಾಂಕು ಖಾತರಿ ಪರಿಶೀಲನಾ ದಾಖಲೆಗಳು, ಹುಟ್ಟಿದ ಸ್ಥಳ ಹಾಗೂ ಅರ್ಹತೆ ಪ್ರಮಾಣ ಪತ್ರ, ಖಾತರಿ ಘೋಷಣೆ, ತಯಾರಕರಿಂದ ಅನುಮತಿ ನಮೂನೆ, ಇತ್ಯಾದಿ.

[42] ಮೈಸೂರು: 11 ಕಿವ್ಯಾ ಕಾಮಗಾರಿಗಳು ₹ 11.60 ಕೋಟಿ; ಎಲ್‌ಟಿ ಕಾಮಗಾರಿಗಳು ₹ 5.29 ಕೋಟಿ; ಮಂಡ್ಯ: 11 ಕಿವ್ಯಾ ಕಾಮಗಾರಿಗಳು ₹ 6.29 ಕೋಟಿ; ಎಲ್‌ಟಿ ಕಾಮಗಾರಿಗಳು ₹ 3.18 ಕೋಟಿ; (ಮೂಲ: ಅನುಮೋದಿತ ಯೋಜನೆಯನ್ನು ಪರಿಪೂರ್ಣಗೊಳಿಸಿರುವುದಕ್ಕೆ ಸಂಬಂಧಿತ ಪ್ರಸ್ತಾವನೆಗಳು).

[43] ಚಾವಿಸನಿದಲ್ಲಿ ಲಭ್ಯವಿರುವ ಹಣಕಾಸಿನಿಂದ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿರುವುದು (ಬ್ಯಾಂಕು ಖಾತರಿ ನಗದೀಕರಣ – ₹ 2.21 ಕೋಟಿ, ಉಳಿಸಿಕೊಳ್ಳಲ್ಪಟ್ಟಿರುವ ಮೊತ್ತ: ₹ 2 ಕೋಟಿ ಹಾಗೂ ಸಮಾಪನ ನಷ್ಟಗಳು: ₹ 71.98 ಲಕ್ಷ).

ತಿಳಿಸಿತು (ನವಂಬರ್ 2021). ಸಂಸ್ಥೆಯು ಕೆಲವು ದಾಖಲೆಗಳನ್ನು ಸಲ್ಲಿಸಿರಲಿಲ್ಲ. ಗುತ್ತಿಗೆಯನ್ನು ರದ್ದುಗೊಳಿಸುವಲ್ಲಿನ ವಿಳಂಬ ಹಾಗೂ ಸಹಾಯಧನದ ನಷ್ಟಕ್ಕೆ ಸಂಬಂಧಿಸಿದಂತೆ, ಗುತ್ತಿಗೆದಾರರ ಕೋರಿಕೆಯ ಆಧಾರದ ಮೇರೆಗೆ, ಗುತ್ತಿಗೆ ಅವಧಿಯನ್ನು ವಿಸ್ತರಿಸಲಾಗಿದ್ದಿತು ಹಾಗೂ ಸಹಾಯಧನದ ನಷ್ಟವನ್ನು ಸಮಾಪನ ನಷ್ಟ ಹಾಗೂ ಕಾರ್ಯನಿರ್ವಹಣಾ ಬ್ಯಾಂಕು ಖಾತರಿಯ ಮೂಲಕ ತುಂಬಿಕೊಳ್ಳಲಾಗಿದೆ ಎಂಬುದಾಗಿ ತಿಳಿಸಿದ್ದಿತು.

ಉತ್ತರವು ಒಪ್ಪುವಂತಿಲ್ಲ. ಕರ್ನಾಟಕ ಸಾರ್ವಜನಿಕ ಖರೀದಿಗಳು/ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ನಿಯಮಗಳು, ನಿಯಮ 24ರ ಅನುಸಾರ, ಸವಾಲುಗಳು ಸಮರ್ಪಕವಾದಂತಹ ರೀತಿಯಲ್ಲಿ ಪ್ರತಿಕ್ರಿಯೆಗಳನ್ನು ಹೊಂದಿರುವುದಿಲ್ಲವಾದಲ್ಲಿ, ಉಪ–ನಿಯಮ (2)ರ ಅನುಸಾರ ಟೆಂಡರುಗಳನ್ನು ತಿರಸ್ಕರಿಸಬೇಕಿದ್ದಿತು.

ಮೇಲೆ ತಿಳಿಸಲಾದ ಉಪ–ನಿಯಮದ ಅಡಿಯಲ್ಲಿನ ಷರತ್ತುಗಳಲ್ಲಿ ಒಂದು ಪ್ರಮುಖ ದಾಖಲೆಗಳು ಸಹಿಯಾಗಿರುವುದನ್ನು ಮನದಟ್ಟು ಮಾಡಿಕೊಳ್ಳುವುದನ್ನು ಕಡ್ಡಾಯಗೊಳಿಸಿರುವುದು. ಈ ಪ್ರಸಕ್ತ ಟೆಂಡರಿನಲ್ಲಿ ಸವಾಲುದಾರರು ಅನೇಕ ದಾಖಲೆಗಳನ್ನು (ದರ ಹೊಂದಾಣಿಕೆ ಮಾಹಿತಿ, ಭವಿಷ್ಯ ನಿಧಿ ವಿವರಗಳು, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಬಗ್ಗೆ ಘೋಷಣೆ, ತೆರಿಗೆ ವಿನಾಯಿತಿ ಘೋಷಣೆ, ಕಳೆಯುವಿಕೆಗಳು, ಭತ್ಯೆಗಳು ಅಥವಾ ಪ್ರಯೋಜನಗಳು, ಬ್ಯಾಂಕು ಖಾತರಿ ಪರಿಶೀಲನಾ ದಾಖಲೆಗಳು, ಹುಟ್ಟಿದ ಸ್ಥಳ ಹಾಗೂ ಅರ್ಹತೆಯ ಪ್ರಮಾಣ ಪತ್ರ, ಖಾತರಿ ಘೋಷಣೆ, ತಯಾರಕರಿಂದ ಅನುಮತಿ ನಮೂನೆ, ಇತ್ಯಾದಿ) ಸಲ್ಲಿಸಿರಲಿಲ್ಲವಾದ್ದರಿಂದ ಸಮರ್ಪಕವಾದಂತಹ ರೀತಿಯಲ್ಲಿ ಪ್ರತಿಕ್ರಿಯೆಯನ್ನು ಹೊಂದಿರಲಿಲ್ಲ. ಅಲ್ಲದೆಯೇ, ಸವಾಲುದಾರರು ತಾಂತ್ರಿಕ ಮೌಲ್ಯಮಾಪನದ ವೇಳೆಯಲ್ಲಿಯೂ ಪ್ರತಿಕ್ರಿಯೆಯನ್ನು ಹೊಂದಿರಲಿಲ್ಲವೆಂಬುದು ಕಂಡುಬಂದಿದ್ದಿತು, ಎರಡನೆಯದಾಗಿ, ಕಾಮಗಾರಿಯ ಪ್ರಗತಿಯು ನಿಕೃಷ್ಟಮಟ್ಟದಿಂದ ಕೂಡಿದ್ದಿತಾದ್ದರಿಂದ ನಿಗದಿತ ದಿನಾಂಕವನ್ನು ಮೀರಿದಂತೆ ಗುತ್ತಿಗೆ ಅವಧಿಯ ವಿಸ್ತರಣೆಯು ಸಮರ್ಥನೀಯವಾಗಿರಲಿಲ್ಲ. ಮುಂದುವರೆದು, ₹ 18.97 ಕೋಟಿ ಮೊತ್ತದಷ್ಟು ಸಹಾಯಧನದ ನಷ್ಟವನ್ನು ಸಮಾಪನ ನಷ್ಟ ಹಾಗೂ ಬ್ಯಾಂಕು ಖಾತರಿಯ ಮೂಲಕ ವಸೂಲಾತಿ ಮಾಡಬೇಕಾದ ₹ 4.75 ಕೋಟಿ ಮೊತ್ತವನ್ನು ಹೊಂದಾಣಿಕೆ ಮಾಡಿದ ನಂತರ ಲೆಕ್ಕಹಾಕಲಾಗಿದೆ.

***ಸಾಮಗ್ರಿಗಳ ಕೊರತೆ ಹಾಗೂ ಸಹಾಯಧನದ ನಷ್ಟ***

**3.11.4**. ಗುವಿಸಕಂಯು ಟೆಂಡರುಗಳನ್ನು ಆಹ್ವಾನಿಸಿದನಂತರ (ಆಗಸ್ಟ್ 2014) ಕಲಬುರಗಿ ಜಿಲ್ಲೆಯಲ್ಲಿನ ಏಳು ತಾಲ್ಲೂಕುಗಳಲ್ಲಿ 26,518 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತೀಕರಣ ಸೌಕರ್ಯವನ್ನು ಸಂಬಂಧಿತ ಮೂಲಸೌಕರ್ಯಗಳೊಂದಿಗೆ[44] ಒದಗಿಸುವ ಸಲುವಾಗಿ ಮೆ. ಶ್ರೀಶ್ವರ್ ಇಲೆಕ್ಟ್ರಿಕಲ್ಸ್ ಪ್ರೈವೇಟ್ ಲಿಮಿಟೆಡ್, ಇವರಿಗೆ ಟರ್ನ್‌ಕೀ ಆಧಾರದ ಮೇರೆಗೆ ನೀಡಿದ್ದಿತು (ಮಾರ್ಚ್ 2015). ಕಾಮಗಾರಿಗಳನ್ನು ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶವನ್ನು ನೀಡಿದ ದಿನಾಂಕದಿಂದ 24 ತಿಂಗಳುಗಳ ಒಳಗೆ ಅಂದರೆ ಮಾರ್ಚ್ 2017ರ ಒಳಗೆ ಪೂರ್ಣಗೊಳಿಸಬೇಕಿದ್ದಿತು. ಗುತ್ತಿಗೆ ಮೊತ್ತ ₹ 14.08 ಕೋಟಿ ಆಗಿತ್ತು. ಗುತ್ತಿಗೆ ಷರತ್ತುಗಳ ಅನುಸಾರ, ಗುವಿಸಕಂಯು ಗುತ್ತಿಗೆದಾರರು ಸರಬರಾಜು ಮಾಡಿದ್ದ ಸಾಮಗ್ರಿಗಳ ಮೌಲ್ಯದ ಶೇಕಡಾ 50ರಷ್ಟನ್ನು ಅಂದರೆ ₹ 4.36 ಕೋಟಿ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಿತು (ಏಪ್ರಿಲ್ 2016).

ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಹೆಚ್ಚು ಪ್ರಗತಿಯನ್ನು ತೋರಿಸಿರಲಿಲ್ಲ, 26,518 ಕುಟುಂಬಗಳ ಪೈಕಿ ಕೇವಲ 1,347 ಕುಟುಂಬಗಳಿಗೆ ಮಾತ್ರ (ಶೇಕಡಾ 5.08) ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸಲಾಗಿದ್ದಿತು ಮತ್ತು ಮೂಲಸೌಕರ್ಯ ಕಾಮಗಾರಿಗಳಲ್ಲಿ ಯಾವುದೇ ಪ್ರಗತಿಯಿರಲಿಲ್ಲ. ಗುತ್ತಿಗೆದಾರರು ನೋಟೀಸುಗಳಿಗೆ (ಮೇ/ಜೂನ್/ಡಿಸೆಂಬರ್ 2016)

[44] 11 ಕಿವ್ಯಾ ಮಾರ್ಗಗಳು (38.64 ಕಿಮೀಗಳು); ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳು (ಡಿಟಿಸಿಗಳು) (113 ಸಂಖ್ಯೆಗಳು); ಎಲ್‌ಟಿ ಮಾರ್ಗಗಳು 57.31 ಕಿಮೀಗಳು).

ಪ್ರತಿಕ್ರಿಯೆ ನೀಡಲಿಲ್ಲವಾದ್ದರಿಂದ, ಸೆಪ್ಟಂಬರ್ 2017ರಲ್ಲಿ ಅಲ್ಪಾವಧಿಯಲ್ಲಿ ಗುತ್ತಿಗೆಯನ್ನು ರದ್ದುಗೊಳಿಸಲಾಯಿತು ಹಾಗೂ ₹ 1.41 ಕೋಟಿ ಮೊತ್ತದಷ್ಟು ಕಾರ್ಯನಿರ್ವಹಣಾ ಖಾತರಿಯನ್ನು ನಗದೀಕರಣಗೊಳಿಸಲಾಯಿತು (ಮಾರ್ಚ್ 2018). ಸಂಸ್ಥೆಯನ್ನು ಗುತ್ತಿಗೆಯನ್ನು ಮುಕ್ತಾಯಗೊಳಿಸಲಾದ ದಿನಾಂಕದಿಂದ ಎರಡು ವರ್ಷಗಳವರೆಗೆ ಕಪ್ಪು ಪಟ್ಟಿಯಲ್ಲಿ ಸೇರಿಸಲಾಯಿತು (ಅಕ್ಟೋಬರ್ 2018). ವಸೂಲಾತಿ ಮಾಡಬೇಕಿದ್ದ ₹ 70.40 ಲಕ್ಷ ಮೊತ್ತದಷ್ಟು ಸಮಾಪನ ನಷ್ಟದ ವಸೂಲಾತಿಯು ಬಾಕಿಯಿರುವುದು;

- ಗುತ್ತಿಗೆಯನ್ನು ರದ್ದುಗೊಳಿಸಿದ/ಮುಕ್ತಾಯಗೊಳಿಸಿದ ನಂತರ ಗುವಿಸಕಂಯು, ಗುತ್ತಿಗೆದಾರರು ಸರಬರಾಜು ಮಾಡಿದ್ದ ಹಾಗೂ ಗುತ್ತಿಗೆದಾರರ ಸುಪರ್ದಿನಲ್ಲಿ ಇರಿಸಲಾಗಿದ್ದ ಸಾಮಗ್ರಿಗಳ ದಾಸ್ತಾನುಗಳನ್ನು (ಬಳಕೆದಾರರ ಮೀಟರುಗಳು, ಕಂಡಕ್ಟರುಗಳು, ಕಂಬಗಳು, ಇತ್ಯಾದಿ) ಪರಿಶೀಲಿಸಿತು ಹಾಗೂ ಸರಕುಸಾಮಗ್ರಿಗಳ ಕೊರತೆಯನ್ನು/ಕಡಿಮೆ ಇರುವುದನ್ನು ಗಮನಿಸಿತು. ಗುವಿಸಕಂಯು ಸರಕುಸಾಮಗ್ರಿಗಳ ಕೊರತೆಯ ಬಗ್ಗೆ ನೀಡಿದ ನೋಟೀಸಿಗೆ (ಮೇ 2019) ಗುತ್ತಿಗೆದಾರರು ಪ್ರತಿಕ್ರಿಯೆ ನೀಡಲಿಲ್ಲವಾದ್ದರಿಂದ, ಗುವಿಸಕಂಯು ಸರಕುಸಾಮಗ್ರಿಗಳ ಕೊರತೆಯ ಕಡೆಗೆ ₹ 4.27 ಕೋಟಿ ಮೊತ್ತವನ್ನು ಗುತ್ತಿಗೆದಾರರಿಂದ ವಸೂಲಾತಿ ಮಾಡುವ ಸಲುವಾಗಿ ಮಧ್ಯಸ್ಥಿಕೆದಾರರ ಮುಂದೆ ಮನವಿ ಸಲ್ಲಿಸಿತು, ಅಲ್ಲಿ ಗುವಿಸಕಂಯ ಪರವಾಗಿ ಆದೇಶವನ್ನು ಜಾರಿಗೊಳಿಸಲಾಗಿದ್ದಿತು (ಮೇ 2020). ಆದಾಗ್ಯೂ, ಯಾವುದೇ ಭದ್ರತೆಯ ಅನುಪಸ್ಥಿತಿಯಲ್ಲಿ ಈ ಮೊತ್ತದ ವಸೂಲಾತಿಯು ಅನುಮಾನಾಸ್ಪದವಾಗಿರುತ್ತದೆ. ಗುತ್ತಿಗೆ ಷರತ್ತು ಗುತ್ತಿಗೆದಾರರ ಸುಪರ್ದಿನಲ್ಲಿ ಇರಿಸಲಾಗಿದ್ದ ಸರಕುಸಾಮಗ್ರಿಗಳ ಸುಭದ್ರತೆಗಾಗಿ ಯಾವುದೇ ಷರತ್ತನ್ನೂ ಒಳಗೊಂಡಿರಲಿಲ್ಲ, ಅಂತಹ ಸರಕುಸಾಮಗ್ರಿಗಳ ಪ್ರತಿಯಾಗಿ ಗುತ್ತಿಗೆದಾರರಿಗೆ ಮುಂಗಡ ಪಾವತಿಯನ್ನು ಮಾಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಯಾವ ಸರಕುಸಾಮಗ್ರಿಗಳ ಪ್ರತಿಯಾಗಿ ಗುವಿಸಕಂಯು ಗುತ್ತಿಗೆದಾರರಿಗೆ ₹ 4.36 ಕೋಟಿ ಮೊತ್ತದಷ್ಟು ಮುಂಗಡವನ್ನು ಪಾವತಿಸಲಾಗಿದ್ದಿತೋ ಅಂತಹ ಸರಕುಸಾಮಗ್ರಿಗಳ ಸುಭದ್ರತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ವಿಫಲವಾಗಿದ್ದಿತು. ಅಲ್ಲದೆಯೇ ಗುವಿಸಕಂಯು ಮೂಲಸೌಕರ್ಯ ಕಾಮಗಾರಿಗಳನ್ನು ಕಾರ್ಯಗತಗೊಳಿಸದಿದ್ದ ಕಾರಣ ಯೋಜನೆಯ ಅಡಿಯಲ್ಲಿ ಅರ್ಹತೆಯಿದ್ದಂತಹ ₹ 2.88 ಕೋಟಿ ಮೊತ್ತದಷ್ಟು ಬಂಡವಾಳ ಸಹಾಯಧನವನ್ನು ಪಡೆದುಕೊಳ್ಳುವ ಅವಕಾಶವನ್ನು ಕಳೆದುಕೊಂಡಿದ್ದಿತು.

ಅಲ್ಲದೆಯೇ, ಮಾರ್ಚ್ 2017ರ ವೇಳೆಗೆ ಪೂರ್ಣಗೊಳಿಸಬೇಕಿದ್ದ ಬಡತನ ರೇಖೆಗಿಂತ ಕೆಳಗಿರುವ ಬಾಕಿ ಕುಟುಂಬಗಳಿಗೆ (25,171 ಸಂಖ್ಯೆಗಳು) ವಿದ್ಯುತೀಕರಣ ವ್ಯವಸ್ಥೆಯನ್ನು ಡಿಡಿಯುಜಿಜೆವೈ/ಸೌಭಾಗ್ಯ ಯೋಜನೆಗಳ ಅಡಿಯಲ್ಲಿ ಮಾರ್ಚ್ 2020ರಲ್ಲಿ ಪೂರ್ಣಗೊಳಿಸಲಾಯಿತು, ಅದರಿಂದಾಗಿ ಅರ್ಹ ಕುಟುಂಬಗಳಿಗೆ ಯೋಜನೆಯ ಪ್ರಯೋಜನಗಳನ್ನು ಮುಂದೂಡುವಂತಾಯಿತು. ತತ್ಪರಿಣಾಮವಾಗಿ, ಗುವಿಸಕಂಯು ರಾಜೀವ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆ ಅಡಿಯಲ್ಲಿನ ಶೇಕಡಾ 90ಕ್ಕೆ ಪ್ರತಿಯಾಗಿ ಡಿಡಿಯುಜಿಜೆವೈ ಅಡಿಯಲ್ಲಿ ಶೇಕಡಾ 60ರಷ್ಟು ಸಹಾಯಧನಕ್ಕೆ ಅರ್ಹತೆಯನ್ನು ಹೊಂದಿದ್ದಿತಾದ್ದರಿಂದ, ಡಿಡಿಯುಜಿಜೆವೈ ಅಡಿಯಲ್ಲಿ 25,171 ಕುಟುಂಬಗಳ ವಿದ್ಯುತೀಕರಣದ ಮೇಲೆ ₹ 3.32 ಕೋಟಿ ಮೊತ್ತದಷ್ಟು ಸಹಾಯಧನವನ್ನು ಕಳೆದುಕೊಂಡಿತು. (26,518 ಕುಟುಂಬಗಳಿಗೆ ಅರ್ಹತೆ ಇದ್ದ ಸಹಾಯಧನ ₹ 10.99 ಕೋಟಿ) ಇದರಿಂದ ಡಿಡಿಯುಜಿಜೆವೈ ಅಡಿಯಲ್ಲಿ ಅರ್ಹತೆಯಿದ್ದ ₹ 7.33 ಕೋಟಿ ಮೊತ್ತವನ್ನು ಕಳೆದು, ಪುನ: ಇದರಿಂದ 1,347 ಕುಟುಂಬಗಳಿಗೆ ಸ್ವೀಕರಿಸಿದ ಸಹಾಯಧನ ₹ 0.34 ಕೋಟಿ ಮೊತ್ತವನ್ನು ಕಳೆದು). ಅಲ್ಲದೆಯೇ, ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತವು (ಆರ್‌ಇಸಿ) ಕಾರ್ಯನಿರ್ವಹಣಾ ಖಾತರಿ ಹಾಗೂ ಸಮಾಪನ ನಷ್ಟಗಳ ಮೊತ್ತ ₹ 1.90 ಕೋಟಿಯನ್ನು ಯೋಜನಾ ಖಾತೆಯಲ್ಲಿನ ಸ್ವೀಕೃತಿಗಳು ಎಂಬುದಾಗಿ ಪರಿಗಣಿಸಿ ಸಹಾಯಧನ ಪಾವತಿಯಿಂದ ಕಡಿದುಕೊಂಡಿದ್ದಿತಾದ್ದರಿಂದ ಗುವಿಸಕಂಯು ಕಾರ್ಯನಿರ್ವಹಣಾ ಖಾತರಿ ಹಾಗೂ ಸಮಾಪನ ನಷ್ಟಗಳ ಮೊತ್ತಗಳನ್ನೂ ಸಹ ಉಳಿಸಿಕೊಳ್ಳಲಾಗಲಿಲ್ಲ.

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಮೇಲಿನ ಅಂಶಗಳಿಗೆ ಸರ್ಕಾರವು ಉತ್ತರವನ್ನು ನೀಡಿರುವುದಿಲ್ಲ.

## ವಿಕೇಂದ್ರೀಕೃತ ವಿತರಿಸಲ್ಪಟ್ಟಿರುವ ವಿದ್ಯುತ್ ಉತ್ಪಾದನೆ (ಡಿಡಿಜಿ) ಅಡಿಯಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ್ದು

**3.12.** ಮೂರು ಗುತ್ತಿಗೆಗಳನ್ನು ಪ್ರಮಾಣಕಗಳನ್ನು ಉಲ್ಲಂಘಿಸಿ ಅನರ್ಹ ಸಂಸ್ಥೆಗಳಿಗೆ ನೀಡಲಾಗಿದ್ದಿತು, ನಿಗದಿತ ದಿನಾಂಕದಿಂದ (ಆಗಸ್ಟ್ 2016) ಐದು ವರ್ಷಗಳು ಕಳೆದನಂತರ 416 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ನೀಡಿದ್ದುದು, ಕಾಮಗಾರಿಯನ್ನು ನಿಗದಿತ ದಿನಾಂಕದ ಒಳಗೆ ಪೂರ್ಣಗೊಳಿಸುವಲ್ಲಿ ತಪ್ಪಿತಸ್ಥರಾಗಿದ್ದ ಗುತ್ತಿಗೆದಾರರಿಗೆ ₹ 69.90 ಲಕ್ಷ ಮೊತ್ತದಷ್ಟು ಸಮಾಪನ ನಷ್ಟಗಳನ್ನು ವಿಧಿಸದಿದ್ದುದು, ಇವುಗಳನ್ನು ***ಕಂಡಿಕೆಗಳು 3.12.1ರಿಂದ 3.12.3ರಲ್ಲಿ*** ವಿವರಿಸಿರುವಂತೆ ಲೆಕ್ಕಪರಿಶೋಧನೆಯು ಗಮನಿಸಿತು.

### ಅನರ್ಹ ಸಂಸ್ಥೆಗೆ ಗುತ್ತಿಗೆ ನೀಡಿಕೆ

**3.12.1.** ಅನುಮೋದನೆಯ ಅನುಸಾರ, ಮೂರು ಜಿಲ್ಲೆಗಳಲ್ಲಿ ಅವೆಂದರೆ ಮಡಿಕೇರಿ, ಮೈಸೂರು ಮತ್ತು ಚಾಮರಾಜನಗರದಲ್ಲಿ, ಕೇಂದ್ರೀಕೃತ ವಿತರಿಸಲ್ಪಟ್ಟಿರುವ ವಿದ್ಯುತ್ ಉತ್ಪಾದನೆ (ಡಿಡಿಜಿ) ಅಡಿಯಲ್ಲಿ 30 ವಸತಿ ಪ್ರದೇಶಗಳಲ್ಲಿ, 1,443 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ 25 ಮಿನಿ ಗ್ರಿಡ್ ಯೋಜನೆಗಳ ಮೂಲಕ ₹ 19.62 ಕೋಟಿ ಮೊತ್ತದಷ್ಟು ಒಟ್ಟಾರೆ ವೆಚ್ಚದಲ್ಲಿ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸಬೇಕಿದ್ದಿತು.

ಗುತ್ತಿಗೆಗಳನ್ನು ನೀಡುವ ಉದ್ದೇಶಕ್ಕಾಗಿ, ಚಾವಿಸನಿಯು 25 ಮಿನಿ ಗ್ರಿಡ್ ಯೋಜನೆಗಳನ್ನು ನಾಲ್ಕು ಪ್ಯಾಕೇಜುಗಳನ್ನಾಗಿ[45]. ವಿಭಜಿಸಿತು. ನೀಡಲಾಗಿದ್ದ ಗುತ್ತಿಗೆಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 3.10: ಕೇಂದ್ರೀಕೃತ ವಿತರಿಸಲ್ಪಟ್ಟಿರುವ ವಿದ್ಯುತ್ ಉತ್ಪಾದನೆ (ಡಿಡಿಜಿ) ಅಡಿಯಲ್ಲಿ ಚಾವಿಸನಿಯಿಂದ ನೀಡಲ್ಪಟ್ಟಿದ್ದ ಗುತ್ತಿಗೆಗಳ ವಿವರಗಳು**

| ಕ್ರಮ ಸಂಖ್ಯೆ | ಪ್ಯಾಕೇಜು / ಜಿಲ್ಲೆ | ಸಂಸ್ಥೆ | ನೀಡಿಕೆ ದಿನಾಂಕ | ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ | ಗುತ್ತಿಗೆ ಮೌಲ್ಯ (₹ ಕೋಟಿಯಲ್ಲಿ) |
|---|---|---|---|---|---|
| 1 | ಪ್ಯಾಕೇಜು–1, ಮಡಿಕೇರಿ | ಮೆ. ನವಿಯಾ ಟೆಕ್ನಾಲಜೀಸ್ | ಆಗಸ್ಟ್ 2015 | 357 | 5.21 |
| 2 | ಪ್ಯಾಕೇಜು–2, ಮೈಸೂರು | ಮೆ. ಸನ್ ಎಡಿಸನ್ ಸೋಲಾರ್ ಪವರ್ ಇಂಡಿಯಾ ಪ್ರೈ ಲಿ | ಜನವರಿ 2016 | 480 | 6.20 |
| 3 | ಪ್ಯಾಕೇಜು–3 ಮತ್ತು 4, ಚಾಮರಾಜನಗರ | ಮೆ. ನವಿಯಾ ಟೆಕ್ನಾಲಜೀಸ್ | ಆಗಸ್ಟ್ 2015 | 702 | 9.33 |

**(ಮೂಲ: ಆಶಯ ಪತ್ರಗಳು /ಸವಿವರ ಕಾಮಗಾರಿ ನೀಡಿಕೆ ಆದೇಶಗಳು)**

- ಅಕ್ಟೋಬರ್ 2013/ಡಿಸೆಂಬರ್ 2013/ಮೇ 2014ರಲ್ಲಿ ಆಹ್ವಾನಿಸಲಾಗಿದ್ದ ಮೊದಲ ಮೂರು ಟೆಂಡರುಗಳನ್ನು ಪ್ರತಿಕ್ರಿಯೆಯ ಕೊರತೆ/ಅಧಿಕ ದರಗಳಲ್ಲಿ ಘೋಷಿಸಲಾಗಿದ್ದ ದರಗಳ ಕಾರಣ ರದ್ದುಗೊಳಿಸಲಾಗಿದ್ದಿತು. ಮಿನಿ ಗ್ರಿಡ್ ಮೂಲಕ 1,539 ಬಡತನ ರೇಖೆಗಿಂತ ಕೆಳಗೆ ಇರುವಂತಹ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸುವ ಸಲುವಾಗಿ ₹ 20.74 ಕೋಟಿ[46] ಮೊತ್ತದಷ್ಟು ಒಟ್ಟಾರೆ ಗುತ್ತಿಗೆ ದರಗಳಲ್ಲಿ ನಾಲ್ಕನೇ ಆಹ್ವಾನದಲ್ಲಿ ಗುತ್ತಿಗೆಗಳನ್ನು ನೀಡಲಾಗಿದ್ದಿತು (ಆಶಯ ಪತ್ರ/ಕಾಮಗಾರಿ ನೀಡಿಕೆ ಆದೇಶ ದಿನಾಂಕ ಆಗಸ್ಟ್ 2015–ಪ್ಯಾಕೇಜು 1,3,4/ಜನವರಿ 2016–ಪ್ಯಾಕೇಜು–2). ಕಾಮಗಾರಿಗಳು ಪೂರ್ಣಗೊಳ್ಳಲು ನಿರ್ದಿಷ್ಟಪಡಿಸಲಾಗಿದ್ದ ಅವಧಿಯು ಎಂಟು ತಿಂಗಳುಗಳಾಗಿದ್ದಿತು. ಪ್ಯಾಕೇಜು–1,3 ಮತ್ತು 4ಕ್ಕಾಗಿ ಗುತ್ತಿಗೆಗಳನ್ನು ಮೆ. ನವಿಯಾ ಟೆಕ್ನಾಲಜೀಸ್, ಇವರಿಗೆ ನೀಡಲಾಗಿದ್ದಿತಾದಲ್ಲಿ ಪ್ಯಾಕೇಜು–2ಕ್ಕೆ ಗುತ್ತಿಗೆಯನ್ನು ಮೆ. ಸನ್ ಎಡಿಸನ್ ಸೋಲಾರ್ ಪವರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಇವರಿಗೆ ನೀಡಲಾಗಿದ್ದಿತು.

ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

---

[45] ಪ್ಯಾಕೇಜು–1: ಮಡಿಕೇರಿ; ಪ್ಯಾಕೇಜು–2: ಮೈಸೂರು; ಪ್ಯಾಕೇಜು–3 ಮತ್ತು 4: ಚಾಮರಾಜನಗರ.

[46] ಪ್ಯಾಕೇಜು–1: ₹ 5.21 ಕೋಟಿ; ಪ್ಯಾಕೇಜು –2: ₹ 6.20 ಕೋಟಿ; ಪ್ಯಾಕೇಜು –3: ₹ 2.69 ಕೋಟಿ; ಪ್ಯಾಕೇಜು –4: ₹ 6.64 ಕೋಟಿ.

- ನೀಡಲಾಗಿದ್ದ ದರಗಳು ನಾಲ್ಕು ಪ್ಯಾಕೇಜುಗಳಿಗೆ ಟೆಂಡರಿಗೆ ಇಡಲಾಗಿದ್ದ ಮೊತ್ತಕ್ಕಿಂತ ಅನುಕ್ರಮವಾಗಿ ಶೇಕಡಾ 71.03ರಷ್ಟು, ಶೇಕಡಾ 70.57ರಷ್ಟು, 160.56ರಷ್ಟು ಹಾಗೂ ಶೇಕಡಾ 71.54ರಷ್ಟು ಅಧಿಕವಾಗಿದ್ದವು. ದರಗಳು ವಿಪರೀತವಾಗಿ ಅಧಿಕ ಪ್ರಮಾಣದಲ್ಲಿದ್ದವು;

- ಪ್ಯಾಕೇಜು–1,2,3 ಮತ್ತು 4ಕ್ಕಾಗಿ ನೀಡಲಾಗಿದ್ದ ಗುತ್ತಿಗೆಗಳಿಗೆ ಸಂಬಂಧಿಸಿದಂತೆ, ಟೆಂಡರಿನಲ್ಲಿ ಬಾಗವಹಿಸಿದ್ದ ಇಬ್ಬರು ಸವಾಲುದಾರರುಗಳು (ಮೆ. ನವಿಯಾ ಟೆಕ್ನಾಲಜೀಸ್ ಮತ್ತು ಮೆ. ಸನ್ ಎಡಿಸನ್ ಸೋಲಾರ್ ಪವರ್ ಇಂಡಿಯಾ ಪ್ರೈ ಲಿ) ಗುತ್ತಿಗೆಗಳ ವಿಶೇಷ ಷರತ್ತುಗಳ (ಸಂಪುಟ – Iಎ) ಅನುಸಾರ ಕೆಲವು ದಾಖಲೆಗಳನ್ನು ಅಂದರೆ ಕಾಮಗಾರಿಗಳನ್ನು ಮುನ್ನಡೆಸಿಕೊಂಡು ಹೋಗುವುದಕ್ಕಾಗಿ ಅಂತಹುದೇ ಕಾಮಗಾರಿಗಳಲ್ಲಿ ಮುಖ್ಯ ಪಾಲುದಾರನ ಕನಿಷ್ಠ ತಾಂತ್ರಿಕ ಅನುಭವ, ಮುಖ್ಯ ಪಾಲುದಾರ ಮತ್ತು ಪಾಲುದಾರನ ಐದು ವರ್ಷಗಳ ವಾರ್ಷಿಕ ವರದಿಗಳು ಮತ್ತು ಲೆಕ್ಕಪರಿಶೋಧಿತ ಲೆಕ್ಕಪತ್ರಗಳ ಪಟ್ಟಿ, ಮುಖ್ಯ ಪಾಲುದಾರನ ಇದೀಗ ಕಾರ್ಯಗತಗೊಳಿಸುತ್ತಿರುವ ಕಾಮಗಾರಿ, ಲಭ್ಯವಿರುವ ಸಾಲದ ಅನುಕೂಲತೆಗಳಿಗೆ ಸಾಕ್ಷಾಧಾರಗಳು, ಹಾಗೂ ತಯಾರಕರ ಜೊತೆಯಲ್ಲಿ ಸವಾಲುದಾರರ ಜಂಟಿ ಹೇಳಿಕೆ/ಪ್ರಮಾಣಪತ್ರ, ಇತ್ಯಾದಿಗಳನ್ನು ಸಲ್ಲಿಸಿರಲಿಲ್ಲ. ಆದಾಗ್ಯೂ, ಮುಖ್ಯ ಇಂಜಿನಿಯರ್‌ರವರ ನೇತೃತ್ವದಲ್ಲಿದ್ದಂತಹ ತಾಂತ್ರಿಕ ಪರಿಶೀಲನಾ ಸಮಿತಿಯು (ಟಿಎಸ್‌ಸಿ) ಗುತ್ತಿಗೆದಾರರಿಗೆ ಸಮರ್ಪಕವಾದ ಅನುಭವವಿದ್ದಿತು ಹಾಗೂ ಅವರು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಆರ್ಥಿಕವಾಗಿ ಸಾಮರ್ಥ್ಯತೆಯಿಂದ ಕೂಡಿದ್ದರು ಹಾಗೂ ಅಲ್ಲದೆಯೇ ಟೆಂಡರನ್ನು ಒಂದು ವರ್ಷದವರೆಗೆ ಮುಂದೂಡಿಕೊಂಡು ಬರಲಾಗಿದ್ದಿತು ಎಂಬುದನ್ನು ಸಹ ದೃಷ್ಟಿಯಲ್ಲಿಟ್ಟುಕೊಂಡು ಸಂಸ್ಥೆಯು ಸಲ್ಲಿಸಿದ್ದ ದರ ಸವಾಲನ್ನು ತೆರೆಯಲು ಅನುಮೋದನೆ ನೀಡಿತು (ಜನವರಿ 2015). ಅದರಂತೆಯೇ, ಗುತ್ತಿಗೆಗಳನ್ನು ಮೆ. ನವಿಯಾ ಟೆಕ್ನಾಲಜೀಸ್ ಮತ್ತು ಮೆ. ಸನ್ ಎಡಿಸನ್ ಸೋಲಾರ್ ಪವರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಇವರುಗಳಿಗೆ ನೀಡಲಾಗಿದ್ದಿತು;

  ಸವಾಲು ಷರತ್ತುಗಳ ಪ್ರಮುಖ ಅಗತ್ಯತೆಗಳನ್ನು ಪೂರೈಸಿರಲಿಲ್ಲವಾದ್ದರಿಂದ ಸವಾಲುದಾರರು ಪ್ರತಿಕ್ರಿಯೆಯಿಂದ ಕೂಡಿರುತ್ತಾರೆ ಎಂಬುದಾಗಿ ಯಾವ ಕಾರಣದಿಂದ ಮಾಡಲಾಯಿತು ಎಂಬುದನ್ನು ಸಮರ್ಥಿಸಿಕೊಂಡಿರಲಿಲ್ಲ ಹಾಗೂ ಈ ಕ್ರಮವು ಟೆಂಡರಿನ ಉದ್ದೇಶವನ್ನೇ ನಿರಾಕರಿಸಿದ್ದಿತು. ಅಲ್ಲದೆಯೇ, ಸಮರ್ಪಕ ಪ್ರತಿಕ್ರಿಯೆ ಇಲ್ಲದ ಸವಾಲುದಾರರಿಗೆ ಕಾಮಗಾರಿಯನ್ನು ನೀಡುವುದು ಕರ್ನಾಟಕ ಸಾರ್ವಜನಿಕ ಖರೀದಿಗಳಲ್ಲಿ/ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ನಿಯಮಗಳ ಉಲ್ಲಂಘನೆಯಾಗಿದ್ದಿತು. ಈ ನಿರ್ಣಯಕ್ಕೆ ನಿರ್ದೇಶಕರುಗಳ ಮಂಡಳಿಯು ಸೆಪ್ಟಂಬರ್ 2015ರಲ್ಲಿ ಘಟನೋತ್ತರ ಅನುಮೋದನೆಯನ್ನು ನೀಡಿದ್ದಿತು;

- ಗುತ್ತಿಗೆದಾರರು ಯಾವುದೇ ಪ್ರಗತಿಯನ್ನು ತೋರಿಸಲು ವಿಫಲಗೊಂಡಿದ್ದರಿಂದ, ಮೆ. ಸನ್ ಎಡಿಸನ್ ಸೋಲಾರ್ ಪವರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಇವರ ಗುತ್ತಿಗೆಯನ್ನು ಅಕ್ಟೋಬರ್ 2017ರಲ್ಲಿ ರದ್ದುಗೊಳಿಸಲಾಯಿತು, ಇದು ಸಂಸ್ಥೆಯನ್ನು ಅರ್ಹವಾಗಿಸಿದ್ದ ವಾಸ್ತವಾಂಶಗಳ (ಸಮರ್ಪಕ ಅನುಭವ ಮತ್ತು ಆರ್ಥಿಕವಾಗಿ ಸಾಮರ್ಥ್ಯತೆ) ಬೆಂಬಲದಿಂದ ಕೂಡಿರಲಿಲ್ಲ ಎಂಬುದನ್ನು ಸೂಚಿಸುತ್ತಿದ್ದಿತು. ಚಾವಿಸನಿಯು ಕೂಡ ಮಾರಾಟಗಾರರು, ವಿನ್ಯಾಸ/ರೂಪುರೇಖೆಗಳಿಗೆ ಅನುಮೋದನೆ ಹಾಗೂ ಚಾವಿಸನಿಯ ಸಹಯೋಗದೊಂದಿಗೆ ಅರಣ್ಯ ಇಲಾಖೆಯಿಂದ ಅನುಮತಿ, ಇತ್ಯಾದಿಗಳ ಬಗ್ಗೆ ಅಂತಿಮ ತೀರ್ಮಾನಕ್ಕೆ ಬರುವ ಸಲುವಾಗಿ, ಪುನಃಪುನಃ ಕೋರಿಕೆಗಳನ್ನು ಮಾಡಿದ್ದಾಗ್ಯೂ, ಸಂಸ್ಥೆಯು ಪ್ರತಿಕ್ರಿಯೆ ನೀಡಿರುವುದಿಲ್ಲ ಎಂಬುದನ್ನು ಗಮನಕ್ಕೆ ತೆಗೆದುಕೊಂಡಿದ್ದಿತು (ಜುಲೈ 2016).

ಈ ರೀತಿಯಾಗಿ, ತಾಂತ್ರಿಕವಾಗಿ ಪ್ರತಿಕ್ರಿಯೆಯನ್ನು ಹೊಂದಿರದ ಸಂಸ್ಥೆಗೆ ಗುತ್ತಿಗೆಯನ್ನು ನೀಡಿದ ತಾಂತ್ರಿಕ ಪರಿಶೀಲನಾ ಸಮಿತಿಯ ಕ್ರಮವು ಕರ್ನಾಟಕ ಸಾರ್ವಜನಿಕ ಖರೀದಿಗಳಲ್ಲಿ ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ನಿಯಮಗಳ ಉಲ್ಲಂಘನೆಯಾಗಿದ್ದಿತು.

ಸಂಸ್ಥೆಯ ಆರ್ಥಿಕ ಸಾಮರ್ಥ್ಯ ಮತ್ತು ಕಾಮಗಾರಿಗಳ ಅನುಭವನ್ನು ಪರಿಗಣಿಸಿ ಟೆಂಡರು ಪರಿಶೀಲನಾ

ಸಮಿತಿಯು ಸಂಸ್ಥೆಯನ್ನು ಪ್ರತಿಕ್ರಿಯಾತ್ಮಕವನ್ನಾಗಿ ಮಾಡಿದ್ದಿತು ಎಂಬುದಾಗಿ ಸರ್ಕಾರವು ತನ್ನ ಉತ್ತರದಲ್ಲಿ ತಿಳಿಸಿತು (ನವಂಬರ್ 2021)

ತಾಂತ್ರಿಕ ಮೌಲ್ಯಮಾಪನದ ವೇಳೆಯಲ್ಲಿ ಸಂಸ್ಥೆಯು ಪ್ರತಿಕ್ರಿಯಾತ್ಮಕವಾಗಿರುವುದಿಲ್ಲ ಎಂಬುದಾಗಿ ಕಂಡುಬಂದಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿಲ್ಲ.

***ಅರಣ್ಯ ಇಲಾಖೆಯ ಅನುಮತಿಯು ಇರದಿದ್ದ ಕಾರಣ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸುವಲ್ಲಿ ವಿಪರೀತವಾದಂತಹ ವಿಳಂಬವಾದದ್ದು***

**3.12.2**. ಮೈಸೂರು ಜಿಲ್ಲೆಯಲ್ಲಿನ ಎಂಟು[47] ವಸತಿ ಪ್ರದೇಶಗಳಲ್ಲಿ 416 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಜುಲೈ 2021ರಲ್ಲಿಯಷ್ಟೇ ನಿಗದಿತ ದಿನಾಂಕದಿಂದ (ಆಗಸ್ಟ್ 2016) ಐದು ವರ್ಷಗಳು ಕಳೆದನಂತರ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸಲಾಗಿದ್ದಿತು.

ಮೇಲೆ ತಿಳಿಸಲಾದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ನೀಡುವ ಸಲುವಾಗಿ ಅರಣ್ಯ ಇಲಾಖೆಯ ಅನುಮತಿಯ ಅಗತ್ಯತೆಯಿದ್ದಿತು, ಅದಕ್ಕಾಗಿ ಚಾವಿಸನಿಯು ಅರಣ್ಯ ಅಧಿಕಾರಿಯವರಿಗೆ ಫೆಬ್ರವರಿ 2016ರಲ್ಲಿಯಷ್ಟೇ ಅರ್ಜಿಯನ್ನು ಸಲ್ಲಿಸಿತು ಹಾಗೂ ₹ 61.66 ಲಕ್ಷ ಮೊತ್ತದಷ್ಟು ಶುಲ್ಕಗಳನ್ನು ಜೂನ್/ಜುಲೈ 2018ರಲ್ಲಿ ಅಂದರೆ ಕಾಮಗಾರಿಗಳನ್ನು ನೀಡಿದ ದಿನಾಂಕದಿಂದ (ಜನವರಿ 2016) ಎರಡು ವರ್ಷಗಳ ನಂತರ ಪಾವತಿಸಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಗತ್ಯವಿದ್ದಂತಹ ಅರಣ್ಯ ಇಲಾಖೆಯ ಅನುಮತಿಯನ್ನು ಸಮಯೋಚಿತವಾಗಿ ಪಡೆದುಕೊಂಡಿರಲಿಲ್ಲ, ಇದರ ತತ್ಪರಿಣಾಮವಾಗಿ, ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿತ ದಿನಾಂಕ ಆಗಸ್ಟ್ 2016ರ ಪ್ರತಿಯಾಗಿ ಜುಲೈ 2021ರಲ್ಲಿ ಪೂರ್ಣಗೊಳಿಸಲಾಗಿದ್ದಿತು. ಇದು ಅರ್ಹ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಯೋಜನೆಯ ಪ್ರಯೋಜನಗಳನ್ನು ನೀಡುವಲ್ಲಿ ಐದು ವರ್ಷಗಳಷ್ಟು ಮುಂದೂಡುವಲ್ಲಿ ಪರಿಣಮಿಸಿದ್ದಿತು.

ಜನವರಿ 2018 ಮತ್ತು ಜೂನ್ 2020ರಲ್ಲಿ ನಡೆದಿದ್ದಂತಹ ಡಿಐಎಸ್‌ಎಚ್‌ಎ ಸಭೆಗಳಲ್ಲಿ ವಸತಿಪ್ರದೇಶಗಳಿಗೆ ವಿದ್ಯುತೀಕರಣ ಕಾಮಗಾರಿಗಳನ್ನು ತ್ವರಿತಗೊಳಿಸುವಂತೆ ಹಾಗೂ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ಅಡಚಣೆಗಳು ಯಾವುದಾದರೂ ಇದ್ದಲ್ಲಿ ವಿವರಿಸುವಂತೆ ನಿರ್ದಿಷ್ಟ ನಿರ್ದೇಶನಗಳನ್ನು ನೀಡಲಾಗಿದ್ದಿತು ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಅರಣ್ಯ ಇಲಾಖೆಯಿಂದ ಅನುಮತಿ ಪಡೆಯುವಲ್ಲಿನ ಅಡಚಣೆಗಳನ್ನು ಡಿಐಎಸ್‌ಎಚ್‌ಎ ಸಭೆಯ ಗಮನಕ್ಕೆ ತಂದಿರಲಿಲ್ಲ.

ಮಿನಿ ಗ್ರಿಡ್ ಮಾದರಿ ಮೂಲಕ ವಿದ್ಯುತೀಕರಣಕ್ಕಾಗಿ ಅರಣ್ಯ ಇಲಾಖೆಯ ಅನುಮತಿ ಪಡೆದುಕೊಂಡಿರಲಿಲ್ಲವಾದ್ದರಿಂದ ವಿಳಂಬವು ಸಂಭವಿಸಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವಂಬರ್ 2021). ಕಾಮಗಾರಿಗಳನ್ನು ಪ್ರತ್ಯೇಕ ಮಾದರಿ (ಸ್ಟ್ಯಾಂಡ್ ಅಲೋನ್ ಮೋಡ್) ಅಡಿಯಲ್ಲಿ ಪೂರ್ಣಗೊಳಿಸಲಾಗಿದ್ದಿತು.

ಅರಣ್ಯ ಇಲಾಖೆಯ ಅನುಮತಿ ಪಡೆಯುವಲ್ಲಿನ ವಿಳಂಬಕ್ಕೆ, ಡಿಐಎಸ್‌ಎಚ್‌ಎ ಸಭೆಯ ಗಮನಕ್ಕೆ ತರದಿರಲು ಕಾರಣಗಳು ಹಾಗೂ ಮಿನಿ ಗ್ರಿಡ್ ಮಾದರಿಗೆ ಅನುಮತಿ ನೀಡದ ಸಂದರ್ಭದಲ್ಲಿ ಪ್ರಾರಂಭಿಕವಾಗಿಯೇ ಪ್ರತ್ಯೇಕ ಮಾದರಿ (ಸ್ಟ್ಯಾಂಡ್ ಅಲೋನ್ ಮೋಡ್) ಮೂಲಕ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ನೀಡುವ ಆಯ್ಕೆಯನ್ನು ಕಂಡುಕೊಳ್ಳದಿರುವುದಕ್ಕೆ ನಿರ್ದಿಷ್ಟ ಕಾರಣಗಳ ಬಗ್ಗೆ ಉತ್ತರವು ಮೌನವಾಗಿದ್ದಿತು.

***₹ 69.90 ಲಕ್ಷ ಮೊತ್ತದಷ್ಟು ಸಮಾಪನ ನಷ್ಟಗಳನ್ನು ವಿಧಿಸದಿದ್ದುದು***

**3.12.3**. ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿನ ವಿಳಂಬಕ್ಕಾಗಿ ವಾರ ಒಂದಕ್ಕೆ ಶೇಕಡಾ 0.5ರ ದರದಲ್ಲಿ, ಗುತ್ತಿಗೆ ಮೌಲ್ಯದ ಶೇಕಡಾ 10ರ ಗರಿಷ್ಠ ಮೊತ್ತಕ್ಕೆ ಸೀಮಿತಗೊಳಿಸಿದಂತೆ ಸಮಾಪನ ನಷ್ಟಗಳ

[47] ಗೋಳೂರು ಹಾಡಿ, ಉಡ್ಬೂರುಕೆರೆ ಹಾಡಿ, ಆನೆಮಲ ಹಾಡಿ, ಬಲ್ಲೆ ಹಾಡಿ, ಮುಲ್ಲುಯೆರ್ ಹಾಡಿ, ಮಣಿಮೊಳೆ ಹಾಡಿ, ತಿಮ್ಮನಹೊಸಹಳ್ಳಿ ಹಾಗೂ ಬವಳ್ಳಿಗಡೆ ಹಾಡಿ.

ವಸೂಲಾತಿಗೆ ಅನುವು ಮಾಡಿರುತ್ತವೆ.

ಮಾರ್ಚ್ 2014ರಲ್ಲಿ, ಇಂಧನ ಮಂತ್ರಾಲಯವು ಎರಡು ಜಿಲ್ಲೆಗಳಲ್ಲಿ (ಮೈಸೂರು ಮತ್ತು ಚಾಮರಾಜನಗರ) 11 ವಸತಿಪ್ರದೇಶಗಳಲ್ಲಿ ಇನ್ನೂ 828 ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಪವನ–ಸೌರ ಸಮ್ಮಿಶ್ರಿತ ಯೋಜನೆಗಳು/ಪ್ರತ್ಯೇಕ ಸೌರ ವಿದ್ಯುತ್ ವ್ಯವಸ್ಥೆ ಮೂಲಕ ₹ 6.12 ಕೋಟಿ ವೆಚ್ಚದಲ್ಲಿ, ಒದಗಿಸುವ ಸಲುವಾಗಿ ಅನುಮೋದನೆ ನೀಡಿತು, ತದನಂತರದಲ್ಲಿ ವೆಚ್ಚವನ್ನು ₹ 4.14 ಕೋಟಿ ಮೊತ್ತಕ್ಕೆ ಪರಿಷ್ಕರಿಸಲಾಗಿದ್ದಿತು. ಗುತ್ತಿಗೆಯನ್ನು ಮೆ. ದೀಪಾ ಸೋಲಾರ್ ಸಿಸ್ಟಮ್ ಪ್ರೈ ಲಿ., ಇವರಿಗೆ ಪ್ರತ್ಯೇಕ ಸೌರ ವಿದ್ಯುತ್ ವ್ಯವಸ್ಥೆ ಮೂಲಕ ₹ 6.99 ಕೋಟಿ ಒಟ್ಟಾರೆ ಗುತ್ತಿಗೆ ಮೌಲ್ಯದಲ್ಲಿ 37 ಗ್ರಾಮಗಳು/ವಸತಿ ಪ್ರದೇಶಗಳಲ್ಲಿನ 1,233 (ಸಮೀಕ್ಷೆಯ ನಂತರ 1,093ಕ್ಕೆ ಪರಿಷ್ಕರಿಸಲಾಯಿತು) ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸುವ ಸಲುವಾಗಿ ನೀಡಲಾಯಿತು (ಜನವರಿ 2017). ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿತ ಅವಧಿಯು ನಾಲ್ಕು ತಿಂಗಳುಗಳಾಗಿದ್ದಿತು.

ಕಾಮಗಾರಿಗಳನ್ನು ನಿಗದಿತ ದಿನಾಂಕ ಮೇ 2017ಕ್ಕೆ ಪ್ರತಿಯಾಗಿ ನಾಲ್ಕು ವರ್ಷಗಳ ವಿಳಂಬದ ನಂತರ ಜನವರಿ 2021ರಲ್ಲಿ ಪೂರ್ಣಗೊಳಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ವಿಳಂಬಕ್ಕಾಗಿ ₹ 69.90 ಲಕ್ಷ ಮೊತ್ತದಷ್ಟು ಸಮಾಪನ ನಷ್ಟಗಳನ್ನು ಗುತ್ತಿಗೆ ಷರತ್ತುಗಳ ಅನುಸಾರ ಗುತ್ತಿಗೆದಾರರಿಗೆ ವಿಧಿಸಿರಲಿಲ್ಲ.

ಕೇಂದ್ರ ಖರೀದಿ ಸಮಿತಿಯು ಸವಿವರ ಪರಿಶೀಲನೆಯ ನಂತರ ಕಾಮಗಾರಿಗಳನ್ನು ಪೂರ್ಣಗೊಳಿಸಲು ದಂಡ ಪಾವತಿ ಇಲ್ಲದೆಯೇ ಫೆಬ್ರವರಿ 2021ರವರೆಗೆ ಯೋಜನೆಯನ್ನು ಪೂರ್ಣಗೊಳಿಸಲು ಅವಧಿಯನ್ನು ವಿಸ್ತರಿಸಿತು (ಜೂನ್ 2021) ಎಂಬುದಾಗಿ ಸರ್ಕಾರವು ಉತ್ತರಿಸಿತು (ನವಂಬರ್ 2021).

ಸಮಾಪನ ನಷ್ಟಗಳನ್ನು ಯಾವ ಕಾರಣಗಳ ಮೇರೆಗೆ ವಿಧಿಸಿರಲಿಲ್ಲ ಎಂಬುದರ ಬಗ್ಗೆ ಉತ್ತರವು ಮೌನವಾಗಿದ್ದಿತು.

## ನಿರ್ಣಯ

ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳಿಗೆ ಮೀಟರುಗಳನ್ನು ಅಳವಡಿಸುವ ಸಲುವಾಗಿ ₹ 62.87 ಕೋಟಿಯಷ್ಟು ಗಮನಾರ್ಹ ಮೊತ್ತವನ್ನು ಭರಿಸಿದ್ದಾಗ್ಯೂ ಸಮರ್ಪಕವಾದಂತಹ ವಿದ್ಯುತ್ ಲೆಕ್ಕವನ್ನಿಡುವಿಕೆಗಾಗಿ ಒಂದು ವ್ಯವಸ್ಥೆಯನ್ನು ಸ್ಥಾಪಿಸುವಲ್ಲಿ ವಿಸಕಂಗಳು ವಿಫಲಗೊಂಡಿದ್ದವು. ಉಪ–ಸ್ಟೇಷನ್ನುಗಳ ನಿರ್ಮಾಣಕ್ಕಾಗಿ ಅಗತ್ಯವಿದ್ದಂತಹ ಭೂಮಿಯ ಸಮಯೋಚಿತ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವಲ್ಲಿನ ವಿಫಲತೆಯಿಂದಾಗಿ ಹುವಿಸಕಂಯು ₹ 14.03 ಕೋಟಿ ಮೌಲ್ಯದ ವಿದ್ಯುತ್ ಉಳಿತಾಯಗಳನ್ನು ಕಳೆದುಕೊಂಡಿದ್ದಿತು. ಗುವಿಸಕಂಯು ಗುತ್ತಿಗೆದಾರರ ಸುಪರ್ದಿನಲ್ಲಿ ಇರಿಸಲಾಗಿದ್ದ ಸಾಮಗ್ರಿಗಳ ಸುಭದ್ರತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ವಿಫಲಗೊಂಡಿದ್ದಿತು, ಇದು ₹ 4.27 ಕೋಟಿ ಮೊತ್ತದಷ್ಟು, ಸಾಮಗ್ರಿಗಳ ಕೊರತೆಯುಂಟಾಗುವಲ್ಲಿ ಪರಿಣಮಿಸಿದ್ದಿತು. ಕರ್ನಾಟಕ ಸಾರ್ವಜನಿಕ ಖರೀದಿಗಳಲ್ಲಿ ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮದ ಅನುವುಗಳನ್ನು ಉಲ್ಲಂಘಿಸಿ ಅನರ್ಹ ಸಂಸ್ಥೆಗಳಿಗೆ ಒಟ್ಟಾರೆ ₹ 64.96 ಕೋಟಿ ಮೌಲ್ಯದ ಗುತ್ತಿಗೆಗಳನ್ನು ನೀಡಲಾಗಿದ್ದಿತು. ಗುತ್ತಿಗೆ ಷರತ್ತುಗಳ ಅನುಸಾರ ವಿಧಿಸಬೇಕಿದ್ದ ₹ 3 ಕೋಟಿ ಮೌಲ್ಯದ ಸಮಾಪನ ನಷ್ಟಗಳನ್ನು ವಿಧಿಸಿರಲಿಲ್ಲ. ಚಾವಿಸನಿ ಮತ್ತು ಗುವಿಸಕಂಯು ರಾಜೀವ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆ ಅಡಿಯಲ್ಲಿ ಮಂಜೂರಾಗಿದ್ದ ಕಾಮಗಾರಿಗಳನ್ನು ಪೂರ್ಣಗೊಳಿಸಿರಲಿಲ್ಲವಾದ್ದರಿಂದ ₹ 25.17 ಕೋಟಿ ಮೊತ್ತದಷ್ಟು ಬಂಡವಾಳ ಸಹಾಯಧನ/ಅನುದಾನಗಳನ್ನು ಕಳೆದುಕೊಂಡಿದ್ದವು. ಕಡ್ಡಾಯ ಪರೀಕ್ಷಣೆಗಳನ್ನು ಮನ್ನಾ ಮಾಡುವ ಮೂಲಕ ಹಾಗೂ ಅಧಿಕೃತ ಅನುಮೋದನೆ ಹೊಂದಿರದ ಮಾರಾಟಗಾರರುಗಳಿಂದ ₹ 31.80 ಕೋಟಿ ಮೌಲ್ಯದಷ್ಟು ಸಾಮಗ್ರಿಗಳನ್ನು ಖರೀದಿಸುವ ಮೂಲಕ ಕಾಮಗಾರಿಗಳಲ್ಲಿ ಉಪಯೋಗಿಸಲಾಗಿದ್ದ ಸಾಮಗ್ರಿಗಳ ಗುಣಮಟ್ಟದೊಂದಿಗೆ ಸಂಧಾನ ಮಾಡಿಕೊಳ್ಳಲಾಗಿದ್ದಿತು. ಮಂವಿಸಕಂ ಆಡಳಿತ ವ್ಯಾಪ್ತಿಯಲ್ಲಿನ ಎರಡು ಜಿಲ್ಲೆಗಳಲ್ಲಿ (ಶಿವಮೊಗ್ಗ ಮತ್ತು ಚಿಕ್ಕಮಗಳೂರು) ಫೀಡರುಗಳ ಪ್ರತ್ಯೇಕಗೊಳಿಸುವಿಕೆಗಾಗಿ ಅಗತ್ಯವಿದ್ದಂತಹ ಶಾಸನಬದ್ಧ ಅನುಮತಿಗಳನ್ನು

ಖಚಿತಪಡಿಸಿಕೊಳ್ಳದಿದ್ದ ಕಾರಣ 204 ಗ್ರಾಮಗಳಿಗೆ ಮೂರು ವರ್ಷಗಳಿಗೂ ಮೀರಿದಂತೆ 24 × 7 ವಿದ್ಯುತ್ ಸರಬರಾಜಿನಿಂದ ವಂಚಿಸಲಾಗಿದ್ದಿತು.

**ಶಿಫಾರಸುಗಳು**

ವಿಸಕಂಗಳು ಈ ಕೆಳಗಿನವುಗಳನ್ನು ಖಚಿತಪಡಿಸಿಕೊಳ್ಳತಕ್ಕದ್ದು:

- **ಕರ್ನಾಟಕ ಸಾರ್ವಜನಿಕ ಖರೀದಿಗಳಲ್ಲಿ ಮತ್ತು ಸೇವೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಮತ್ತು ಕರ್ನಾಟಕ ಸಾರ್ವಜನಿಕ ಖರೀದಿಗಳಲ್ಲಿ ಮತ್ತು ಸೇವೆಗಳಲ್ಲಿ ಪಾರದರ್ಶಕತೆ ನಿಯಮಗಳ ಅನುವುಗಳನ್ನು ತಕ್ಕುದಾದ ರೀತಿಯಲ್ಲಿ ಅನುಸರಿಸುವ ಮೂಲಕ ಟೆಂಡರುಗಳನ್ನು ಆಹ್ವಾನಿಸಿದ ನಂತರ ಅರ್ಹ ಸಂಸ್ಥೆಗಳಿಗೆ ಗುತ್ತಿಗೆಗಳನ್ನು ನೀಡುವುದು;**

- **ಸಮರ್ಪಕವಾದ ರೀತಿಯಲ್ಲಿ ವಿದ್ಯುತ್ತಿನ ಲೆಕ್ಕವನ್ನಿಡುವಿಕೆ ಹಾಗೂ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳನ್ನು ತಗ್ಗಿಸುವ ಸಲುವಾಗಿ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವ ರೀತಿಯಲ್ಲಿ ಕರ್ನಾಟಕ ವಿದ್ಯುತ್ ವಿತರಣಾ ಸಂಹಿತೆಯನ್ನು ಅನುಸರಿಸಿ ಮೀಟರುಗಳನ್ನು ಅಳವಡಿಸಲಾಗಿರುವ ಎಲ್ಲಾ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳ ವಿದ್ಯುತ್ ಲೆಕ್ಕಪರಿಶೋಧನೆ ನಡೆಸುವುದು; ಹಾಗೂ**

- **ಸಾಮಗ್ರಿಗಳನ್ನು ಅಧಿಕೃತವಾಗಿ ಅನುಮೋದಿತ ಮಾರಾಟಗಾರರುಗಳಿಂದ ಖರೀದಿಸುವ ಮೂಲಕ ಹಾಗೂ ಪ್ರಮಾಣಕ ಸವಾಲು ದಾಖಲೆಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕಡ್ಡಾಯ ಗುಣಮಟ್ಟ ಪರೀಕ್ಷಣೆಗಳನ್ನು ಮಾಡುವ ಮೂಲಕ ಕಾಮಗಾರಿಗಳಲ್ಲಿ ಉಪಯೋಗಿಸಲಾಗುವ ಸಾಮಗ್ರಿಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವುದು.**